UNIVERSAL LIBRARY
OU_198959
UNIVERSAL LIBRARY

# VACHANA KADAMBARI

# ಕನ್ನಡ ವಚನ ಕಾದಂಬರಿ

Edited by

M. A. RAMANUJA IYENGAR

Cover Printed at the G.T A. Press.

OUP—881—5-8-74—15,000

OSMANIA UNIVERSITY LIBRARY

Call No. K83/N46K Accession No. Pu. K 225

Author [illegible]

Title [illegible] 1923

This book should be returned on or before the date last marked below.

# COPYRIGHT

First Edition 1901; Secound Edition 1923.

Registered according to Act XXV of 1867

All rights reserved by the publisher.

ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಪ್ರಚಾರಕರಿಗೆ ಸೇರಿದೆ. ಇದಕ್ಕೆ ಮೈಸೂರು ಮತ್ತು ಹೊರದೇಶಗಳ ಕಾಪಿರೈಟ್ (copyright) ತೆಗೆಯಲ್ಪಟ್ಟಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಸಂಗ್ರಹಿಸುವುದಕ್ಕೂ, ವಿಸ್ತರಿಸುವುದಕ್ಕೂ ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ, ಬೇರೊಬ್ಬರಿಗೂ ಅಧಿಕಾರವಿರುವುದಿಲ್ಲ. ಈ ಪುಸ್ತಕದೊಳಗಿರುವ ಭಾವಗಳನ್ನಾಗಲಿ, ಪದಗಳನ್ನಾಗಲಿ ಇತರರು ಕಾಪಿಮಾಡಿದ್ದಲ್ಲಿ ಅವರು ಕಾಪಿರೈಟನ್ನು ಉಲ್ಲಂಘಿಸಿದಂತಾಗುವುದು. ಅಂಥವರು ಹಾಗೆ ಮಾಡುವುದರಿಂದುಂಟಾಗುವ ನಷ್ಟಕ್ಕೆಲ್ಲಾ ಗುರಿಯಾಗುವರು.

# ಪ್ರಥಮ ಮುದ್ರಣದ ಪೀಠಿಕೆ

ಈ ಗ್ರಂಥಕ್ಕೆ "ಕಾದಂಬರೀ ವ್ಯಾಖ್ಯಾನ" ಎಂಬ ಹೆಸರೂ ಇರುವಂತೆ ತೋರುತ್ತದೆ. ಇದರ ಗ್ರಂಥಕರ್ತನು ಯಾರೋ ತಿಳಿಯದು. ಈ ಗ್ರಂಥದ ಒಂದು ಕೈಬರಹದ ಪ್ರತಿಯು ಮದರಾಸು, ಗೌವರ್ನಮೆಂಟು ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರೆರಿ ಯೆಂಬ ಸರ್ಕಾರದ ಪುಸ್ತಕ ಬಂಡಾರದಲ್ಲಿಯೂ ಇತ್ತು. ಈ ಬಂಡಾರವು ಸುಮಾರು ನೂರು ವರ್ಷಗಳ ಹಿಂದೆ ಸ್ಥಾಪಿತವಾದುದರಿಂದ, ಈ ಗ್ರಂಥವು ಆ ಕಾಲಕ್ಕೆ ಹಿಂದಣದೆಂಬುದು ವ್ಯಕ್ತವಾಗುತ್ತದೆ.

ಇದು ಬಾಣಭಟ್ಟನ ಕಾದಂಬರಿಯೆಂಬ ಪ್ರಸಿದ್ಧವಾದ ಸಂಸ್ಕೃತ ಗ್ರಂಥದ ಗದ್ಯಾನುವಾದವಾಗಿದೆ. ನಾಗವರ್ಮನ ಪದ್ಯಾನುವಾದ ರೂಪವಾದ ಕಾದಂಬರಿಯಂತೂ ಪ್ರಸಿದ್ಧವಾಗಿಯೇ ಇದೆ ಈ ವಚನ ಕಾದಂಬರಿಯು ಕೇವಲ ಸಂಸ್ಕೃತ ಭಾಷೆಯಲ್ಲಿಯೇ ರುಚಿಸುವ, ಭಾಷಾಂತರದಲ್ಲಿ ರಸೋಪಷ್ಟಂಭಕವಾಗದ ಶ್ಲೇಷೆಯೇ ಮೊದಲಾದ ಕೆಲವು ಭಾಗಗಳು ವಿನಾ ಉಳಿದ ಭಾಗಗಳಲ್ಲಿ ಸಾರವತ್ತಾದುವನ್ನು ಒಳಕೊಂಡು ಲಲಿತವಾದ ಕರ್ಣಾಟಕಪದಗಳಿಂದ ಹೃದಯಂಗಮವಾಗಿ ರಚಿಸಲ್ಪಟ್ಟಿದೆ. ಇದರ ಶೈಲಿಯು ಬಹು ಶ್ಲಾಘನೀಯವಾಗಿದೆ. ಇದರಲ್ಲಿ ಕಥೆಯು ಪೂರ್ವಕಾದಂಬರಿಯ ಕೊನೆಯವರೆಗೆ- ಎಂದರೆ, ಕಥಾನಾಯಕನಾದ ಚಂದ್ರಾಪೀಡನು ಕಾದಂಬರಿ ಮಹಾಶ್ವೇತೆಯವರ ಅನುಮತಿಯನ್ನು ಪಡೆದು, ತಂದೆಯ ಆಜ್ಞಾನುಸಾರ ತನ್ನ ರಾಜಧಾನಿಗೆ ಸೇರಿದನೆಂಬವರೆಗೆ ಸಾಗಿದೆ.

ಈ ಗ್ರಂಥವು ಕನ್ನಡ ಭಾಷಾಭ್ಯಾಸಿಗಳಿಗೂ, ಸಂಸ್ಕೃತ ಪರಿಚಯವಿಲ್ಲದ ಕಾದಂಬರಿಯ ರಸಾಸ್ವಾದವನ್ನು ಅನುಭವಿಸಬೇಕೆಂಬ ಕುತೂಹಲವುಳ್ಳ ರಸಿಕರಿಗೂ ಆದರಣೀಯವಾಗಿದೆ.

# ಕನ್ನಡ ವಚನಕಾದಂಬರಿಯ ಶೋಧನಪತ್ರಿಕೆ

| ಪುಟ | ಪಙ್ತಿ | ಶೋಧಿತಭಾಗ |
|---|---|---|
| ೩ | ೬ | ಬಿಸಿಲಿಗಾರದೆ |
| ೭ | ೧೪ | ಶಿಲ್ಪವಿದ್ಯೆ |
| ೮ | ೬ | ಪ್ರತ್ಯೇಕ |
| ೯ | ೨೮ | ಒಜ್ಜರ |
| ೧೭ | ೧೨ | ಕಿಂಪುರುಷ |
| ೧೭ | ೧೫ | ಅರಿಷ್ಟೆ |
| ೧೫ | ೮ | ಇವನಲ್ಲಿ |
| ೧೫ | ೯ | ಅತಿ ತೇಜಸ್ವಿ |
| ೧೬ | ೧೭ | ಲಹರಿಯೇಱಿದಂತೆ |
| ೨೦ | ೩ | ದೆಸೆ...ವಿರಹ |
| ೨೭ | ೧೪ | ಆ ಪುಂಡರೀಕನು |
| ೨೩ | ೧೦ | ಅವನನು |
| ೨೬ | ೧೦ | ನನೆಯಿಕ್ಕಿದ |
| ೨೬ | ೨೪ | ಬಗೆಯೆಲ್ಲಿ |
| ೨೯ | ೧೦ | ಮಱೆ |
| ೩೩ | ೧೫ | ಅವನನು |
| ೩೫ | ೨೩ | ಹೇಱೇಸು |
| ೪೨ | ೨೭ | ಇಳ್ಗಿಸುವ |
| ೪೩ | ೪ | ನನೆಯಿಕ್ಕ...ಜವ್ವನ |
| ೪೩ | ೧೧ | ಮಱೆ |
| ೪೩ | ೧೮ | ಹೊದಿಕೆಯ |

| ಪುಟ | ಪಙ್ತಿ | ಶೋಧಿತಭಾಗ |
|---|---|---|
| ೪೪ | ೨೦ | ಕಪುರ್ರವಾಱೆ |
| ೪೫ | ೮ | ಮಱೆಗಾಲ |
| ೪೯ | ೧೭ | ಸಮಾಗಮ |
| ೫೨ | ೯ | ಪಿಡಿದೆಱೆವಲ್ಲಿ |
| ೫೬ | ೬ | ಅಱಿಯೆನು |
| ೫೬ | ೨೭ | ಒಂದು...ಕಲ್ಲ |
| ೫೮ | ೧೪ | ಸಜ್ಜೆ |
| ೫೮ | ೧೮ | ಮೆಲುಕು |
| ೬೪ | ೧೭ | ಘನತೆಯನು |
| ೬೬ | ೨೨ | ಗೂಡಾರ |
| ೬೯ | ೨೨ | ಪೊಱೆ |
| ೭೨ | ೧೫ | ಮಱೆ |
| ೭೨ | ೧೮ | ಬಱಿಯಂತೆ |
| ೭೨ | ೨೩ | ಬಾಱೆ |
| ೭೩ | ೨೪ | ತೊಲಗುವ |
| ೭೫ | ೧೮ | ಶರೀರವನು ವೆಚ್ಚಿಸಿ |
| ೭೮ | ೭ | ತಕ್ಕುದು |

# ಕನ್ನಡ ವಚನಕಾದಂಬರಿ.

ಉತ್ತರದೇಶದಲ್ಲಿ ನೇತ್ರಾವತಿಯೆಂಬ ನದಿಯ ತೀರದಲ್ಲಿ ಇರುವ ವಿದಿಶಾಪಟ್ಟಣದಲ್ಲಿ ಸಮಸ್ತಗುಣಸಂಪನ್ನನಾದ ಶೂದ್ರಕನೆಂಬ ಅರಸು ಧರ್ಮದಲ್ಲಿ ರಾಜ್ಯವನಾಳಿಕೊಂಡಿದ್ದು, ಒಂದು ದಿನ ಹಗಲೋಲಗವಾಗಿ ಹಜಾರದಲ್ಲಿ ಇರುವ ಸಮಯದಲ್ಲಿ, ದಕ್ಷಿಣದೇಶದಿಂದ ಮಾತಂಗಕನ್ನಿಕೆಯೊಬ್ಬಳು ಒಬ್ಬ ಮುದುಕನ ಮುಂದಿಟ್ಟುಕೊಂಡು ಮತ್ತೊಬ್ಬ ಸಣ್ಣವನ ಕೈಯಲ್ಲಿ ಗಿಣಿ ಸಹ ಪಂಜರವನು ಹೊರಿಸಿಕೊಂಡು ಬಂದು ಅರಸಿಗೆ ಕೈಮುಗಿದು ಕೆಳಕ್ಕೆ ನಿಂತಲ್ಲಿ, ಆ ಮುದುಕನು ಗಿಣಿಯ ಪಂಜರವನು ಅರಸಿನ ಮುಂದಿರಿಸಿ—ದೇವರು, ಈ ಗಿಣಿಯು ಸಂಗೀತಸಾಹಿತ್ಯವ ಬಲ್ಲುದು; ರಾಜನೀತಿಯರಿತು ಸಮಯೋಚಿತವಾಗಿ ಮಾತನಾಡಬಲ್ಲುದು; ಅಂತಃಪುರಸ್ತ್ರೀಯರುಗಳ ಕೋಪವ ತಿಳುಹಿಸಿ ಅನುಗೊಳಿಸಬಲ್ಲುದು; ಇಂತಹ ಗಿಣಿಯು ದೇವರ ಸಮುಖಕ್ಕೆ ಸಲುವುದು, ಎಂದು ತಮ್ಮೊಡೆಯನ ಮಗಳು ತಂದುಕೊಂಡು ಇದ್ದಾಳೆ: ಇದು ಅರಮನೆಗೆ ಇರಲಿ ಎಂದು ಒಪ್ಪಿಸಿದಳು—ಎಂದನು.

ಆ ಮೇಲೆ ವೈಶಂಪಾಯನನೆಂಬ ಗಿಣಿಯು ಅರಸಿನ ಮುಖವಂ ನೋಡಿ ಬಲದ ಕೈಯೆತ್ತಿ ಜಯಜಯ ಎಂದು ಉಗ್ಗಡಿಸಿ, ಅಕ್ಷರಸ್ಫುಟವಾಗಿ ಸುಸ್ವರದಲ್ಲಿ ಬಿರುದಾವಳಿಯ ಪದ್ಯವನೋದಲಾಗಿ, ಕೇಳಿ ಅರಸು ಬಹಳವಾಗಿ ಸಂತೋಷವಂ ಪಟ್ಟು ಆಶ್ಚರ್ಯಗೊಂಡು ಸಮೀಪದಲ್ಲಿ ಕುಮಾರಪಾಲಿತನೆಂಬ ಮಂತ್ರಿಯೊಡನೆ ಬಲು ಹೊತ್ತು ಆಗಿಣಿಯ ವಿಷಯವಾದ ಪ್ರಸಂಗವನ್ನೇ ಆಡಿಕೊಂಡಿದ್ದು, ಆಬಳಿಕ ಓಲಗವು ಹರೆದೆದ್ದು ಸಕಲರು ಕಳುಹಿಸಿಕೊಂಡು ಹೋದಮೇಲೆ ಆಮಾತಂಗಕನ್ನೆಯನ್ನು ಕಳುಹಿಸಿ ಅಂತಃಪುರಕ್ಕೆ ಹೋಗುವಾಗ, ಆಗಿಣಿಯನು ಸಂಜೆಯೂಳಿಗದವಳ ಕೈಯಲ್ಲಿ ಕೊಟ್ಟು, ಕೆಲವು ಆಪ್ತರು ಅರಸುಮಕ್ಕಳು ಊಳಿಗದವರು ಸಹ ಗರುಡಿಗೆ ಬಂದು ಹವಣಾಗಿ ಸಾದಕವಂ ಮಾಡಿ, ಆಮೇಲೆ ಮೀಣದ ಮನೆಗೆ ಬಂದು, ಅನ್ತಃಪುರದ ಸ್ತ್ರೀಯರುಗಳಿರುವಂತಹ ಗಂಧೋದಕತೀರ್ಥೋದಕಗಳಿಂದ ಸ್ನಾನವಂ ಮಾಡಿ ಮಡಿಯುಟ್ಟು ಮಧ್ಯಾಹ್ನ

ಕರ್ಮವನು ನಡೆಯಿಸಿ, ದೇವರ ಪೂಜೆಯನು ಮಾಡಿ, ಅಲಂಕಾರಮಂಟಪದಲ್ಲಿ ಹರಿಮುಳವ ಒಡವೆಗಳ ಧರಿಸಿಕೊಂಡು, ಭೋಜನದ ಮನೆಯಲ್ಲಿ ಭೋಜನವಂ ಮಾಡಿ, ಅವಸರದ ಊಳಿಗದವಳ ಕೈಲಾಗ ತೆಗೆದುಕೊಂಡು, ಒಳಹಜಾರಕ್ಕೆ ಬಂದು ಸಿಂಹಾಸನದಲ್ಲಿ ಕುಳಿತು, ಸಮೀಪದಲ್ಲಿ ನೆಲದ ಮೇಲೆ ಕುಳಿತುಕೊಂಡು ಕತ್ತಿಯನ್ನು ತೊಡೆಯ ಮೇಲೆ ಇರಿಸಿಕೊಂಡು ಮೃದುವಾಗಿ ಪಾದವ ಒತ್ತುತ್ತಿರುವ ಕತ್ತಿಯ ಊಳಿಗದವಳೊಡನೆ ಒಂದೊಂದು ಮಾತನಾಡುವ ಸಮಯದಲ್ಲಿ, ಅಗಿಣಿಯ ಪ್ರಸಂಗವ ಕೇಳಬೇಕೆಂಬ ಸಂತೋಷದಿಂದ ಅವಸರದ ಊಳಿಗದವಳ ಮುಖವ ನೋಡಿ ಗಿಣಿಯ ತರಹೇಳಲಾಗಿ, ಅಂತಃಪುರದಿಂದ ಗಿಣಿಯನು ತರುವಲ್ಲಿ ಅಣ್ಣಾಗಳು ಬಂದು ಕೈಮುಗಿದು—ಸ್ವಾಮೀ, ಅಮ್ಮನವರು ಬಿನ್ನಹವಂ ಮಾಡಿದರು:—ದೇವರವರು ಕಟ್ಟು ಮಾಡಿಸಿದ ಪ್ರಕಾರಕ್ಕೆ ವೈಶಂಪಾಯನನಿಗೆ ಹಣ್ಣುಹಂಪಲ ಮೆಲ್ಲಿಸಿ ಇರಿಸಿಕೊಂಡಿದ್ದಲ್ಲಿ ಅವಸರದವಳು ಬಂದು ಕೇಳಲಾಗಿ ಪಾಡದ ಬಳಿಗೆ ಕಳುಹಿಸಿಬಿಟ್ಟಿದ್ದೇವೆ—ಎಂದು ಬಿನ್ನಹವಂ ಮಾಡಿದರು—ಎಂದು ಕೈಮುಗಿದು ಹೋದಲ್ಲ; ಅರಸು ಅಗಿಣಿಯನ್ನು ನೋಡಲಾಗಿ—ಸ್ವಾಮೀ, ಅಂತಃಪುರದಲ್ಲಿ ಅರಸಿತಿಯರು ದಿವ್ಯವಾಗಿರುವ ನೇರಳೆಯ ಹಣ್ಣು, ಮಾವಿನ ಹಣ್ಣು, ದಾಳಿಂಬದ ಹಣ್ಣು ಮುಂತಾದುವನು ತಂದು ಕೈಯಿಂದ ತೆಗೆದುಕೊಡಲಾಗಿ, ಮೆಲ್ಲು ಅಮೃತಾಸ್ವಾದನವ ಮಾಡಿದಹಾಗೆ ಆಯಿತು—ಎಂದು ಬಹುಸ್ತುತಿಯನು ಮಾಡುತ್ತಿರಲಾಗಿ; ಅಪ್ರಸಂಗವನು ಅಷ್ಟರಲ್ಲೇ ನಿಲ್ಲಿಸಿ—ನೀನು ಆವ ದೇಶದಲ್ಲಿ ಇದ್ದೆ? ಆವ ರೀತಿಯಲ್ಲಿ ಸಕಲವಿದ್ಯೆಗಳು ಬಂದುವು? ಆವ ಬಗೆಯಲ್ಲಿ ಪಂಜರಕ್ಕೆ ಸಿಕ್ಕಿದೆ? ಏತರಿಂದ ಹೀನಜಾತಿಯ ಕೈಗೆ ಸೇರಿದೆ? ಎಂದು ಕೇಳಲಾಗಿ, ವೈಶಂಪಾಯನನು ತಾನು ಬಿನ್ನಹವಂ ಮಾಡುತಿದ್ದೀತು:—

ಸ್ವಾಮೀ, ಪಂಪೆಯ ಪಡುವಣ ತೀರದಲ್ಲಿ ಪೂರ್ವದಲ್ಲಿ ರಾಮಸ್ವಾಮಿಯು ಕೆಡಹಿದ ಸಪ್ತತಾಳವೃಕ್ಷದ ಸಮೀಪದಲ್ಲಿ ದೊಡ್ಡಿತಾದ ಎಲವದ ಮರದ ಮೇಲೆ ಅನೇಕ ಗಿಣಿಗಳಿರುವುವು. ಅವರಿಲ್ಲಿ ನಮ್ಮ ತಂದೆತಾಯಿಗಳ ಮುಪ್ಪಿನ ಕಾಲದಲ್ಲಿ ತಾನೊಂದು ಹುಟ್ಟಲಾಗಿ ಆಪ್ರಸವವೇದನೆಯಿಂದ ಮುಪ್ಪಿನ ತಾಯಿ ದೈವಾಧೀನವಾಗಲಾಗಿ, ತನ್ನ ಮುಪ್ಪಿನ ತಂದೆಯು ಅನುಕೂಲಸ್ತ್ರೀಯ ವಿಯೋಗದಿಂದ ಬಹುದುಃಖಿತನಾಗಿದ್ದನು. ಪುತ್ರವಾತ್ಸಲ್ಯದಿಂದ ಆದುಃಖವ

ಕಾಲದಲ್ಲಿ ಗಿಣಿಗಳೆಲ್ಲವು ಮೇವುದಕ್ಕೆ ಹೋಗಿ ಹಾರಲರಿಯದ ಮರಿಗಳು ಮಾತ್ರವೆ ಇರುವ ಸಮಯದಲ್ಲಿ ನನ್ನ ಗೂಡಿನಲ್ಲಿ ವೃದ್ಧಾಪ್ಯದಿಂದ ಹಾರಲರಿಯದ ನಮ್ಮ ತಂದೆಯ ಸಮೀಪದಲ್ಲಿ ಇರುವಲ್ಲಿ ಬೇಟೆಗಾರರ ಗಲಗು ಕೇಳಿಸಲಾಗಿ ನಾನು ಭಯದಿಂದ ನಮ್ಮ ತಂದೆಯ ಱೆಕ್ಕೆಯೊಳಗೆ ಹೊಕ್ಕು ಇದ್ದು ಆ ಗಲಗೇನೆನುತ್ತ ಮೇಲಕ್ಕೆ ಬಂದು ನೋಡಲಾಗಿ, ಆ ಬೇಡರು ಮಾತಂಗನೆಂಬ ಗುರಿಕಾರನ ಸಹ ಬಿಸಲಿಗಾರದೆ ನಾವಿರುವ ಎಲವದ ಮರದ ನೆಳಲಸೇರಿ ಬಳಲಿಕೆಯ ತೀರಿಸಿಕೊಂಡು ಹೋದಮೇಲೆ ಒಬ್ಬ ಮುದಿಬೇಡನು ಬೇಟೆ ಸಿಕ್ಕದೆ ಇದ್ದುದರಿಂದ ಹಿಂದುಳಿದು ಅಲ್ಲಿಯೆ ನಿಂತು, ಮರದಮೇಲಕ್ಕೇರಿ ಮರಿಗಳ ತೆಗೆದು ಕೊರಳಮುರಿದು ನೆಲಕ್ಕಿಡುವುದನು ಕಂಡು ಭಯದಿಂದ ನಮ್ಮ ತಂದೆಯು ಭರದಿಂದ ನನ್ನನು ಹೊಟ್ಟೆಯೊಳಗಿಟ್ಟುಕೊಂಡಿರುವ ಸಮಯದಲ್ಲಿ, ಆ ಬೇಡನು ನಮ್ಮ ತಂದೆಯ ಕೊರಳ ಮುರಿದು ಇಟ್ಟುಬಿಡುವಾಗ ಆಯುಷ್ಯದಿಂದ ಅವನ ಕಣ್ಣಿಗೆ ಸಿಕ್ಕದೆ ನೆಲಕ್ಕೆ ಬೀಳುವಾಗಲೂ ದೈವಯತ್ನದಿಂದ ತರಗೆಲೆಯ ರಾಶಿಯ ಮೇಲೆ ಬಿದ್ದು, ಅವನಿಳಿದು ಬರುವನಿತರಲ್ಲಿಯೆ ಕೆಲದಲ್ಲಿರುವೆಕ್ಕದಾಳೆಯ ಮರದ ಬೇರನು ಸೇರಿ ಇದ್ದು, ಆ ಬೇಡನು ದೂರಕ್ಕೆ ಹೋದಮೇಲೆ ನಾನು ಬಹುತೃಷೆಯಿಂದ ನೀರನು ಬಯಸಿ ಱೆಕ್ಕೆಗಳಿಲ್ಲದುದರಿಂದ ಅಡಿಗಡಿಗೆ ಮುಂದಕ್ಕೆ ಮುಗ್ಗುತ್ತ ಎಡಬಲಕ್ಕೆ ಜಾರುತ್ತ ಬಗೆಯಿಂದ ಬಾಯಿಬಿಡುತ ಕೊಳದ ದಾರಿಹಿಡಿದು ಬರುತ್ತಿರುವ ಸಮಯದಲ್ಲಿ ಆ ಸಮೀಪದಾಶ್ರಮದಲ್ಲಿ ಜಾಬಾಲಮುನೀಶ್ವರನ ಕುಮಾರನು ಹಾರೀತನೆಂಬವನು ತನ್ನ ಶಿಷ್ಯರು ಸ್ನೇಹಿತರು ಸಹಿತವಾಗಿ ಸ್ನಾನಕ್ಕೆ ಬರುತ್ತ ಅಗ ಅಲ್ಲಿರುವ ನನ್ನನು ಕಂಡು ದಯವಿಟ್ಟು ಕೊಳದ ತಡಿಗೆ ಕೊಂಡುಹೋಗಿ, ನೀರ ಕುಡಿಯಿಸಿ, ನೆರಳಲ್ಲಿ ಇರಿಸಿ, ಸ್ನಾನ ಮಾಧ್ಯಾಹ್ನಿಕಗಳನು ಮಾಡಿಕೊಂಡು, ತಿರುಗಿ ಆಶ್ರಮಕ್ಕೆ ತನ್ನನು ತೆಗೆದುಕೊಂಡುಹೋದಲ್ಲಿ, ಅಬಳಿಯ ಕೆಂಪಿನಸುಗೆಯ ಮರದ ನೆರಳಲ್ಲಿ ಅನೇಕ ಋಷಿಗಳು ಸಹ ಕುಳಿತಿರುವ ಜಾಬಾಲಮುನಿಯು ನನ್ನನು ಕಂಡು, ಇದೇನು! ಎಂದು ಕೇಳಿದಲ್ಲಿ—ಸ್ನಾನಕ್ಕೆ ಹೋಗುವಾಗ ಈಗಿಣಿಯು ಮರದ ಮೇಲಿಂದ ಬಿದ್ದು ಹಾರಲರಿಯದೆ ಕಂಗೆಟ್ಟು ಇರಲಾಗಿ ದಯದಿಂದ ನೀರ ಕುಡಿಯಿಸಿ ತಿರುಗಿ ಗೂಡಿನಲ್ಲಿ ಇರಿಸುವುದಕ್ಕೆ ಮರನು ಬಲು ಉದ್ದವಾದ ಕಾರಣ ಱೆಕ್ಕೆಯು ಬರುವ ಪರಿಯಂತವು ನಮ್ಮ ಆಶ್ರಮದಲ್ಲಿ ಸಾಕಿಕೊಂಡಿದ್ದು ಬಿಟ್ಟುಬಿಟ್ಟರೆ ತನ್ನ ಮನಸ್ಸು ಬಂದ ಬಳಿಗೆ ಹೋದೀತು; ಪರಿಚಯದಿಂದ ಇಲ್ಲಿಯಾದರೂ ಇದ್ದೀತು; ಅವ ಜಗೆಯಲ್ಲಿಯಾದರೂ ವ್ಯರ್ಥವಾಗಿ ಸಾವ

ಪ್ರಾಣಿಯನು ರಕ್ಷಿಸುವುದೆ ಧರ್ಮವೆಂದಿದ್ದೇನೆ—ಎಂದು ಹೇಳಲಾಗಿ, ಆಜಾಬಾಲಮುನಿಯು ನನ್ನನು ದಯಾದೃಷ್ಟಿಯಿಂದ ನೋಡಿ ಸರ್ವಜ್ಞನಾದ ಕಾರಣ ನನ್ನ ಪೂರ್ವಜನ್ಮದ ಕೃತಕೃತ್ಯವ ತಿಳಿದು ಸಮೀಪದಲ್ಲಿದ್ದ ಋಷಿಗಳೊಡನೆ, ಈ ಗಿಣಿಯು ತಾನು ಮಾಡಿದ ಪಾಪಫಲವನು ಅನುಭವಿಸುತ್ತಿದೆ, ಎಂದು ಹೇಳಲಾಗಿ; ಅದನ್ನು ಕೇಳಿ ಮುನಿಗಳು ಆಶ್ಚರ್ಯಪಟ್ಟು–ಸ್ವಾಮೀ, ಈಗಿಣಿಯು ಪೂರ್ವದಲ್ಲಿ ಆರು ? ಆವ ದೇಶ ? ಏನು ಪಾಪದಿಂದ ಗಿಣಿಯಾಗಿ ಹುಟ್ಟಿತು ? ವಿಸ್ತಾರವಾಗಿ ಹೇಳಬೇಕು—ಎಂದು ಪ್ರಾರ್ಥಿಸಿ ಕೇಳಲಾಗಿ; — ಇದು ಮಹಾಕಥೆ, ವಿಸ್ತಾರವಾಗಿ ಹೇಳಬೇಕು, ಈಗ ಮಾಧ್ಯಾಹ್ನಿಕ ಕಾಲವಾಗಿದೆ, ಭೋಜನಾನಂತರಕ್ಕೆ ಹೇಳಬಹುದು–ಎಂದು ಎಲ್ಲರನು ಕಳುಹಿಸಿ, ಸ್ನಾನ ಮಾಧ್ಯಾಹ್ನಿಕ ಜಪ ವೈಶ್ವದೇವ ದೇವತಾರ್ಚನೆ ಭೋಜನಾದಿಗಳಾಗಿ ಸಾಯಂಕಾಲವಾದ ಮೇಲೆ ಸಂಧ್ಯಾವಂದನಜಪಾಗ್ನಿಹೋತ್ರಗಳಾದಮೇಲೆ ಹರಿತಕುಮಾರನು ತನ್ನನು ತೆಗೆದುಕೊಂಡು ಮುನಿಗಳುಸಹ ಜಾಬಾಲಮುನಿಯ ಹತ್ತಿರಕ್ಕೆ ಬಂದು, ಈಗಿಣಿಯ ಪೂರ್ವಜನ್ಮದ ವೃತ್ತಾಂತವನು ಕೇಳಬೇಕಾಗಿ ಮುನಿಗಳೆಲ್ಲರು ಕೇಳ ಬಂದಿದ್ದಾರೆ; ವಿಸ್ತಾರವಾಗಿ ಬುದ್ಧಿಗಲಿಸಬೇಕು–ಎಂದು ಕೇಳಲಾಗಿ; ಜಾಬಾಲ ಮುನಿಯು ಹೇಳಿದುದು:—

ಅವಂತೀದೇಶದಲ್ಲಿ ಉಜ್ಜಯಿನಿಯೆಂಬ ಪಟ್ಟಣವುಂಟು. ಆಪಟ್ಟಣಕ್ಕೆ ತಾರಾಪೀಡನೆಂಬ ಅರಸು ಉಂಟು. ಶುಕನಾಸನೆಂಬ ಪ್ರಧಾನನಲ್ಲಿ ಸಕಲರಾಜ್ಯಭಾರವನು ನಿಲಿಸಿ, ತಾನು ಸುಖದಲ್ಲಿ ಅಂತಃಪುರದ ಭೋಗಾಸಕ್ತನಾಗಿರುತ್ತ, ಒಂದು ದಿನ ವಿಲಾಸವತಿಯೆಂಬ ಪಟ್ಟಸ್ತ್ರೀಯ ಮನೆಗೆ ಬಂದು, ಅವಳು ಮಕ್ಕಳು ಇಲ್ಲದುದರಿಂದ ದುಃಖಿತೆಯಾಗಿರುವುದನು ಕಂಡು, ದೇವಪೂಜೆ ಬ್ರಾಹ್ಮಣ ಪೂಜೆ ದಾನ ಹೋಮ ತಪ ಉಪವಾಸಗಳನು ಮಾಡಿಸಿದಲ್ಲಿ ಮಕ್ಕಳಾದಾವು ಎಂದು ಚಿಂತೆಯ ಬಿಡಿಸಿ, ಅದೇ ರೀತಿಯಲ್ಲಿ ಪ್ರತಿದಿನವು ಪುತ್ರಕಾಮನೆಯಿಂದ ನಾನಾವಿಧವಾದ ಸತ್ಕರ್ಮವನು ನಡೆಯಿಸಿಕೊಂಡಿರುವಲ್ಲಿ, ಒಂದು ದಿನ ಬೆಳಗು ಜಾವದಲ್ಲಿ ಅರಸು ಒಂದು ಕನಸ ಕಂಡು, ಆಕ್ಷಣದಲ್ಲಿಯೆ ಶುಕನಾಸನ ಕರೆಯಿಸಿ— ಈಗ ವಿಲಾಸವತಿಯು ಉಪ್ಪರಿಗೆಯ ಮೇಲೆ ಇರಲಾಗಿ ಚಂದ್ರಮಂಡಲವು ಇಳಿದುಬಂದು ವಿಲಾಸವತಿಯ ಮುಖವನು ಹೊಗುವಹಾಗೆ ಸ್ವಪ್ನದಲ್ಲಿ ಕಂಡೆನೆಂದು ಹೇಳಲಾಗಿ, ಶುಕನಾಸನು ಅತ್ಯಂತಸಂತೋಷಿತನಾಗಿ—ಶೀಘ್ರದಲ್ಲಿ ಗಂಡುಕುಮಾರನಾದಾನು–ಎಂದು ಹೇಳಿ, ನಾನು ಇಂದಿನ ರಾತ್ರಿಯಲ್ಲಿ

ಸ್ವಪ್ನದಲ್ಲಿ ನನ್ನ ಸ್ತ್ರೀಯ ತೊಡೆಯ ಮೇಲೆ ಬೆಳ್ದಾವರೆಯ ಇರಿಸಿ ಇರುವುದನು ಕಂಡೆನೆಂದು ಹೇಳಲಾಗಿ; ಅರಸು ಅತ್ಯಂತಸಂತೋಷದಿಂದ—ದೈವವು ಅನುಕೂಲವಾದರೆ ಶ್ರೇಯಸ್ಸಿನ ಮೇಲೆ ಶ್ರೇಯಸ್ಸು—ಎಂದು ಇಷ್ಟಾಲಾಪಗಳನಾಡಿಕೊಳುತ್ತ, ಶುಕನಾಸನ ಕೈಯ ಹಿಡಿದುಕೊಂಡು ಅಂತಃಪುರಕ್ಕೆ ಹೋಗಿ, ಈಸ್ವಪ್ನದ ವೃತ್ತಾಂತವನು ವಿಲಾಸವತಿಗೆ ಹೇಳಿ ಸಂತುಷ್ಟನಾಗಿದ್ದನು.

ಕೆಲವು ದಿವಸಗಳ ಮೇಲೆ, ರಾತ್ರಿಯ ಹೊತ್ತಿನಲ್ಲಿ ಅರಸು ಒಳಓಲಗದಲ್ಲಿ ಸಮೀಪದಲ್ಲಿ ಕುಳಿತಿರುವ ಶುಕನಾಸನೊಡನೆ ಇಷ್ಟಾಲಾಪಗಳನಾಡಿಕೊಂಡಿರುವ ಸಮಯದಲ್ಲಿ ಅಂತಃಪುರದ ಬಾಗಿಲ ಊಳಿಗದ ಕುಲವರ್ಧನೆ ಎಂಬವಳು ಬಂದು–ವಿಲಾಸವತಿಯು ಗರ್ಭವತಿಯಾಗಿದ್ದಾಳೆ–ಎಂದು ಏಕಾಂತದಲ್ಲಿ ಹೇಳಲಾಗಿ, ಆಮಾತಿಗೆ ಅರಸಿನ ಮುಖ ವಿಕಸಿತವಾಗಿ ಶುಕನಾಸನ ಮುಖವ ನೋಡಲಾಗಿ; ಆಶುಕನಾಸನು ಇಷ್ಟು ಹರುಷಕ್ಕೆ ಕಾರಣವೇನು ಎಂದು ಯೋಚಿಸಿ, ಮನಸ್ಸಿನಲ್ಲಿ ತಿಳಿದು, ಅರಸನ ಸಮೀಪಕ್ಕೆ ಸೇರಿ–ಈರೀತಿಯಹುದೆ? ಎಂದು ಕೇಳಲಾಗಿ; ಅರಸು–ಕುಲವರ್ಧನೆ ಈರೀತಿ ಹೇಳುತ್ತಿದ್ದಾಳೆ. ನಾವು ಅಂತಃಪುರಕ್ಕೆ ಹೋಗಿ ಇದರ ನೆಲೆಯನು ಬೆಸಗೊಳುವ–ಎಂದು ಹೊರಟು, ಅಲ್ಲಿ ಗರ್ಭವತಿಗಳಿಗೆ ಮಾಡತಕ್ಕ ಉಪಚಾರಗಳನು ಮಾಡಬಲ್ಲಂಥ ಆಪ್ತೆಯರು, ವೃದ್ಧಸ್ತ್ರೀಯರು ಲೌಕಿಕಾಚಾರಗಳನು ನಡೆಸುತ್ತಿರುವ ಸಮಯದಲ್ಲಿ ಶುಕನಾಸ ಸಹ ವಿಲಾಸವತಿಯ ಮನೆಗೆ ಹೋಗಲಾಗಿ; ವಿಲಾಸವತಿಯು ಊಳಿಗದವಳ ಕೈಲಾಗಿನಲ್ಲಿ ಎದ್ದು ನಿಲ್ಲಲಾಗಿ, ಬೇಡವೆಂದು ಒಂದೇ ಮಂಚದ ಮೇಲೆ ಕುಳಿತು, ಮತ್ತೊಂದು ಅಪರಂಜಿಯ ಪೀಠದ ಮೇಲೆ ಶುಕನಾಸನು ಕುಳಿತುಕೊಂಡಮೇಲೆ, ಅರಸು ವಿಲಾಸವತಿಯ ಮುಖವ ನೋಡೆ, ಶುಕನಾಸನು ಕೇಳುತ್ತಿದ್ದಾನೆ:—ಕುಲವರ್ಧನೆ ಹೇಳಿದ ಮಾತು ನೆಲೆಯೇ?–ಎಂದು ಕೇಳಿದಲ್ಲಿ, ಅರಸಿತಿಯು ಬಂದಿಷ್ಟು ಮುಗುಳುನಗೆಗೂಡಿ ತಲೆವಾಗಿದಲ್ಲಿ, ಅರಸು—ನೀನು ಹೇಳದಿದ್ದರೂ ನಿನ್ನ ಮುಖವೂ ದೃಷ್ಟಿಯೂ ನಿನ್ನ ಶರೀರದಲ್ಲಿರುವ ಕುರುಹೂ ವ್ಯಕ್ತವಾಗಿ ಹೇಳುತ್ತಿವೆ—ಎಂದು ಹೇಳಲಾಗಿ; ಮತ್ತು ಪರಿಹಾಸಕದ ನುಡಿಗಳನು ನುಡಿಯಲಾಗಿ; ಅರಸಿತಿಯು ನಸುಗೋಪದಿಂದ ಹುಬ್ಬು ಗಂಟಿಕ್ಕಿ ಬಂದಿಷ್ಟು ತಲೆವಾಗಿ ಅರಸನನ್ನು ಓರೆನೋಟದಲ್ಲಿ ನೋಡಲಾಗಿ; ಶುಕನಾಸನು—ಅರಸಿತಿಯನು ಏನುಕಾರಣ ನಾಚಿಗೆ ಬಡಿಸುತಿದ್ದೀರಿ? ಬಲು ಹೊತ್ತಾಯಿತು—ಎಂದು ಕಳುಹಿಸಿಕೊಂಡು ಮನೆಗೆ ಹೋದಮೇಲೆ; ಅರಸು ಆರಾತ್ರಿಯಲ್ಲಿ ವಿಲಾಸವತಿಯ ಅರಮನೆಯಲ್ಲಿಯೇ ಇದ್ದು,

ಆಮೇಲೆ ದಿನದಿನಕ್ಕೆ ಸಂತೋಷದಲ್ಲಿ ಇರುವಲ್ಲಿ; ನವಮಾಸ ತುಂಬಿ ಒಳ್ಳೆಯ ತಿಥಿಯಲ್ಲಿ ಒಳ್ಳೆಯ ನಕ್ಷತ್ರದಲ್ಲಿ ವಿಲಾಸವತಿಗೆ ಗಂಡುಕುಮಾರನಾಗಲಾಗಿ; ಆವಾರ್ತೆ ಹೇಳಿದವರಿಗೆ ಸರ್ವಾಭೀಷ್ಟವನು ಕೊಟ್ಟು ಜೋಯಿಸರು ಕಟ್ಟಿರುವ ಶುಭ ಮುಹೂರ್ತದಲ್ಲಿ ಶುಕನಾಸ ಸಹ ಸೂತಕದ ಮನೆಯ ಬಳಿಗೆ ಬಂದು ಮಗನ ಮುಖವ ನೋಡುತ್ತಿರುವಾಗ; ಶುಕನಾಸನು ಮಗುವಿನ ಸರ್ವಾವಯವವನು ಭಾವಿಸಿ ನೋಡಿ, ಅದರ ಶರೀರದಲ್ಲಿರುವ ರಾಜಚಿಹ್ನೆಗಳಂ ತೋರಿ ಬಣ್ಣಿಸುತ್ತಿರುವಲ್ಲಿ; ಒಬ್ಬ ಊಳಿಗದವನು ಬಂದು ಅರಸಗೆ ಅಪ್ಪಬದ್ದು—ಸ್ವಾಮಿ, ಶುಕನಾಸಗೆ ಗಂಡುಕುಮಾರನಾದನು-ಎಂದು ಹೇಳಿದಲ್ಲಿ, ಸಂತೋಷದಿಂದ ಅವನಿಗೆ ತಾ ತೊಟ್ಟ ತೊಡಿಗೆಯನು ಕೊಟ್ಟು, ಶುಕನಾಸನ ಮುಖವ ನೋಡಿ-ನಾವು ಅನ್ಯೋನ್ಯಮನುಷ್ಯಯತ್ನದಿಂದ ಸುಖದುಃಖಕ್ಕೆ ದ್ವಂದ್ವವಾಗಿ ಯೋಗಕ್ಷೇಮವಾಗಿ ನಡೆವುದು ಸರಿಯಷ್ಟೆ, ದೈವಯತ್ನದಿಂದ ಆಗುವ ಶ್ರೇಯಸ್ಸುಗಳು ಲೋಕದಲ್ಲಿಯೇ ಆಗುತ್ತವೆ ಎಂದು ಆಡಿಕೊಳುತ್ತ, ಶುಕನಾಸ ಸಹ ಶುಕನಾಸನ ಮನೆಗೆ ಬಂದು ತನ್ನರಮನೆಗಿಂತಲೂ ಅತಿಶಯವಾಗಿ ಮಹೋತ್ಸವವನುಂಟುಮಾಡಿಸಿ ತನ್ನ ಮನೆಗೆ ಬಂದು ಹತ್ತನೆಯ ದಿನದಲ್ಲಿ ಅನೇಕ ಸಂಭ್ರಮದಿಂದ ಕ್ಷತ್ರಿಯಜಾತಿಗೆ ತಕ್ಕ ನಾಮಕರಣವನು ಮಾಡಿಸಿ, ಚಂದ್ರಾಪೀಡನೆಂಬ ಹೆಸರನ್ನಿಟ್ಟು ಸಂತೋಷದಲ್ಲಿದ್ದನು. ಆಮರುದಿವಸ ಶುಕನಾಸನು ಅರಸಿನ ಅಪ್ಪಣೆವಡೆದು ತನ್ನ ಮಗನಿಗೂ ಬ್ರಾಹ್ಮಣಜಾತಿಗೆ ಅನುಗುಣವಾದ ವೈಶಂಪಾಯನನೆಂಬ ಹೆಸರನಿಟ್ಟನು.

ಅರಸು ಚಂದ್ರಾಪೀಡನಿಗೆ ಸಕಾಲದಲ್ಲಿ ಅನ್ನಪ್ರಾಶನ ಚೌಲ ಉಪನಯನ ಮೊದಲಾದ ವೇದೋಕ್ತಕರ್ಮಂಗಳನು ನಡೆಯಿಸಿ ದೊಡ್ಡವನಾದಮೇಲೆ ಊರಲ್ಲಿರುವ ಮಕ್ಕಳೊಡನೆ ಮಕ್ಕಳಾಟಿಕೆಯ ಪರಾಕಿನಲ್ಲಿ ವಿದ್ಯಾಭ್ಯಾಸವು ಸಾಗದೆಂದು ಊರಹೊರಗೆ ಸಿಪ್ರೆಯೆಂಬ ನದಿಯ ತೀರದಲ್ಲಿ ಕೂಗುದಾರಿಯ ಅಗಲಕ್ಕೆ ಅಗಷ್ಠಾಳುವೇರಿ ಸಹ ಕೋಟೆಯನು ಹಾಕಿಸಿ, ಅದಕ್ಕೆ ತಕ್ಕ ಕಾವಲು ಮಂದಿಯನು ಅಮರಿಸಿ ಅದರಲ್ಲಿ ಆನೆ ಕುದುರೆಗಳನು ಏರಿ ಆಡುವುದಕ್ಕೆ ಬೇರೆ ಬೇರೆ ಸ್ಥಾನಗಳನು ಗರುಡಿಯನು ವಿದ್ಯಾಶಾಲೆಯನು ಏರ್ಪಾಡುಮಾಡಿಸಿ, ಸಂಗಡ ಕಲಿಯುವುದಕ್ಕೆ ಬುದ್ಧಿವಂತರಾಗಿರುವ ಬ್ರಾಹ್ಮಣರ ಮಕ್ಕಳನು ಅರಸುಗಳ ಮಕ್ಕಳನು ಕೂಡಿಸಿ, ವೈಶಂಪಾಯನನಿಗೆ ಸಹ ಸುಮುಹೂರ್ತದಲ್ಲಿ ತನ್ನರಸುತನಕ್ಕೆ ಉಂಟಾದ ಸಂಭ್ರಮದಲ್ಲಿ ಸಮಸ್ತವಿದ್ಯಾಪ್ರಾರಂಭಗಳನು ಮಾಡಿಸಿ, ಮಗನನು

ಉಪಾಧ್ಯಾಯರ ವಶಕ್ಕೆ ಕೊಟ್ಟು ಅಲ್ಲಿಂದ ಹೊರಿಕ್ಕೆ ಬಾರದಹಾಗೆ ಕಟ್ಟು ಮಾಡಿಸಿ, ತಾನು ವಿಲಾಸವತಿ ಸಹ ದಿನಕ್ಕೆ ಒಂದುವೇಳೆ ನೋಡುತ್ತಿರುವನು.

ಆ ಕುಮಾರರು ಮಕ್ಕಳಾಟಿಕೆಯ ಪರಾಕಿಲ್ಲದೆ ಇರುವುದರಿಂದಲೂ ಪ್ರತಿದಿನವೂ ಅರಸು ವಿಚಾರಿಸುವುದರಿಂದಲೂ ಉಪಾಧ್ಯಾಯರು ಪ್ರಯಾಸಪಟ್ಟು ಹೇಳುವುದರಿಂದಲೂ ಕುಶಲಬುದ್ಧಿಯಾದುದರಿಂದಲೂ ಶೀಘ್ರದಲ್ಲಿಯೆ ತರ್ಕ ವೇದಾಂತ ಶಬ್ದ ಮಿಾಮಾಂಸಗಳೆಂಬ ಶಾಸ್ತ್ರಗಳನು, ಮನು ಮೊದಲಾದ ಧರ್ಮಶಾಸ್ತ್ರವನು, ರಾಜನೀತಿಯನು ಅಭ್ಯಾಸಮಾಡಿ ಬಟ್ಟೆಸಾಧಕ ವ್ಯಾಯಾಮ ಕತ್ತಿ ಕಠಾರಿ ಸಿಂಹಮುನೆಟ್ಟಿ ತಿರುಗುಚಕ್ರ ಗಂಡುಗೊಡಲಿ ಮೊದಲಾದ ಆಯುಧಗಳನು ಕಲಿತು, ಆನೆ ಕುದುರೆ ತೇರುಗಳ ಏಱಾಟಗಳನು, ಕೊಳಲು ವೀಣೆ ಮುದ್ವತಿ ತಾಳ ಢಕ್ಕೆ ಮೊದಲಾದ ವಾದ್ಯಗಳನು, ಭರತ ಮೊದಲಾದ ನಾಟ್ಯಶಾಸ್ತ್ರಗಳನು, ನಾರದೀಯ ಮೊದಲಾದ ಸಂಗೀತಶಾಸ್ತ್ರಗಳನು, ಆನೆಯೊಂದಿಗೆ ಕಾದುವ ಪಾಳೆಗಟ್ಟಿಗೆವಿದ್ಯೆ, ಜರಕವಿದ್ಯೆ, ಸಾಮುದ್ರಿಕೆಯ ಲಕ್ಷಣ, ಚಿತ್ರಾಲಿವಿದ್ಯೆ, ಚಿಪ್ಪಳಿಗ ವಿದ್ಯೆ, ಪುಸ್ತಕಲಿಖನವಿದ್ಯೆ, ರಾಯಸವಿದ್ಯೆ, ನಾನಾಬಗೆಯ ಜೂಜು, ಸಂಗೀತ, ಹಲ್ಲಿಗೆಯ ಶಕುನ, ಲೆಕ್ಕ, ರತ್ನಪರೀಕ್ಷೆ, ಶಿಲ್ಪವಿದ್ಯೆ, ವೈದ್ಯ, ಪರಂಗಿವಿದ್ಯೆ, ಕಾಮಶಾಸ್ತ್ರ, ನಾಟಕ, ಇಂದ್ರಜಾಲ, ಕಥೆಗಳು, ಕಾವ್ಯ, ಮಹಾಭಾರತ, ಪುರಾಣ, ರಾಮಾಯಣ ಮೊದಲಾದ ನಾನಾವಿದ್ಯೆಗಳನು, ನಾನಾಲಿಪಿ ನಾನಾಭಾಷೆ ನಾನಾಸಂಜ್ಞೆಗಳನು ಕಲಿತು, ಆಗುರುಗಳಿಗೆ ಮನಸ್ಸಂತೋಷ ಮಾಡಿದರು.

ಆಮೇಲೆ ಯೌವನ ಪ್ರಾದುರ್ಭಾವವಾಗಲು ಚಂದ್ರಾಪೀಡನ ಊರಿಗೆ ಕರತರಬೇಕೆಂದು ಪಟ್ಟಣವೆಲ್ಲವನು ತೋರಣಮೇಲುಕಟ್ಟುಗಳಿಂದ ಅಲಂಕರಿಸಿ, ಚತುರಂಗಬಲಸಹಿತವಾಗಿ ಬಲಾಹಕನೆಂಬ ದಳವಾಯನು ಕಳುಹಿಸಿ ಕರತರ ಹೇಳಲಾಗಿ, ಅವನು ವಿದ್ಯಾಗೃಹಕ್ಕೆ ಹೋಗಿ ಚಂದ್ರಾಪೀಡನಿಗೆ ಕೈಮುಗಿದು—ನಿಮ್ಮನು ಪಟ್ಟಣಕ್ಕೆಬರಹೇಳಿ ಅರಸು ಕಟ್ಟುಮಾಡಿಸಿದ್ದಾರೆ. ನೀವು ನಿಮಗೆ ಆರನೆಯ ವರುಷದಲ್ಲಿ ಇಲ್ಲಿಗೆ ವಿದ್ಯಾಭ್ಯಾಸಕ್ಕೆ ಬಂದಿರಿ. ಈಗ್ಗೆ ಹತ್ತು ವರುಷವಾಯಿತು. ಈಗ ಪುರಜನರೆಲ್ಲರು ನಿಮ್ಮ ಕಾಣಬೇಕೆಂಬ ಸಂತೋಷದಿಂದಿದ್ದಾರೆ. ಬರಬೇಕೆಂದು ಹೇಳಲಾಗಿ, ಅರಸು ಕಳುಹಿಸಿಕೊಟ್ಟದ್ದು ಸಮುದ್ರದ್ವೀಪದಲ್ಲಿ ಹುಟ್ಟಿದ ಅವಲಕ್ಕಿವಣ್ಣದ ಇಂದ್ರಾಯುಧನೆಂಬ ಕುದರೆ

ಯನು ಏಱಿಕೊಂಡು ವೈಶಂಪಾಯನನ ಕೂಡ ಬಂದು, ಅರಮನೆಯಲ್ಲಿ ಅರಸ ಕಾಣಿಸಿಕೊಂಡಲ್ಲಿ, ಅರಸು ಸಕಲ ಬಹುಮಾನಗಳನು ಮಾಡೆ, ಅಂತಃಪುರಕ್ಕೆ ವೈಶಂಪಾಯನನು ಸಹ ಹೋಗಿ ವಿಲಾಸವತಿಯ ಕಾಣಿಸಿಕೊಂಡು, ಕ್ಷಣಮಾತ್ರ ಇಷ್ಟಾಲಾಪಗಳನಾಡುತಿದ್ದು, ಅಲ್ಲಿಂದ ಕಳುಹಿಸಿಕೊಂಡು ಶುಕನಾಸನನು ಕಂಡು, ಆಶುಕನಾಸನ ಮನೆಯ ಅಂತಃಪುರದ ಶುಕನಾಸಸ್ತ್ರೀ ಮನೋರಮೆ ಎಂಬವಳನು ಕಾಣಿಸಿಕೊಂಡು, ಆಮೇಲೆ ತನಗೆಂದು ಪ್ರತ್ಯೇಕವಾಗಿ ಕಟ್ಟಿಸಿದ್ದ ಅರಮನೆಗೆ ಬಂದು, ಅಲ್ಲಿ ತನ್ನ ಮಲಗುವ ಮನೆಯ ಸಮೀಪದಲ್ಲಿ ಬಂದು, ಮನೆಯಲ್ಲಿ ಇಂದ್ರಾಯುಧವನ್ನು ಕಟ್ಟಿಸಿ, ಅಲ್ಲಿ ಕೆಲವು ದಿನ ಸುಖದಲ್ಲಿ ಇರುತ್ತಿದ್ದನು. ಒಂದು ದಿನ ದೊಡ್ಡ ಅರಮನೆಯಲ್ಲಿ ಇರುವ ಕೈಲಾಸನೆಂಬ ಅಣ್ಣಾಗಳು ಸರ್ವಾಭರಣಭೂಷಿತೆಯಳಾಗಿ ಇರುವ ಒಂದು ಹೆಣ್ಣಾನು ಕರೆದುಕೊಂಡು ಬಂದು, ಚಂದ್ರಾಪೀಡನ ಬಳಿಯಲ್ಲಿ ನಿಂದು ಕೈಮುಗಿದು—ಅಮ್ಮನವರು ಬುದ್ಧಿಗಲಿಸಿ ಕಳುಹಿಸಿದ್ದಾರೆ. ಈಹೆಣ್ಣು ಕುಲೂತರಾಯನ ಮಗಳು; ಕುಲೂತರಾಯನ ಪಟ್ಟಣವ ಸೂಱೆಗೊಳುವಾಗ ಸಿಕ್ಕಿದಳು, ಅರಸಿನವರ ಅಪ್ಪಣೆಯ ಮೇರೆ ನನ್ನ ವಶಕ್ಕೆ ತೆಗೆದುಕೊಂಡೆನು; ಪತ್ರಲೇಖೆಯೆಂಬ ಹೆಸರಿಟ್ಟು ವಿದ್ಯಾಬುದ್ಧಿಗಳ ಕಲಿಸಿ ಬಹುಸ್ನೇಹದಿಂದ ಸಾಕಿಕೊಂಡಿದ್ದೆವು; ಇವಳನು ಸಂಜೆಯೂಳಿಗಕೆ ಇರಿಸಿಕೊಂಡು ಬರಬೇಕು; ಎಂದು ಅಮ್ಮನವರು ಹೇಳಿದರು—ಎಂದು ಹೇಳಿ, ಆಹೆಣ್ಣಾನು ಒಪ್ಪಿಸಿ ಹೋದಲ್ಲಿ; ಚಂದ್ರಾಪೀಡನು ರಾಣಿ ಹೇಳಿ ಕಳುಹಿಸಿದ್ದ ಮಾತಿನಲ್ಲಿ ವಿಶ್ವಾಸದಿಂದಲೂ, ಆಪತ್ರಲೇಖೆಯ ಗುಣಾತಿಶಯದಿಂದಲೂ ಅವಳಿಗೂ ಇವನಲ್ಲಿ ಇವನಿಗೂ ಅವಳಲ್ಲಿ ಸ್ನೇಹ ಬೆಳವಳಿಕೆಯಾಗಿ ಮಲಗುವಲ್ಲಿ ಕುಳ್ಳಿರುವಲ್ಲಿ ನಿಂತಿರುವಲ್ಲಿ ಹೊಱಕ್ಕೆ ಹೊರಡುವಲ್ಲಿಯೂ ಪತ್ರಲೇಖೆಯು ಸಮೀಪದಲ್ಲಿಯೆ ಕಾದುಕೊಂಡು ಊಳಿಗವ ಮಾಡಿಕೊಂಡಿದ್ದಳು.

ಈರೀತಿ ಸುಖದಲ್ಲಿ ಕೆಲವು ಕಾಲ ನಡೆಯುತ್ತಿರಲಾಗಿ ತಾರಾಪೀಡನು ಚಂದ್ರಾಪೀಡನಿಗೆ ಯುವರಾಜಪಟ್ಟವ ಕಟ್ಟಿಕೊಟ್ಟು, ದಿಗ್ವಿಜಯಕ್ಕೆ ಕಳುಹಿಸಲಾಗಿ, ಚತುರಂಗಬಲ ಸಹ ದಂಡು ತೆರಳುವಲ್ಲಿ, ಪತ್ರಲೇಖೆ ಸಹ ಚಪ್ಪರಮಂಚದ ಮೇಲೆ ಏಱಿಕೊಂಡು ಮೂಱುದಿಕ್ಕನು ಜಯಿಸಿ ಉತ್ತರದಿಕ್ಕಿನಲ್ಲಿ ಹಿಮವತ್ಪರ್ವತದ ಸಮೀಪದಲ್ಲಿ ಹೇಮಕೂಟವೆಂಬ ಬೇಡರುಗಳ ಸಂಸ್ಥಾನವಾಗಿರುವ ಸುವರ್ಣಪುರವೆಂಬ ಪಟ್ಟಣವನ್ನು ಕಟ್ಟಿಕೊಂಡು, ಹೊಱಟು ಮೂಱು ವರುಷವಾದುದಱಿಂದ, ಬಲವನು ಸಂತರಿಸಿ ಕೊಂಬ ನಿಮಿತ್ತವಾಗಿ ಅಲ್ಲಿ ಕೆಲವು ದಿನವಿದ್ದು.

ಒಂದು ದಿವಸ ಸರ್ವಬಲ ಬೇಟೆ ಹೊರಟಿಟು ಹೋದಲ್ಲಿ, ಆ ಬಳಿಯಲ್ಲಿ ಎರಡು ಕಿನ್ನರಪಕ್ಷಿಗಳ ಕಂಡು ಬೆಂಬಿಡದೆ ಹೋಗಲಾಗಿ; ಸಕಲಬಲ ಹಿಂದಕ್ಕೆ ಬಿದ್ದು, ಪಕ್ಷಿಗಳು ಸಿಕ್ಕದೆ ಅತೆಗಾವುದವಾಯು ಮೇಲೆ ಬೆಟ್ಟವನೇರಿ ಹೋಗಲಾಗಿ, ಕುದುರೆ ಹೋಗುವುದಕ್ಕೆ ಆಗದುದರಿಂದ ಆಬಳಿಯಲ್ಲಿ ನಿಂದು ಕಣ್ಗೆಟ್ಟು ಯೋಚಿಸಿದನು:—ಸಕಲ ಬಲವು ಹಿಂದಕ್ಕೆ ಸಿಕ್ಕಿದುವು; ಹಕ್ಕಿಗಳು ಹಾರಿ ಹೋದುವು; ದಿಕ್ಕುವಳಿಯು ಕಾಣಿಸಲಿಲ್ಲ; ಕುದುರೆಗೂ ಕಣ್ಗೆಡುದೋರಿ ಬಾಯೂರುತಿದೆ, ಎಂದು ಬಳಸಿ ನೋಡುತ್ತಿರುವಾಗ ಆನೆಪಜ್ಜೆಗಳಲ್ಲಿ ಹತ್ತಿದ ಕೆಸರಿಯಿ ತಾವರೆದಂಟುಗಳು ಬಿದ್ದಿರುವ ದಾರಿಯನು ಕಂಡು ಆದಾರಿಯಲ್ಲೇ ಹೋಗಿ, ಅಚ್ಛೋದಸರಸ್ಸು ಎಂಬ ಕೊಳವನು ಕಂಡು, ಸಂತೋಷದಿಂದ ಕುದುರೆಯನು ನೀರ ಕುಡಿಯಿಸಿ, ತಾನೂ ಕೈಕಾಲುಗಳ ತೊಳೆದುಕೊಂಡು, ಮುಖ ಮಜ್ಜನವ ಮಾಡಿಕೊಂಡು ಜಲಪಾನವ ಮಾಡಿ, ಇಂದ್ರಾಯುಧವನು ಒಂದು ಮರಕ್ಕೆ ಕಟ್ಟಿ, ಸಮೀಪದಲ್ಲಿ ಬೆಳೆದಿರುವ ಹುಲ್ಲನು ತನ್ನ ಕೈಯಿಂದಲೇ ಕೊಯ್ದು ತಿನ್ನಿಸಿ, ತಾನು ತಾವರೆಗೆಣಸನೆ ಮೆಲ್ದು, ನೆಳಲಲ್ಲಿ ತಳಿರುಗಳ ಹಾಸಿಕೊಂಡು ಮಲಗಿರುವ ಸಮಯದಲ್ಲಿ; ಒಂದು ಸಂಗೀತಧ್ವನಿಯು ಕೇಳಿಸಲಾಗಿ, ಆಶ್ಚರ್ಯಪಟ್ಟು ಆದಿಕ್ಕನ್ನು ನೋಡಿ ಆರನ್ನೂ ಕಾಣದೆ, ಇದನು ನೆಲೆಗಾಣಬೇಕು ಎಂದು ಇಂದ್ರಾಯುಧವನು ಏರಿಕೊಂಡು ಸಂಗೀತಧ್ವನಿವಿಡಿದು, ಮುಂದೆ ನಡೆವ ಹುಲ್ಲೆಗಳ ಬಳಿವಿಡಿದು ಹೋಗಿ, ಕೈಲಾಸಪರ್ವತದ ವಾಯವ್ಯಭಾಗದಲ್ಲಿ ಚಂದ್ರಪ್ರಭವೆಂಬ ಕಿರುಬೆಟ್ಟದ ತಳದಲ್ಲಿ ಸಿದ್ಧಾಶ್ರಮದಲ್ಲಿ ಚಂದ್ರಕಾಂತ ಶಿಲೆಯಲ್ಲಿ ಕಟ್ಟಿದ ನಾಲ್ಕು ಕಂಭದ ಮಂಟಪದಲ್ಲಿ ಮೌಕ್ತಿಕಲಿಂಗದ ಸನ್ನಿಧಾನದಲ್ಲಿ ಕುಳಿತು ವೀಣೆಯ ಶ್ರುತಿಗೆ ಸರಿಯಾಗಿ ಗಾನಮಾಡುತ್ತಿರುವ ದಿವ್ಯಕನ್ನಿಕೆಯೊಬ್ಬಳನು ಕಂಡು, ಕುದುರೆಯನಿಳಿದು ಮರಕ್ಕೆ ಕಟ್ಟಿ, ಪರಮೇಶ್ವರನಿಗೆ ಕೈಮುಗಿದು, ಇವಳ ವೃತ್ತಾಂತವನು ಕಾಣಬೇಕೆಂದು ಸಮಯವ ಕಾದು, ಕಂಭವ ಸೇರಿ ನಿಂತಿರಲಾಗಿ; ಅವಳು ಪದನ ಮಾಡಿ ಮುಗಿದಾಗ ಎದ್ದು ಪರಮೇಶ್ವರನಿಗೆ ಅಷ್ಟಬಿದ್ದು ಪ್ರದಕ್ಷಿಣೆಯ ಮಾಡುವಾಗ ಚಂದ್ರಾಪೀಡನನು ಕಂಡು ಸಂತೋಷದಿಂದ—ನಮ್ಮ ಆಶ್ರಮಕ್ಕೆ ಅಪೂರ್ವವಾಗಿ ಬಂದಿರಿ, ಅತಿಥಿಪೂಜೆಯನು ಕೈಕೊಳ್ಳಬೇಕು ಎಂದು, ಸಂಗಡಲೆ ಕರೆದುಕೊಂಡು ಹೋಗಿ, ತಾನುವಾಸವಾಗಿರುವ ಗುಹೆಯ ಬಳಿಯಲ್ಲಿ ಕುಳ್ಳಿರಿಸಿ, ವೀಣೆಯ ಕೆಳಗೆ ಇರಿಸಿ; ಸಮೀಪದಲ್ಲಿ ಹರಿವ ಬಚ್ಚರದ ನೀರನು ತಾವರೆಯೆಲೆಗಳಲ್ಲಿ ಪೊಟ್ಟಣಗಳ ಕಟ್ಟಿ, ಅರ್ಘ್ಯ

ಪಾದ್ಯಾಚಮನೀಯಗಳನು ಕೊಡಲಾಗಿ; ಚಂದ್ರಾಪೀಡನು ಭಯಭಕ್ತಿಯಿಂದ ತೆಗೆದುಕೊಂಡು ಕ್ಷಣಮಾತ್ರ ಬಳಲಿಕೆಯ ಪರಿಹರಿಸಿದಮೇಲೆ, ಚಂದ್ರಾಪೀಡನು ದಿಗ್ವಿಜಯಕ್ಕೆ ಹೊರಟು ಇಲ್ಲಿಗೆ ಬರುವ ಪರ್ಯಂತ ಬಂದ ವೃತ್ತಾಂತವಂ ಕೇಳಿ; ಆಮೇಲೆ ತನ್ನಾಶ್ರಮದಲ್ಲಿ ಬೆಳೆದಿರುವ ಮರಗಳ ಬಳಿಯಲ್ಲಿ ನಿಂತು ಭಿಕ್ಷವನು ಕೇಳಲಾಗಿ; ಅಮೃತಮಯವಾದ ಫಲಗಳಿಂ ತನ್ನ ಕೈಯ್ಯಲಿದ್ದ ಪಾತ್ರೆಯು ತುಂಬ ಲಾಗಿ; ಅದನು ಚಂದ್ರಾಪೀಡನು ಆಶ್ಚರ್ಯದಿಂ ತೆಗೆದುಕೊಂಡು ಕುದುರೆ ಸಹ ನಿರ್ಝರಪ್ರವಾಹದ ಸಮೀಪಕ್ಕೆ ಹೋಗಿ ಸ್ನಾನವಮಾಡಿ ಫಲಾಹಾರವ ಮಾಡಿ ಕೊಂಡು ಅವಳು ಫಲಾಹಾರ ಮಾಡುವ ಪರ್ಯಂತ ಕಾದುಕೊಂಡಿರ್ದ, ಮಹಾ ಶ್ವೇತೆಯು ಫಲ ಮೂಲ ಮೊದಲಾದ ಆಹಾರವ ಮಾಡಿಕೊಂಡು ಆಶ್ರಮದ ಮುಂದಣ ಕಲ್ಲಿಯ ಮೇಲೆ ಹರುಷವಾಗಿ ಕುಳಿತಿರುವ ಸಮಯದಲ್ಲಿ; ಚಂದ್ರಾ ಪೀಡನು ವಿನೀತನಾಗಿ ಆಬಳಿಗೆಬಂದು ಅತಿದೂರವೆನಿಸದೆ ಅತಿಹತ್ತಿರವೆನಿಸದೆ ಕುಳಿತುಕೊಂಡು ಒಂದು ಕ್ಷಣಮಾತ್ರ ಅವಳ ಅಭಿಪ್ರಾಯವನು ಅರೈದು, ಹರುಷ ವಾಗಿರುವುದಂ ತಿಳಿದು ವಿನಯಗೂಡಿ ನುಡಿದ ಬಗೆಯೆಂತೆಂದೊಡೆ:—

ನಾನು ನಿಮ್ಮಯೋಗಕ್ಷೇಮವನು ಕೇಳುವುದಕ್ಕೆ ಸಮರ್ಥನಲ್ಲದಿದ್ದರೂ ನೀವು ನನ್ನಲ್ಲಿ ನಡೆಸುವ ದಯೆದಿಂದ ಉಂಟಾದ ಮನಸ್ಸಿನ ಉತ್ಸಾಹವೂ ಈಮನುಷ್ಯಸ್ವಭಾವದಿಂದುಂಟಾದ ಅಲ್ಪಬುದ್ಧಿಯೂ ಬಲುಮೆಯಮಾಡಿ ನನ್ನ ಕೈಯಿಂದಲೇ ಕೇಳಿಸುತಿದ್ದೀತು. ಲೋಕದಲ್ಲಿ ಅಲ್ಪಬುದ್ಧಿಯವರಿಗೆ ಪ್ರಭುಗಳು ಎಷ್ಟುಮಾತ್ರ ದಯವಿಟ್ಟು ನಡೆಸಿದರೂ ಆಷ್ಟರಿಲ್ಲಿಯೇ ಅಹಂಕಾರ ಹುಟ್ಟುವುದು. ಒಂದಿಷ್ಟು ಹೊತ್ತು ಸಮೀಪದಲ್ಲಿ ಸಮ್ಮುಖದಲ್ಲಿ ಕುಳಿತಿದ್ದ ಮಾತ್ರಕ್ಕೆ ಅರಸು ಗಳಲ್ಲಿ ಬಹು ಪಂಚರ್ಯವೆಂದು ಬುದ್ಧಿ ಹುಟ್ಟುವುದು. ಅರಸುಗಳು ತನ್ನಲ್ಲಿ ಅಣು ಮಾತ್ರವು ಪರಿಚಿಸಿದ ಮಾತ್ರದಲ್ಲಿಯೆ ತನ್ನಲ್ಲಿ ಅಂತರಂಗವೆಂದೆ ಅಜ್ಞಯಲ್ಪಡು ವುದು. ಹಾಗೆ ನಾನು ಕೇಳುವುದರಿಂದ ನಿಮ್ಮ ಮನಸ್ಸಿನಲ್ಲಿ ನೋವು ಹುಟ್ಟದೆ ಇದ್ದರೆ ಹೇಳಿ ತನ್ನ ಕೃತಾರ್ಥನ ಮಾಡಬೇಕೆಂಬ ಹಾಗೆ ಇಚ್ಛೈಸುತ್ತಿದ್ದೇನೆ. ನಿಮ್ಮನು ಕಂಡಾರಭ್ಯವಾಗಿ ಈರೀತಿಯಲ್ಲೂ ಕೇಳಬೇಕೆಂಬ ಹಾಗೆ ಕೌತುಕ ಉಂಟಾಗಿದ್ದೀತು. ಮರುತ್ತುಗಳು, ಋಷಿಗಳು, ಗಂಧರ್ವರು, ಗುಹ್ಯಕರು, ಅಪ್ಸ ರಸ್ಸುಗಳ ಕುಲಗಳಲ್ಲಿ ಆವ ಕುಲ, ಜನ್ಮಿಸಿದುದರಿಂದ, ಹೆಚ್ಚಿಗೆವಡೆದು ಇದೆ? ಏತಕ್ಕೆ ಹೂವಿನಹಾಗೆ ಮೃದುವಾಗಿರುವ ಹೊಸಜವ್ವನದಲ್ಲಿ ವ್ರತವಮಾಡಿ ಕೊಂಡುದು ? ಈ ಅವಸ್ಥೆಯೆಲ್ಲ, ಈ ಆಕಾರವೆಲ್ಲ! ಈಮೆಯ್ಯ ಹೊಗರೆಲ್ಲ, ಈ

ಇಂದ್ರಿಯನಿಗ್ರಹವೆಲ್ಲಿ! ಇದು ನನಗೆ ಆಶ್ಚರ್ಯವೆಂಬ ಹಾಗೆ ಕಾಣುತ್ತದೆ. ಏನು ಕಾರಣ ಅನೇಕ ಸಿದ್ಧಸಾಧ್ಯರುಗಳಿರುವ ದೇವಲೋಕದ ಆಶ್ರಮಗಳನು ಬಿಟ್ಟು ಮನುಷ್ಯಸಂಚಾರದಿಂದ ಈವನದಲ್ಲಿ ಇಪ್ಪರೇ ಇದ್ದೀರಿ? ಅದೇ ಪಂಚಭೂತಗಳಿಂದುಂಟಾದ ಶರೀರವು ಇದೇನು ಇಷ್ಟೊಂದು ಈಬಗೆ ಶುಭ್ರವಾಗಿದೆ? ಈಬಗೆಯು ನಾವು ಮತ್ತೆಲ್ಲಿಯೂ ಕಾಣಲಿಲ್ಲ. ಇದನು ತಿಳಿಯ ಹೇಳಬೇಕು—ಎಂದು ಕೇಳಲಾಗಿ;

ಮಹಾಶ್ವೇತೆಯು ಏನೋ ಮನಸ್ಸಿನಲ್ಲಿ ಚಿಂತಿಸುತ್ತ ಒಂದು ಕ್ಷಣಮಾತ್ರ ಎದ್ದು ದೊಡ್ಡದಾಗಿ ತನ್ನಲ್ಲಿರುವ ಹೃದಯದ ಸುದ್ದಿಯನು ತೆಗೆದುಕೊಂಡು ಹೊರಡುವಂತೆ, ತಪೋರಸ ಹೊರಸೂಸುವಂತೆ, ಕಣ್ಣಿಗೆ ಕಾಣಲ್ಪಡುವ ನಿಟ್ಟೆಯನು ಕರಗಿಸಿಕೊಂಡು ಬರುವಂತೆ, ಅಚ್ಚಬಿಳಿದಾಗಿ ಕಪೋಲಸ್ಥಳದಲ್ಲಿ ಬಿದ್ದು, ಹಚ್ಚಿದ ಕಂಠಮಾಲೆಯ ಹರದ ಹಣಂಗಳಂತೆ ನಾನಾ ನೀರೆಗಳಿಂದ ಮುಸುಕಿದ ಮೊಲೆಗಳ ಮೇಲೆ ಬಿದ್ದು, ಸಿಡಿದ ತುಂತುರುಹನಿಗಳಾದ ಕಣ್ಣೀರನು ಕರೆದು ಕಣ್ಣು ಮುಚ್ಚಿ ಅಳುತ್ತಿದ್ದಳು.

ಆಬಗೆಯ ದುಃಖವನು ಕಂಡು ಚಂದ್ರಾಪೀಡನು ಯೋಚಿಸಿದನು. ಈಬಗೆಯ ಆಕಾರಗಳನು ದುಃಖವೇ ಆವರಿಸಿಕೊಳ್ಳುತ್ತದೆ; ಅವಶ್ಯವಾಗಿ ಶರೀರವುಂಟಾದವರನು ಸಂತಾಪವು ಸೋಕದೆ ಬಿಡದು, ಸುಖದುಃಖ ಮೊದಲಾದ ದ್ವಂದ್ವಗಳನು ಮೀರಲಿಲ್ಲ; ಆದರೆ ಇಂತಹ ಆಕಾರಕ್ಕೆ ಇಷ್ಟು ದುಃಖವಾಗುವಲ್ಲಿ ಬಲುದೊಡ್ಡ ಕಾರಣವುಂಟಾಗಿರಬೇಕು. ನಾನು ಈವೃತ್ತಾಂತವ ಕೇಳಿದುದು ಬಲು ತಪ್ಪಾಯಿತು. ಇಂತೆಂದು ಶೀಘ್ರದಲ್ಲಿ ಎದ್ದು ಒಜ್ಜರದಿಂದ ಹರಿವ ನೀರನ್ನು ಬಗಸೆಯಲಿ ತಂದು, ಅವ್ವ ನೀವು ಕಣ್ಣಿಗೆ ತೊಳೆದುಕೊಳ್ಳಿ ಎಂದು ಹೇಳುವಲ್ಲಿ, ಮತ್ತೆ ಮತ್ತೆ ದುಃಖವೇರುತ್ತಿದ್ದರೂ ಅವನು ಹೇಳುವ ದಾಕ್ಷಿಣ್ಯದಿಂದ ಕಣ್ದೆರೆದು ನಾರುಸೀರೆಯ ಸೆರಗನು ನೆನೆಯಿಕ್ಕಿ ಕಣ್ಣು ತೊಳೆದುಕೊಂಡು ನಿಡುಸುಯ್ಯನುಸುಯ್ದು ಮೆಲ್ಲಮೆಲ್ಲನೆ ನುಡಿದಳು:—

ಕೇಳು, ರಾಜಕುಮಾರನೆ! ಕ್ರೂರದೇಹಿಯಾಗಿ ಭಾಗ್ಯಹೀನೆಯಾಗಿ ಪಾಪಿಷ್ಠೆಯಾಗಿರುವಂತಹ ನಾನು ಹುಟ್ಟಿದುದು ಬೆಳೆದುದು ಈಬಗೆಯಾದುದು. ಈವೃತ್ತಾಂತಗಳು ನಿನ್ನಂತಹ ಪುರುಷರಿಗೆ ಹೇಳತಕ್ಕವಲ್ಲ; ನೀನು ಕೇಳತಕ್ಕವಲ್ಲ. ಆದರೆ ನೀನು ಕೇಳಬೇಕೆಂದರೆ ಹೇಳುವೆನು, ಕೇಳು. ಸ್ವರ್ಗದಲ್ಲಿ ಅಪ್ಸರ

ಸ್ತ್ರೀಯರುಗಳು ಇರುವರೆಂದು ಕೇಳಿಬಲ್ಲೆಯಷ್ಟೆ. ಅವರಲ್ಲಿ ಬ್ರಹ್ಮದೇವರ ಮನಸ್ಸಿನಿಂದ ಹುಟ್ಟಿದುದು ಒಂದು ಕುಲ; ವೇದದಿಂದುಂಟಾದುದು ಒಂದು, ಯಜ್ಞೇಶ್ವರನಿಂದುಂಟಾದುದು ಒಂದು, ವಾಯುವಿನಿಂದ ಒಂದು, ಭೂಮಿಯಿಂ ದೊಂದು, ಅಮೃತದಿಂದೊಂದು, ನೀರಿನಿಂದೊಂದು, ಸೂರ್ಯಕಿರಣದಿಂದೊಂದು, ಚಂದ್ರಕಿರಣದಿಂದೊಂದು, ಮಿಂಚುಗಳಿಂದೊಂದು, ಯಮನಿಂದೊಂದು, ಮನ್ಮಥ ನಿಂದೊಂದು, ಅಂತು ಹನ್ನೆರಡು ಕುಲ. ಮುನಿಯೆಂದು ಅರಿಷ್ಟೆಯೆಂದು ದಕ್ಷ ಬ್ರಹ್ಮನ ಹೆಣ್ಣುಮಕ್ಕಳಿಬ್ಬರಲ್ಲಿ ಗಂಧರ್ವರು ಹುಟ್ಟಿದ ಕುಲ ಎರಡು. ಅಪ್ಸರ ಸ್ತ್ರೀಯರಲ್ಲಿ ಈಬಗೆಯು ಹದಿನಾಲ್ಕು ಕುಲಗಳುಂಟು. ಇವರಲ್ಲಿ ಮುನಿಯೆಂಬವಳ ಮಕ್ಕಳು ಚಿತ್ರಸೇನ ಮೊದಲಾದ ಹದಿನೈದು ಮಂದಿ ಮಕ್ಕಳಿಗಿಂತಲೂ ಶ್ರೇಷ್ಠ ನಾಗಿ ಚಿತ್ರರತ್ನನೆಂಬ ಹದಿನಾರನೆಯವಂ ದೇವೇಂದ್ರಂಗೆ ಸ್ನೇಹಿತನೆನಿಸಿ ಸಕಲ ಗಂಧರ್ವರಿಗೂ ಅರಸಾಗಿ ಇಲ್ಲಿ ಸಮೀಪದಲ್ಲಿ ಭಾರತವರ್ಷಕ್ಕೆ ಬಡಗಲಾಗಿರುವ ಕಿಂಪುರ ವರ್ಷದ ಎಲ್ಲೆಗಟ್ಟಿನಲ್ಲಿ ಇರುವ ಹೇಮಕೂಟವೆಂಬ ಪರ್ವತದಲ್ಲಿ ರಾಜ್ಯವನಾಳುತ್ತ ಅನೇಕ ಗಂಧರ್ವರು ಸಹ ಇದ್ದನು. ಈ ಚೈತ್ರರಥವೆಂಬ ತೋಪನು ಈ ಅಚ್ಛೋದವೆಂಬ ಕೊಳವನು ಈ ದೇವಸ್ಥಾನವನು ಕಟ್ಟಿಸಿ ಇಲ್ಲಿ ಈಶ್ವರಪ್ರತಿಷ್ಠೆಯನು ಮಾಡಿಸಿದನು. ಅರಿಷ್ಟೆಯೆಂಬವಳ ಮಕ್ಕಳು ತುಂಬುರು ಮೊದಲಾದ ಆರುಮಂದಿಗಿಂತಲೂ ದೊಡ್ಡವನಾದ ಹಂಸನೆಂಬ ಜ್ಯೇಷ್ಠಕುಮಾರನು ಆರಾಜ್ಯವನು ಪಡೆದು ಆಬೆಟ್ಟದಲ್ಲಿ ಗಂಧರ್ವರು ಸಹ ಇರುವಲ್ಲಿ ಚಂದ್ರಕಿರಣ ದಿಂದುಂಟಾದ ಅಪ್ಸರಸ್ತ್ರೀಯ ಕುಲದಲ್ಲಿ ಹುಟ್ಟಿದ ಶುಭ್ರವರ್ಣವಾಗಿ ಗೌರೀ ದೇವಿಗೆ ಸರಿಯಾಗಿ ಗೌರಿಯೆಂಬ ಕನ್ನಿಕೆಯೊಬ್ಬಳು ಕ್ಷೀರಸಮುದ್ರವನ್ನು ಸೇರುವ ಆಕಾಶಗಂಗೆಯಂತಂತೆಂಬವಳು ಈತನನು ಸೇರಿ ಇವನ ಪಟ್ಟದ ಸ್ತ್ರೀ ಯಾಗಿ; ಆಕಾರದಿಂದಲೂ ಗುಣದಿಂದಲೂ ಒಬ್ಬರಿಗೊಬ್ಬರು ಸಮಾನರಾಗಿರು ವುದರಿಂದ ಪರಮಾನಂದಭರಿತರಾಗಿರುವ ಆ ಹಂಸನಿಗೂ ಈ ಗೌರಿಗೂ ಈಬಗೆ ಯಲ್ಲಿ ಲಕ್ಷಣಹೀನೆಯಾಗಿ ಕೇವಲ ದುಃಖಭಾಜನೆಯಾಗಿ ನಾನೊಬ್ಬಳೆ ಹೆಣ್ಣು ಮಗಳಾಗಿ ಹುಟ್ಟಿದೆನು. ಅವರು ಬಹುದಿನ ಮಕ್ಕಳಿಲ್ಲದ ಕಾರಣ ಗಂಡುಮಗ ನಾದುದಕಿಂತಲೂ ಅಧಿಕ ಸಂತೋಷಯುಕ್ತರಾಗಿ ಹತ್ತನೆಯ ದಿವಸದಲ್ಲಿ ಅನೇಕ ಸಂಭ್ರಮದಲ್ಲಿ ತನ್ನ ಶರೀರವರ್ಣಕ್ಕೆ ಅನುಗುಣವಾಗಿ ಮಹಾಶ್ವೇತೆಯೆಂಬ ನಾಮಕರಣವನು ಮಾಡಿದರು. ಆಮೇಲೆ ನಾನು ನಮ್ಮ ತಂದೆಯ ಅರಮನೆ ಯಲ್ಲಿ ಚಿಕ್ಕಂದಿನಲ್ಲಿ ತೊದಲುನುಡಿಗಳ ನುಡಿಯುತ್ತ, ಸುಸ್ವರವಾದ ವೀಣೆಯ

ಮರ್ಯಾದೆಯಲ್ಲಿ ಗಂಧರ್ವರ ತೊಡೆಗಳಮೇಲೆ ಕುಳಿತು, ಸ್ನೇಹಶೋಕಾಯಾಸ ಗಳಖಿಯದ ಸಂತೋಷಮಯವಾದ ಬಾಲ್ಯವನು ಕಳೆದು, ಮೈಯಲ್ಲಿ ಯೌವನ ಇಂಬುಗೊಂಡಮೇಲೆ ಒಂದು ದಿವಸ ನನ್ನ ತಾಯಿಸಹ ವಸಂತಕಾಲವಾದಕಾರಣ ಈತೆರದಲ್ಲಿ ಚಿಗುತು ಹೂವಾಗಿ ಇರುವ ತೋಪುಗಳ ಸೌಂದರ್ಯವನು ನೋಡುತ್ತ, ಸ್ನಾನನಿಮಿತ್ತವಾಗಿ ಈ ಅಚ್ಛೋದ ಸರಸ್ಸಿನ ಸಮೀಪಕ್ಕೆ ಬಂದು, ಸಂಗಾತಿಗಳು ಸಹ, ಎಡಬಲದಲ್ಲಿ ಎಲ್ಲಿ ಹೋದರೂ ವನ ಆನಂದವಾಗಿದೆ, ಈ ಮರ ಹೂತಿದೆ, ಈ ನೆಲು ಸೊಗಸಾಗಿದೆ, ಎಂದು ಒಂದಖಿಂದ ಒಂದು ವಿನೋದಗಳ ನೋಡುತ್ತ ಮೈಮರೆದು ತಿರುಗುತ್ತಿರುವ ಸಮಯದಲ್ಲಿ; ಒಂದು ಪ್ರದೇಶದಲ್ಲಿ ಬೀಸುವ ಗಾಳಿಯು ಒಂದುವಿಡಿದು ಎಡಬಲದಲ್ಲಿರುವ ನಾನಾವಿಧವಾದ ಪುಷ್ಪ ಜಾತಿಯ ಪರಿಮಳವನು ಮೆಟ್ಟಿ ನಾ ಮುಂಚು ತಾ ಮುಂಚು ಎಂದು ಬಂದು ಹತ್ತುವ ತುಂಬಿಗಳ ತೃಪ್ತಿವಡಿಸುತ್ತ ಬಹುವೆಗ್ಗಳವಾದುದರಿಂದ ಘ್ರಾಣೇಂದ್ರಿಯವನು ಲೇಪಿಸುವಂತೆ ತುಂಬುವಂತೆ ದಣಿಸುವಂತೆ ಇರುವ ಅಪೂರ್ವವಾದ ಒಂದು ದಿವ್ಯಗಂಧವನಾಘ್ರಾಣಿಸಿ, ಹೆಣ್ಣುಂಬಿಯವೊಲು ಪರವಶೆಯಾಗಿ, ಅರೆಗಣ್ಮುಚ್ಚಿ ನಾಲ್ಕು ಹಜ್ಜೆ ನಡೆವುದಕ್ಕೊಳಗಾಗಿ; ಮನ್ಮಥ ಹೋದ ಶೋಕದಿಂದ ತಪಸ್ಸುಮಾಡುವ ವಸಂತನಂತೆ, ಪರಿಪೂರ್ಣನಾಗಬೇಕೆಂದು ವ್ರತವನಾಚರಿಸುವ ಬಾಲಚಂದ್ರನಂತೆ, ಪರಮೇಶ್ವರನ ಜಯಿಸಬೇಕೆಂದು ನೇಮದಿಂದಿರುವ ಮನ್ಮಥನಂತೆ; ಮಹಾತೇಜಸ್ವಿಯಾದುದಖಿಂದ ಮಿಂಚಿನ ಪಂಜರದಲ್ಲಿರುವಂತೆ; ಸೂರ್ಯಮಂಡಲದಲ್ಲಿರುವಂತೆ, ನಾರಿ ಸೀರೆಯನ್ನುಟ್ಟು, ಕಮಂಡಲುಜಪಸರವಿಡಿದು, ಜಡೆಯ ಧರಿಸಿ ಸರ್ವಾವಯವಸೌಂದರ್ಯವಂತನಾಗಿ ಹೊಸಜವ್ವನದ ಮುನಿಕುಮಾರನೊಬ್ಬನು ತನ್ನ ಸ್ನೇಹಿತ ಸಹ ಸ್ನಾನಕ್ಕೆ ಬರುತ್ತಿರಲಾಗಿ; ಕಂಡು ಅವನ ಕಿವಿಯಲ್ಲಿರುವ ದಿವ್ಯವಾದೊಂದು ಪೂಗೊಂಚಲನು ನೋಡಿ ಈಪರಿಮಳ ಈ ಗೊಂಚಲಿನದು ಎಂದು ನಿಶ್ಚಯಿಸಿ, ಅವನನು ಮತ್ತುಮತ್ತು ನೋಡುತ್ತ ಮನಸ್ಸಿನಲ್ಲಿ ಯೋಚಿಸಿದೆನು:—ಬ್ರಹ್ಮದೇವರ ಬೊಕ್ಕಸದಲ್ಲಿ ಅಂದವುಳ್ಳವರ ಸೃಜಿಸುವ ಸಾಮಗ್ರಿಯು ಮಿತವಿಲ್ಲದೆ ಇರಬೇಕು; ಹಾಗಿಲ್ಲದೆ ಇದ್ದರೆ ಬಹು ಅಂದವಾಗಿರುವ ಮನ್ಮಥನ ಸೃಜಿಸಿದ ಮೇಲೆ ಆವನಿಗಿಂತಲೂ ಅಂದವುಳ್ಳ ಇವನನು ಅವ ರೀತಿಯಲ್ಲಿ ಸೃಜಿಸಬೇಕು ? ಬ್ರಹ್ಮನು ತಾವರೆಗಳನು ಚಂದ್ರಮಂಡಲವನು ಉಂಟುಮಾಡಿ ಅಭ್ಯಾಸವನು ಮಾಡಿಕೊಂಡು ಈತನ ಮುಖವನು ಸೃಜಿಸಿದನು; ಇನಿತಲ್ಲದಿದ್ದರೆ ಒಂದೆ ಆಕಾರದಲ್ಲಿ ಎರಡು ಮೂರು ವಸ್ತುಗಳನು ಏನುಕಾರಣ

ವುಂಟುಮಾಡುವನು ? ಕೃಷ್ಣಪಕ್ಷದಲ್ಲಿ ದಿನದಿನಕ್ಕೆ ಕ್ಷೀಣಿಸುವ ಚಂದ್ರಕಳೆಗಳನು ಸೂರ್ಯನು ಸುಷುಮ್ನೆಯೆಂಬ ಕಿರಣದಿಂದ ಪಾನಮಾಡುವನು ಎಂಬ ಶಾಸ್ತ್ರವು ಸತ್ಯವೇ ಸರಿ. ಆ ಚಂದ್ರ ಕಿರಣಗಳೆಲ್ಲವೂ ಈಶರೀರವನು ಸೇರುತ್ತಲಿವೆ; ಹಾಗಲ್ಲದಿದ್ದರೆ ಉಗ್ರತಪಸ್ಸಿನಿಂದ ಕ್ಲೇಶಪಡುವವನಿಗೆ ದಿನದಿನಕ್ಕೆ ಕಳೆಕುಂದದೆ ಹೆಚ್ಚಿಬರುವುದಕ್ಕೆ ಕಾರಣವೇನು ? ಎಂದು ಚಿಂತಿಸುತ್ತಿರುವ ಎನ್ನ ಸುಗುಣದೋಷಂಗಳನು ಯೋಚಿಸಲೆಳಸದೆ ಕಣ್ಣುವಿಡಿದ ಬಳಿಯಲ್ಲಿ ಕಾಣಿಸಿಕೊಂಬ ಮನ್ಮಥನು ಪರವಶಗೊಳಿಸಿದನು. ಆಮೇಲೆ ಉಸಿರುವಿಡುವುದನು ಎದೆಹೊಯ್ಯುವುದನು ಮರೆತು ಪ್ರೀತಿಯಿಂದ ಕಿರುಗಣ್ಣು ಬಿಟ್ಟು ಓರೆ ನೋಟದಿಂದ ನೋಡುವಲ್ಲಿ, ಆಸೆಯಿಂದವನ ಮುಖಲಾವಣ್ಯವನು ಪಾನವ ಮಾಡುವಂತೆ, ಆದೇನೋ ಒಂದನು ಕೇಳುವಂತೆ, ನಿನ್ನವಳು ಎಂದು ಹೇಳುವಂತೆ, ತನ್ನ ಹೃದಯವನು ಮುಂದಿರಿಸುವಂತೆ, ಒಳಸುಗುವಂತೆ, ಒಡನೆರಸುವಂತೆ, ಮನ್ಮಥನು ಅಲೆಗಾರನು ರಕ್ಷಿಸೆಂದು ಶರಣುಹೊಗುವಂತೆ, ನಿನ್ನ ಹೃದಯದಲ್ಲಿ ಎನಗೆ ಇಂಬುಗುಡೆಂದು ನೋಡುತ್ತ ಮನಸ್ಸಿನಲ್ಲಿ ಈ ಬಗೆಯಲ್ಲಿ ನಾಚಿಕೆಗೆಟ್ಟು ಮಿತಿಮೀರಿ ಯಿರುವುದು ನನ್ನಂತಹ ಕುಲವೆಣ್ಣಿಗೆ ತರವಲ್ಲವೆಂದು ತಿಳಿದಿದ್ದೂ ಕಣ್ಣನು ಮನಸ್ಸನು ನಿಲ್ಲಿಸಲಾರದೆ ಮರೆವಟ್ಟಂತೆ ಚಿತ್ರದಲ್ಲಿ ಬರೆದಂತೆ ತಿದ್ದಿದ ಪ್ರತಿಮೆಯಂತೆ ಕಟ್ಟುವಡೆದಂತೆ ಮೂರ್ಛೆಹೋದಂತೆ ಕೈಕಾಲುಗಳುಗದಂತೆ ಬಲುಹೊತ್ತು ನೋಡುತ್ತಿದ್ದೆನು. ಆಸಮಯದಲ್ಲಿ ಅರಿಯಹೇಳದೆ ಕಲಿಸದೆ ತನ್ನಿಂದ ತನಗೆ ಮನಸ್ಸಿಗೊಂದು ಕದುಬು ಹುಟ್ಟಿತು. ಅದು ಒಬ್ಬರಿಗೂ ತಿಳಿಯ ಹೇಳತಕ್ಕುದಲ್ಲ. ನನ್ನ ಮನಸ್ಸು ಮಾತ್ರವೇ ಬಲ್ಲುದು. ಆಬಗೆಯ ಮನೋವಿಕಾರ ಉಂಟಾದುದು ಅವನ ರೂಪಾತಿಶಯದಿಂದಲೊ ನನ್ನ ಮನಸ್ಸಿನಿಂದಲೊ ಮನ್ಮಥನಿಂದಲೊ ಹೊಸಜವ್ವನದಿಂದಲೊ ಪ್ರೀತಿಯಿಂದಲೊ ಇವಲ್ಲದೆ ಮತ್ತೇನು ಕಾರಣದಿಂದಲೊ ಅರಿಯೆನು. ಕರಣಂಗಳು ಅವನ ಸಮೀಪಕ್ಕೆ ಎನ್ನನು ಎತ್ತಿಕೊಂಡು ಸಾಗಿಸುವಂತೆ ಇರುವುದು. ಮನಸ್ಸು ಮುಂದುಗಡೆಯಲ್ಲಿ ಎಳೆವಂತೆ ಇರುವುದು; ಮನ್ಮಥನು ಹಿಂಭಾಗದಲ್ಲಿ ತಳ್ಳುವಂತೆ ಇರುವನು. ಹೀಗಿದ್ದಲ್ಲಿಯು ಮನಸ್ಸಿಗೆ ತಿಳಿವಳಿಕೆಯ ತಂದುಕೊಂಡು ಧೈರ್ಯದಿಂದ ಮುಗ್ಗದೆ ಮುಂದುವರಿಯದೆ ಇದ್ದೆನು. ಆಮೇಲೆ ಹೃದಯವ ಹೊಕ್ಕ ಮನ್ಮಥನಿಗೆ ತಾವ ಕುಡುವಂತೆ ನಿಡಿದಾಗಿ ಸುಯ್ಲುಗಳು ಹೊರಟುವು. ಮನದ ಆಸೆಯನ್ನು ಹೇಳುವಂತೆ ಮೊಲೆಗಳು ಹಾರುದುವು. ಬೆವರುವನಿಗಳಿಂದ ತೊಳೆದಂತೆ ನಾಚಿಕೆ

ಜಾರಿತು. ಮೇಲೆಬೀಳುವ ಮನ್ಮಥನ ಅಂಬುಗಳಿಗೆ ಅಳುಕುವಂತೆ ಮೈ ನಡುಗಿತು. ಅವನ ಆಲಿಂಗನಕ್ಕೆ ಒಯ್ಯಿಸಿರುವ ಅವಯವಗಳು ಮುಂದುವರಿದುವು. ಅವನ ರೂಪಾತಿಶಯವ ನೋಡುವುದಕೆಂಬಂತೆ ಮೈನವಿರುಗಳು ಹೊರಟುವು. ಅಂಗಾಲು ಬೆವರಿದುದರಿಂದ ಕರಗಿದ ಅಲತಿಗೆಯ ರಾಗವು ಸೇರಿದಂತೆ ಮನಸ್ಸಿನಲ್ಲಿ ರಾಗವುಂಟಾಯಿತು. ಆಗ ನನ್ನ ಮನಸ್ಸಿನಲ್ಲಿಯೆ ಯೋಚಿಸಿದೆನು:—ವಿರಕ್ತನಾಗಿ ಇರುವುದರಿಂದ ಸ್ತ್ರೀವ್ಯಾಪಾರವನರಿಯದೆ ಇರುವ ಇವನ ಬಳಿಗೆ ನನ್ನನು ತಳ್ಳಬೇಕೆಂದು ಈಪಾಪಿ ಮನ್ಮಥನು ಏನನು ತೊಡಗಿದನು? ಲೋಕದಲ್ಲಿ ಹೆಣ್ಣುಗಳ ಮನಸ್ಸಿಗೆ ಯುಕ್ತಾಯುಕ್ತವೇನೂ ತಿಳಿಯದು. ಇತನಲ್ಲಿ ಪ್ರೀತಿಯಿರಿಸ ಬಹುದು ಬಾರದು ಎಂಬ ವಿಚಾರವೇ ಕಾಣಲ್ಪಡಲಿಲ್ಲ. ಅವ ತೇಜಸ್ವಿಯಾಗಿರುವುದರಿಂದ ತಪಸ್ಸು ಮಾಡುತ್ತಿರುವ ಇವನೆಲ್ಲಿ! ಅರಿಯದವರು ಕೈವಿಡಿದ ಮನ್ಮಥ ವಿಕಾರವೆಲ್ಲಿ! ಈಪ್ರಕಾರದಲ್ಲಿ ಮನ್ಮಥಪರವಶೆಯಾಗಿರುವ ತನ್ನನು ನೋಡಿ ಇವನು ತನ್ನ ಮನಸ್ಸಿನಲ್ಲಿಯೇ ಪರಿಹಾಸಕವ ಮಾಡುತಿರುವನೊ! ಏನಾಶ್ಚರ್ಯವೊ! ಈಬಗೆಯಲ್ಲಿ ತಿಳಿದು ಇದ್ದೂ ಸಹಜವಾಗಿ ಇರಲಾರೆನು. ಲೋಕದಲ್ಲಿ ಲಜ್ಜೆಯನು ತೊರೆದು ತಮಗೆ ತಾನೇ ಪುರುಷರನರಸಿಕೊಂಡು ಹೋದವರುಂಟು, ಈ ಮನ್ಮಥನಿಂದ ಮರುಳಾದವರುಂಟು, ಅವರೆಲ್ಲರು ಪುರುಷರ ಗುಣಾತಿಶಯವ ತಿಳಿದುದರಿಂದಲೂ, ಕೆಲವು ಕಾಲವಿಳಂಬವಾದುದರಿಂದಲೂ ಆಪ್ರಕಾರವಾಗುವರು. ನನ್ನಂತೆ ಅವನ ಗುಣಗಳನು ತಿಳಿಯದೆ, ಮುಖವ ನೋಡಿದಮಾತ್ರಕ್ಕೆ ಈ ಕ್ಷಣದಲ್ಲಿಯೇ ಹೀಗೆ ಆದವರು ಆರೂ ಇಲ್ಲ. ಇನ್ನು ನನ್ನ ಬಗೆಯು ಬಯಲಿಗೆ ಬಿದ್ದು ಇವನಿಗೆ ಕಾಣಪಡುವುದಕ್ಕೆ ಮುಂಚಿತ್ತಾಗಿಯೇ ಇಲ್ಲಿಂದ ಹೋಗತಕ್ಕದು. ಮುನಿಗಳಿಗೆ ಕೋಪ ಮೂಗಿನಮೇಲೆ ಇರುವುದು. ಇಲ್ಲಿ ಇದ್ದೆನಾದರೆ ನನ್ನ ಆಕಾರವನೂ ಸ್ವರವನೂ ಕಂಡು ಶಾಪವ ಕೊಟ್ಟಾನು. ಹೋಗಬೇಕು. ಮುನಿಗಳು ಪೂಜ್ಯರಷ್ಟೆ. ಅತ್ತಬಿದ್ದು ಹೋದೇನು, ಎಂದು ನಿಶ್ಚಯಿಸಿ ಅವನ ಮುಖದಲ್ಲಿ ಇಟ್ಟ ದೃಷ್ಟಿಯನು ಕಡೆಗಾಗಿಸದೆ, ಎವೆಯಲುಗದೆ, ಕಿವಿಯ ಮೇಲಿರುವ ತಳಿರು ಕಪೋಲಕ್ಕೆ ಜಾರುವಂತೆ, ಹರಳೊಲೆ ಭುಜದಮೇಲೆ ಉಯ್ಯಾಲಾಡುವಂತೆ, ತಲೆ ನೆಲಕೆ ಸೋಂಕದಂತೆ ಅಡ್ಡಬಿದ್ದೆನು ಆಮೇಲೆ ಮಹಾವೀರನಾದ ಮನ್ಮಥನಂ ಮೀರುವುದಕ್ಕಾಗದುದರಿಂದಲೂ, ವಸಂತಕಾಲವಾದುದರಿಂದಲೂ. ಆಗ ನಾವಿದ್ದ ಬಳಿ ಅಂದವಾಗಿದ್ದುದರಿಂದಲೂ, ಆಕಾರ್ಯ ಹಾಗೆ ಆಗಬೇಕೆಂಬ ದೈವಸಂಕ

ಲ್ಪವಿದ್ದುದರಿಂದಲೂ-ಇನ್ನು ವಿಶೇಷ ಹೇಳುವುದೇನು?-ನನ್ನ ಪುಣ್ಯಪ್ರಭಾವ ದಿಂದಲೂ,-ಅದಂತಿರಲಿ-ಈಬಗೆಯಲ್ಲಿ ಕಷ್ಟಬೀಳಬೇಕೆಂದು ನನ್ನ ಹಣೆಯಲ್ಲಿ ಬರೆ ದಿದ್ದುದರಿಂದಲೂ, ಆಮಹಾನುಭಾವನು ನನ್ನ ಬಗೆಯನು ಕಂಡು ಧೈರ್ಯ ಗುಂದಿ ಗಾಳಿಗಿಕ್ಕಿದ ದೀಪದಂತೆ ಕಂಪಿಸುತ್ತಿದ್ದನು. ಆಗ ಅವನ ಶರೀರದಲ್ಲಿ ಹೊಸದಾಗಿ ಬರುವ ಮನ್ಮಥನ ಇದಿರುಗೊಂಬಂತೆ ರೋಮಪುಳಕಗಳು ಎದ್ದುವು. ನನ್ನ ಬಳಿಗೆ ಬರುವ ಮನಸ್ಸಿಗೆ ದಾರಿ ದೋರುವಂತೆ ನಿಟ್ಟುಸಿರು ಹೊರಟುವು. ಕೈನಡುಕು ಇದ್ದುದರಿಂದ ವ್ರತಗೆಡುವುದೆಂದು ಭೀತಿಪಟ್ಟಂತೆ ಕೈಯ ಜಪ ಸರಗಳು ನಡುಗಿದುವು. ಕಿವಿಯಲ್ಲಿಟ್ಟಿರುವ ಪಾರಿಜಾತದ ಎರಡನೆಯ ಪೂ ಗೊಂಚಲೆಂಬಂತೆ ಕೆನ್ನೆಯಲ್ಲಿ ಬೆವರುಹನಿಗಳು ಕಾಣಪಟ್ಟುವು. ನನ್ನ ನೋಡು ವ ಪ್ರೀತಿಯಿಂದ ಅತಿವಿಸ್ತಾರವಾಗಿರುವ ಕಣ್ಗಳಿಂದ ನೋಟಗಳು ಹೊರಡುವಲ್ಲಿ ಅಚ್ಛೋದಸರಸ್ಸಿನಲ್ಲಿರುವ ನೈದಿಲೆಸಳುಗಳು ಗಗನಕ್ಕೆ ಎದ್ದು ದಿಕ್ಕುಗಳ ತುಂಬಿ ದಂತಾದುವು. ಆಗ ನಾನು ಅವನಿಗೂ ಆ ಬಗೆಯಾದುದ ಕಂಡು ಮನ್ಮಥ ವ್ಯಥೆ ಇಮ್ಮಡಿಸಿ ಕವಿಗಳು ವರ್ಣಿಸುವುದಕ್ಕೂ ಆಗದಂತೆ ಇದ್ದೆನು. ಮನಸ್ಸಿನಲ್ಲಿ ಈಪ್ರಕಾರ ಯೋಚಿಸಿದೆನು:—ಲೋಕದಲ್ಲಿ ಮನುಷ್ಯರಿಗೆ ಹಲವು ಬಗೆಯ ಶೃಂಗಾರ ಚೇಷ್ಟೆಗಳನು ಮನ್ಮಥನೇ ಹೇಳಿಕೊಡುತ್ತಾ ಇದ್ದಾನೆ. ಇಂತಿಲ್ಲ ದಿದ್ದರೆ ಈಬಗೆಯ ರಸಿಕತೆಯನು ಒಂದುವೇಳೆಯೂ ಮನಸ್ಸಿನಲ್ಲಿ ಯೋಚಿಸದೆ ಇರುವ ಇವನಿಗೆ ಈಬಗೆಯಲ್ಲಿ, ಪ್ರೀತಿರಸ ಕೋಡಿಬಿದ್ದಂತೆ, ಕೌತುಕವಡಗಿಯೆನ ಲಿದಂತೆ, ಅಲಸಿದಂತೆ, ಸಿಸ್ತೈಗೈದಂತೆ, ಆನಂದಾತಿಶಯದಿಂದ ಕದುಬುಗೂಡಿದ ನೋಟವು ಎಲ್ಲಿಂದ ಬಂದಿತು ? ಬಾಯಿಬಿಟ್ಟು ನುಡಿಯದೆ ತನ್ನ ಮನಸ್ಸಿನ ಆಸೆ ಈತೆರನಿದೆ ಎಂದು ನೋಟದಿಂದಲೇ ಹೇಳುವ ಈ ಚಾತುರ್ಯವೆಲ್ಲಿ ಬಂದಿತು ? ಎಂದು ಯೋಚಿಸಿ ನನ್ನ ಮನಸ್ಸಿನ ಆಸೆಗೂ ಅವಕಾಶವಾದುದರಿಂದ ಅವನ ಸಮೀಪದಲ್ಲಿರುವ ಮುನಿಕುಮಾರನಿಗೂ ಅಪ್ಪಬಿದ್ದು ಒಂದು ಮಾತ ನುಡಿದೆನು. ಅಯ್ಯ, ಈ ಮುನಿ ಆರು ? ಆರಕುಮಾರರು ? ಇವರ ಕಿವಿಯ ಮೇಲಿ ಟ್ಟಿರುವ ಹೂವು ಆವ ಮರದುದು ? ಇದರ ದಿವ್ಯಪರಿಮಳದಿಂದ ಮನಸ್ಸಿಗೆ ಆಶ್ಚರ್ಯವಾಗುತ್ತಿದೆ—ಎಂದು ಕೇಳಲಾಗಿ; ಅವನು ಹೇಳಿದುದು:—ಹೆಣ್ಣೇ ! ಇದನು ಕೇಳಿದುದರಿಂದ ನಿನಗೆ ಫಲವೇನು ? ಆದರೂ ಆಸೆಯುಂಟಾದರೆ ಹೇಳೇನು ಕೇಳು: ಮೂರು ಲೋಕದಲ್ಲಿಯೂ ಪ್ರಸಿದ್ಧನಾಗಿ ಮಹಾತಪಸ್ವಿ ಯಾದ ಶ್ವೇತಕೇತುವೆಂಬ ಮುನಿಯೊಬ್ಬನು ದೇವಲೋಕದಲ್ಲಿ ಇರುವನು.

ನಳಕೂಬರನಿಂದಲು ಅತಿಶಯವಾದ ಅವನ ಆಕಾರವನು ನೋಡಿ ಸಕಲರಾದ ದೇವಸ್ತ್ರೀಯರು ಮೋಹಿಸುತ್ತಿದ್ದರು. ಒಂದು ದಿನ ಆಮುನಿಯು ದೇವಪೂಜೆಗೆ ಹೂವ ತರುವ ನಿಮಿತ್ತ ಆಕಾಶಗಂಗೆಯ ಸಮೀಪಕ್ಕೆ ಹೋಗಲಾಗಿ, ಆಬಳಿಯಲ್ಲಿದ್ದ ಮಹಾಲಕ್ಷ್ಮಿಯು ಹೆಸರಿನ ದೇವಸ್ತ್ರೀಯು ಕಂಡು ಮನ್ಮಥಪರವಶೆಯಾಗಿ ಪ್ರೀತ್ಯತಿಶಯದಿಂದ ಕೆಂಗಣ್ಣಾಗಿ, ಆನಂದಬಾಷ್ಪದ ಒಂದ ತೆರೆಗಳಲ್ಲಿ ಈಸುತಿರುವ ನಯನಂಗಳಿಂದ ಅವನ ರೂಪವನಾಸ್ವಾದಿಸುತ್ತ, ನೋಟದಿಂದಲೇ ಸಕಲ ಸುಖವನೆ ಪಡೆದು, ಅಂಬಿದ್ದ ಬಳಿಯಲ್ಲಿಯೇ ಬೇಗ್ಗಾವಡಿಯಲ್ಲಿ ಒಬ್ಬ ಗಂಡು ಕುಮಾರನನು ಆಗಲಾಗಿ,—ಸ್ವಾಮೀ, ನಿಮ್ಮ ಕುಮಾರನು, ಎಂದು ಹೇಳಿ ಆಶ್ವೇತಕೇತು ಮುನಿಗೆ ಕೊಡಲಾಗಿ, ಅವರು ಕುಮಾರನ ತೆಗೆದುಕೊಂಡು ತತ್ಕಾಲೋಚಿತವಾದ ಜಾತಕರ್ಮವನು ಮಾಡಿ ತಾವರೆಯ ಮೇಲೆ ಜನಿಸಿದುದರಿಂದ ಪುಂಡರೀಕನೆಂಬ ಹೆಸರಿಟ್ಟು ವೇದಗಳನು ಸಕಲವಾದ ವಿದ್ಯೆಗಳನು ಕಲಿಸಿದರು. ಈಹೂವು ದೇವಾಸುರರು ಕೂಡಿ ಸಮುದ್ರಮಥನ ಮಾಡಿದಾಗ ಹುಟ್ಟಿದ ಪಾರಿಜಾತವೃಕ್ಷದುದು. ಈದಿವಸ ಇವರೂ ನಾನೂ ಕೈಲಾಸಕ್ಕೆ ಬರುವ ದಾರಿಯಲ್ಲಿ ನಂದನವನದ ಸಮೀಪದಲ್ಲಿ ಬರುವಾಗ ಆ ನಂದನವನದೇವತೆಯು ಬಂದು ಪಾರಿಜಾತದ ಹೂವನು ತೆಗೆದುಕೊಂಡು ಇವರ ಸಮೀಪಕ್ಕೆ ಬಂದು ಅಡ್ಡಬಿದ್ದು,—ಸ್ವಾಮೀ, ಮೂರುಲೋಕಕ್ಕೆ ಅತಿಶಯನಾಗಿರುವ ನಿಮ್ಮ ಸೌಂದರ್ಯಕ್ಕೆ ಅನುರೂಪವಾದ ಅಲಂಕಾರವಿದು; ಇದನು ನನ್ನ ಮೇಲಣ ದಯದಿಂದ ಕರ್ಣಾವತಂಸವಾಗಿ ಧರಿಸಿಕೊಳ್ಳಬೇಕು ಎಂದು ಬೇಡಿಕೊಂಬ ಆ ವನದೇವತೆಯ ಮಾತನು ಕೇಳಿ, ಅದು ಸ್ತುತಿಗೂಡಿ ಇರಲಾಗಿ, ಲಜ್ಜೆಯಿಂದ ಕೇಳದಹಾಗೆ ಸನ್ನೆ ಮಾಡದೆ ಮುಂದಕ್ಕೆ ನಡೆಯುತಿರಲಾಗಿ; ವನದೇವತೆಯು ಮತ್ತು ಬೆಂಬಡದೆ ಬರುತ್ತಿರುವುದನು ಕಂಡು,—ಇವಳು ಬಹು ಬಗೆಯಲ್ಲ ಬೇಡಿಕೊಳ್ಳುತಿದ್ದಾಳೆ; ಇವಳ ಪ್ರೀತಿಯನು ಸಲಿಸಬಹುದು; ಇದರಿಂದ ತಪ್ಪಿಲ್ಲವೆಂದು ಆಹೂವನು ಅವಳ ಕೈಯಿಂದ ನಾನು ತೆಗೆದುಕೊಂಡು, ಇವರೂ ನಮ್ಮೊಡನೆ ಇದ್ದಲ್ಲಿಯೂ ಬಲುಮೆಯಲ್ಲಿ ಇವರ ಕಿವಿಗೆ ಅಲಂಕಾರ ಮಾಡಿದೆನು—ಎಂದು ಆ ಕಪಿಂಜಲನು ನನ್ನ ಕೂಡೆ ಪ್ರಸಂಗವಾಡುತ್ತ ಇದ್ದಲ್ಲಿಯೇ, ಆ ಪುಂಡರೀಕನು ನನ್ನ ಸಮೀಪಕ್ಕೆ ಬಂದು ತನ್ನ ಕೈಯಲ್ಲಿ ಆ ಹೂವನು ತೆಗೆದುಕೊಂಡು—ನಿನಗೆ ಪ್ರೀತಿಯಾಗಿದ್ದರೆ ನೀನು ಧರಿಸಿಕೊ—ಎಂದು ತನ್ನ ಕೈದ್ವಾರ ನನ್ನ ಕಿವಿಗೆ ಅಲಂಕಾರವಂ ಮಾಡಲಾಗಿ; ಆ ಕ್ಷಣ ನನ್ನ ಮನಸ್ಸು ಅವನ ಕೈಸೋಂಕಿನ ಆನಂದದ ಎರಡನೆಯ ಪಾರಿ

ಜಾತದ ಹೂವಿನಂತೆ ಕಿವಿಯು ಬಿಟ್ಟುಗ್ಗಿದಿತು. ಅವನು ನನ್ನ ಕಪೋಲಸ್ಪರ್ಶಸುಖದಿಂದ ಕೈನಡುಗಿ ನಾಚಿಕೆಯಿಂದ ಸಡಿಲಿ ಜಪಸರಮಾಲೆಯು ಬೀಳುತ್ತಿರುವುದನು ಅರಿಯದಿರಲಾಗಿ, ನಾನು ಅದರ ನೆಲಕ್ಕೆ ಬೀಳುವಷ್ಟರೊಳಗೆ ತೆಗೆದುಕೊಂಡು, ಅವನ ಭುಜಾಲಿಂಗನಸುಖವನನುಭವಿಸುವಂತೆ ಅದನು ಕೊರಳಲ್ಲಿ ಧರಿಸಿಕೊಂಡು ಹರ್ಷದಲ್ಲಿರುವ ಸಮಯದಲ್ಲಿ; ನಮ್ಮ ತಾಯಿಗೆ ಸತ್ತಿಗೆ ಹಿಡಿವ ಊಳಿಗದವಳು ಬಂದು—ಅಮ್ಮ ನಿಮಗೆ ಮಜ್ಜನವಾಗಿದೆ; ಊರಿಗೆ ಹೋಗುವ ಸಮಯ; ನೀವು ಶೀಘ್ರದಲ್ಲಿ ಸ್ನಾನಕ್ಕೆ ಬನ್ನಿ—ಎಂದು ನನ್ನನು ಕರೆಯಲಾಗಿ, ಮೊದಲನೆಯ ಸಾರಿ ಅಂಕುಶದ ಗಾಯ ತಾಕಿದ ಹೊಸ ಆನೆಯಂತೆ ಗೋಳಿಡುತ ಆನನ ಸಮುದ್ರದ ಕೆಸರಿನಲ್ಲಿ ಸಿಲುಕಿದಂತೆ, ಮನ್ಮಥನಂಬುಗಳು ಬಲಿದಂತೆ, ಸೌಂದರ್ಯಾದಿ ಗುಣಗಳಿಂದ ಹೊಲಿಗೆವಡೆದಂತೆ ಅವನ ಮುಖದಲ್ಲಿಯೇ ಮಗ್ನವಾದ ನನ್ನ ದೃಷ್ಟಿಯನು ಬಲಾತ್ಕಾರದಿಂದ ತಿರುಗಿಸಿ, ನಾನೂ ಸ್ನಾನಕ್ಕೆ ತೆರಳುವಷ್ಟರಲ್ಲಿಯೇ, ಆ ಮಹರ್ಷಿಪ್ರಿಯ ಮುನಿಯು, ಆ ಪುಂಡರೀಕನು ಆಕಾರದಲ್ಲಿ ಧೈರ್ಯಗೆಟ್ಟಿದ್ದನು ಕಂಡು, ಸ್ನೇಹಾತಿಶಯದಿಂದ ಸನುಗೋಪಗೂಢದ ರೀತಿಯಲ್ಲಿ,—ಎಲೆ ಪುಂಡರೀಕನೆ, ಇದು ನಿನಗೆ ತರವಲ್ಲ. ಕ್ಷುದ್ರಜನರುಗಳು ಸಂಚಾರದಿಂದ ನವೆದ ದಾರಿಯಿದು. ಮಹಾತ್ಮರಾದವರು ಧೈರ್ಯವನೆ ಧನವೆಂದು ಸಂಪಾದಿಸುವರು. ಕೇವಲ ಒಂದು ಪ್ರಕಾರದ ಮನುಷ್ಯರ ಹಾಗೆ ಹೆದಬಡಿಸುವ ಮನಸ್ಸನ್ನು ಹಿಡಿಯಲಾರದೆ ಇದ್ದೀಯೆ! ಹಿಂದಿನ ನೇಮವೂ ಇಲ್ಲದೆ ಇದ್ದ ಈಬಗೆಯ ಇಂದ್ರಿಯಗಳ ಗಾಬರಿಯು ಎಲ್ಲಿಂದ ಬಂದಿತು? ಏತರಿಂದ ಹೀಗಾದೆ? ನಿನ್ನ ಆಬಗೆಯ ಧೈರ್ಯವೆಲ್ಲಿ ಹೋಯಿತು? ಆಬಗೆಯ ಇಂದ್ರಿಯ ಜಯವೆಲ್ಲಿ? ಕುಲಕ್ರಮದಿಂದ ಬಂದ ಬ್ರಹ್ಮಚರ್ಯವೆಲ್ಲಿ? ಆ ಗುರೂಪದೇಶಂಗಳೆಲ್ಲಿ? ಆ ಶಾಸ್ತ್ರಂಗಳೆಲ್ಲಿ? ಆ ವೈರಾಗ್ಯಬುದ್ಧಿಗಳೆಲ್ಲಿ? ಆಬಗೆಯ ತಪಸ್ಸುಗಳಲ್ಲಿರುವ ಆಸಕ್ತಿಯೆಲ್ಲಿ? ಆ ಗುಣಂಗಳೆಲ್ಲ ಹೋದುವು? ನಿನ್ನಂಥವನ ಮನಸ್ಸು ವಿಷಯಾಭಿಲಾಷೆಯಿಂದ ಕೆಡುತಿತು ಎಂದರೆ, ಲೋಕದಲ್ಲಿ ತಿಳುವಳಿಕೆಯಿಂದ ಫಲವೇನು, ಧರ್ಮಶಾಸ್ತ್ರವನೋದುವುದರಿಂದ ಗುಣವೇನು? ನೀನು ಈಬಗೆಯ ಮೋಹಕ್ಕೆ ಒಳಗಾಗಿ ಜಪಸರ ಕೈಯಿಂದ ಬೀಳುವುದನು ತಿಳಿಯದೆ ಹೋಗಿದ್ದೆ? ಲೋಕದಲ್ಲಿ ಅವಿವೇಕಿಗಳು ನಗುತಿರುವರು! ಇವಳ ಹಿಂದೆ ಹೋಗುವ ಮನಸ್ಸನು ನಿಲಿಸಿಕೊ—ಎಂದು ಎಚ್ಚರಿಸಲಾಗಿ; ಬಂದಿಷ್ಟು ನಾಚಿಕೆಗೊಂಡವನಾಗಿ ಪ್ರತ್ಯುತ್ತರವ ಕೊಡುವಲ್ಲಿ—ಎಲೆ ಕಪಿಂಜಲ, ನನ್ನ ನೋಡಿ ಏತಕ್ಕೆ ಬೆರಗಾಗಿ ಯೋಚಿಸುತಲಿದ್ದೀ? ಹೆಣ್ಣು ಮಿತಿಮೀರಿ ಜಪ

ಸರವನು ತೆಗೆದುಕೊಂಡ ತಪ್ಪಿಗೆ ತಾಳತಕ್ಕುದಿಲ್ಲ, ಎಂದು ಹುಸಿಯು ಕೋಪ ದಿಂದ ಹುಬ್ಬು ಗಂಟಿಕ್ಕಿಕೊಂಡು ನನ್ನ ಮುಖವನು ನೋಡಿ—ನನ್ನ ಸರವನು ಕೊಡದೆ ಹೋದರೆ ಹಜ್ಜೆಯನಿಡಲೀಸುವುದಿಲ್ಲ; ಎಲ್ಲಿಗೆ ಹೋಪೆ ನೀನು?—ಎಂದು ನೋಟಸಹ ತನ್ನ ಮನಸ್ಸನು ನನ್ನ ಮುಖದಲ್ಲಿ ನಿಲಿಸಿ, ಬಯಲಿಗೆ ಕೈಯ ನೀಡ ಲಾಗಿ, ಮುಂದೆ ನಟಿಸುವ ವಿರಹವೇದನೆಯೆಂಬ ನಾಟ್ಯಕ್ಕೆ ಇಡುವ ಪುಷ್ಪಾಂಜಲಿ ಯಂತೆ ನನ್ನ ಕೊರಲಲ್ಲಿರುವ ಮುತ್ತಿನ ಕಂಠಮಾಲೆಯನು ತೆಗೆದು ಅವನ ಕೈಯೊಳ ಗಿರಿಸಿ, ನಾನು ಅಲ್ಲಿಂ ತಳರ್ದು ಬಿವರಿನಲ್ಲಿ ಸ್ನಾನವ ಮಾಡಿದ್ದು ಕೊಳದಲ್ಲಿ ಸ್ನಾನವ ಮಾಡಿ ಎದ್ದು ನನ್ನ ತಾಯೊಡನೆ ಹೋಗುವಲ್ಲಿ ಇದಿರೇರುವ ನದೀಪ್ರವಾಹ ದಂತೆ ಬಲುಮೆಯಿಂದ ಊರಿಗೆ ಹೋಗಿ, ಅಂತಃಪುರದಲ್ಲಿರುವಾಗ ಆ ವಿರಹದಿಂದ ಮರುಳಾಗಿ, ನಾನು ಆ ವನದಿಂದ ಬಂದೆನೋ! ಅಲ್ಲಿಯೇ ಇದ್ದೆನೋ!— ಮಾತನಾಡುತಲಿದ್ದೆನೊ! ನಿದ್ರೆಗೈಯುತಲಿದ್ದೆನೊ! ಎಚ್ಚರಿವಾಗಿ ಇದ್ದೆನೋ! ನನಗೆ ಇದೇನೋ, ದುಃಖವೋ, ವಿರಹವೋ, ವ್ಯಾಧಿಯೋ, ವ್ಯಸನವೋ, ಸಂತೋಷ ವೋ? ಈಗ ಹಗಲೋ, ಇರುಳೋ? ಒಳ್ಳಿಯದು ಆವುದು? ಅಲ್ಲದುದು ಆವು ದು? ಎಂದು ಒಂದನೂ ಅರಿಯದೆ ಮನ್ಮಥಾವೇಶದಿಂದ, ಎಲ್ಲಿ ಹೋಗುವೆ? ಏನ ಮಾಡುವೆ? ಏನ ಕೇಳುವೆ? ಏನ ನೋಡುವೆ? ಏನ ನುಡಿವೆ? ಈ ದುಃಖ ವನಾರಿಗೆ ತಿಳುಹುವೆ? ಇದಕ್ಕೆ ಪ್ರತೀಕಾರವೇನು?—ಎಂದು ಚಿಂತಿಸುತ್ತ ನೆಲೆಗಾಣದೆ ಯೋಚಿಸುತ್ತ, ಕ್ಷಣಮಾತ್ರ ಮೌನದೊಳಿದ್ದು ಎವೆಹುಯ್ಯದೆ ನನ್ನನು ಬಲು ಹೊತ್ತು ನೋಡುತ್ತ ಮಾಣದೆ, ಉಪ್ಪರಿಗೆಯನೇರಿ ಸಖಿಗಳೆಲ್ಲ ರನು ಕಳುಹಿ ನಿಬ್ಬತಿಯಿಂದ ಬಾಗಿಲೊಳಗೊಬ್ಬರನು ಬಿಡದಹಾಗೆ ಕಟ್ಟುಮಾಡಿಸಿ, ಒಬ್ಬಳೆ ಗವಾಕ್ಷದ ಬಾಗಿಲಲ್ಲಿ ಮುಖವಿಟ್ಟು, ಆದಿಕ್ಕಿನಲ್ಲಿ ಆಮುನಿಯಿರುವುದ ರಿಂದ ಅಲಂಕರಿಸದಂತೆ ಹೂತಂತೆ ಅಮೃತಸಾಗರದಿಂದ ತುಂಬಿದಂತೆ ಪೂರ್ಣ ಚಂದ್ರೋದಯವಾದಂತೆ ಕಣ್ಣಿಗಿಂಪಾಗಿ ಕಾಣಿಸುವ ಆದೆಸೆಯನೆ ನೋಡುತ್ತ, ಅತ್ತಣಿಂದ ಬೀಸುವ ಗಾಳಿಯನಾದರೂ ಹಕ್ಕಿಗಳ ದನಿಯನಾದರೂ ಅವನ ಸುದ್ದಿಯ ಕೇಳಲಿಚ್ಛೈಸುತ, ಅವನಿಗೆ ಪ್ರಿಯವಾಗಿರುವುದರಿಂದ ತಪಸ್ಸಿಗೆ ಆಸೆ ಪಡುತ್ತ ಮೌನವನವಲಂಬಿಸುತ್ತ, ಅವನ ಕೈವಿಡಿದಿರುವುದರಿಂದ ಮುನಿವೇಷವೆ ಅಂದವೆಂದು, ಅವನಲ್ಲಿರುವುದರಿಂದ ಯೌವನವು ಸೊಗಸಾದುದೆಂದು, ಅವನ ಕಿವಿಸೋಂಕಿನಿಂದ ಪಾರಿಜಾತದ ಹೂವು ಮನೋಹರವಾಯಿತೆಂದು, ಅವನಿರು ವುದರಿಂದ ಸ್ವರ್ಗಲೋಕ ರಮ್ಯವೆಂದು, ಅವನ ಚೆಲ್ವಿಕೆಯಿಂದ ಮನ್ಮಥನು

ಅಜುಯನಾದನೆಂದು ತಿಳಿಯುತ್ತ, ಅವನು ದೂರದಲ್ಲಿದ್ದರೂ ಸೂರ್ಯನಂ ಬಯಸುವ ತಾವರೆಯಂತೆ, ಚಂದ್ರನಂ ಬಯಸುವ ಸಮುದ್ರವೇಲೆಯಂತೆ, ಮೇಘವಂ ಬಯಸುವ ನವಿಲಂತೆ ಅವನ್ನೆದಿರುವ ದೆಸೆಯನೆ ನೋಡುತ್ತ, ವಿರಹವೇದನೆಯಿಂದ ಪ್ರಾಣ ಹೋಗದಂತೆ ಕಟ್ಟಿದ ರಕ್ಷಾಮಾಲೆಯಂತಿರುವ ಆ ಅಕ್ಷಮಾಲೆಯನೆ ಧರಿಸಿಕೊಂಡು, ಅವನ ವೃತ್ತಾಂತವನು ಹೇಳಲುಬಂತೆ ಕಿವಿಯನು ಸೇರಿದ ಪಾರಿಜಾತದ ಹೂವನೆ ಧರಿಸಿ, ಅವನ ಕೈಸೋಂಕಿಂದ ಕಡಬದ ಹೂವಿನಂತೆ ಎಡೆಬಿಡದೆ ಒಂದೇ ಕಪೋಲದಲ್ಲಿ ಹೊಮ್ಮಿದ ರೋಮಾಂಚ ಸಹ ಇದ್ದೆನು. ಆಗ ನನ್ನ ಸಂಚಿಯ ಊಳಿಗದತ ರಳಿಕೆಯೆಂಬವಳು ನನ್ನೊಡನೆ ಮೊದಲು ಸ್ನಾನ ಮಾಡುವೆಡೆಗೆ ಬಂದು, ಹಿಂದುಳಿದಿದ್ದು ಬಂದು, ಅಬಗೆಯಲ್ಲಿದ್ದ ನನ್ನ ಸಮೀಪವನು ಸೇರಿ ಮೆಲ್ಲಗೆ ಒಂದು ಮಾತ ನುಡಿದಳು:—ಅಮ್ಮಾ, ನಾವು ಅಚ್ಛೋದಸರಸ್ಸಿನಲ್ಲಿ ಮುನಿಕುಮಾರರನಿಬ್ಬರ ಕಂಡೆವಲ್ಲ; ಅವರಲ್ಲಿ ನಿನಗೆ ಪಾರಿಜಾತವ ಕೊಟ್ಟ ಮುನಿಕುಮಾರರೊಬ್ಬರು ಅನುತ್ತೊಬ್ಬ ಮುನಿ ಅಱಿಯದಂತೆ ನನ್ನ ಸಮೀಪಕ್ಕೆ ಬಂದು—ಈಗ ಇಲ್ಲಿ ಬಂದಿದ್ದ ಕನ್ನೆಮೆಣ್ಣಾರು? ಆರ ಮಗಳು? ಹೆಸರೇನು ? ಎಲ್ಲಿಗೆ ಹೋದಳು ?—ಎಂದು ನನ್ನ ಕುಱಿತು ಕೇಳಲಾಗಿ, ಆಗ ನಾನು ಹೇಳಿದುದು:—ಗೌರಿ ಎಂಬ ಅಪ್ಸರಸ್ತ್ರೀಯಲ್ಲಿ ಹಂಸನೆಂಬ ಗಂಧರ್ವಾಧಿಪತಿಗೆ ಜನಿಸಿದವರು, ಮಹಾಶ್ವೇತೆ ಎಂಬ ಹೆಸರು, ಗಂಧರ್ವರಿಗೆ ವಾಸಸ್ಥಾನವಾದ ಹೇಮಕೂಟಪರ್ವತಕಾಗಿ ಹೋದರು—ಎಂದು ಹೇಳಲಾಗಿ ಆಮೇಲೆ ಆ ಮುನಿಯು ಅದೇನನೋ ಒಡಂಬಡಿಸುವಂತೆ ನನ್ನೊಂದಿಗೆ ನುಡಿದುದು:—ಹೆಣ್ಣೆ, ಇನ್ನು ನಿನ್ನ ಆಕಾರವ ನೋಡಿದರೆ ಬಾಲ್ಯ, ಆದರೂ ಮನಸ್ಸಿನಲ್ಲಿ ಕದುಬು ಇಲ್ಲ ಮೋಸವಿಲ್ಲ ಎಂಬ ಹಾಗೆ ಕಾಣಿಸುತ್ತದೆ. ನಾವು ಹೇಳುವ ಮಾತನು ಕೇಳೀಯಾ ? ಎನಲಾಗಿ; ಅದಕ್ಕೆ ನಾನು ವಿನಯದಿಂದ ಕೈಮುಗಿದು ಆದರಗೂಡಿ ತಿಳುಹಿದುದು:—ಏನು ಕಾರಣ ಹೀಗೆ ಬುದ್ಧಿಗಲಿಸುತ್ತಿದ್ದೀರಿ ? ನಾನು ಎಷ್ಟರಿವಳು ? ಈ ಮೂಱುಲೋಕದಲ್ಲಿಯೂ ಪೂಜೆಗೊಂಬ ನಿಮ್ಮಂಥ ಮುನಿಗಳು ನಮ್ಮಂಥವರನು ಕಟಾಕ್ಷಿಸುವುದೆ ನಾವು ಮಾಡಿದ ಪುಣ್ಯ. ಒಂದು ಊಳಿಗವ ಕಟ್ಟುಮಾಡಿಸಿರಿ ಎಂದು ಹೇಳಿರುವುದೇನು ? ಆದುದಱಿಂದ ಅವಶ್ಯ ನಾನು ಮಾಡತಕ್ಕ ಸೇವೆಯನು ಬುದ್ಧಿಗಲಿಸಿ ನನ್ನಲ್ಲಿ ಕೃಪೆಮಾಡಬೇಕೆಂದು ಬಿನ್ನಹವ ಮಾಡಲಾಗಿ; ಅವರು ಬಹುಸ್ನೇಹಗೂಡಿ ನನ್ನನು ತಮ್ಮ ಸಖಿಯಂತೆ ತಮಗೆ ಉಪಕಾರವ ಮಾಡಿದವಳಂತೆ ತಮಗೆ ಪ್ರಾಣಪದವಾಗಿ ಎಣಿಸಿ, ಸಮೀಪದಲ್ಲಿರುವ ಕದ್ದಾಳೆ

ಯ ಮರದ ಚಿಗುರುಗಳ ಕೊಯ್ದು ಅವನು ನಲಗಿಸಿ ಹಿಂಡಿ ತಾನುಟ್ಟಿರುವ ನಾರು ಸೀರೆಯ ಸೆರಗಿನಲ್ಲಿ ಒಂದಿಷ್ಟು ಅಗಲವ ಹರಿದು ಒಂದು ಪದ್ಯವ ಬರೆದು, ಆರೂ ಅರಿಯದಂತೆ-ಇದನು ಈಗ ಬಂದಿದ್ದ ಕನ್ನೆವೆಣ್ಣಿನ ಕೈಯಲ್ಲಿ ಕೊಡು—ಎಂದು ನನ್ನ ವಶಕ್ಕೆ ಕೊಟ್ಟು ಇದ್ದಾರೆ; ಇದನು ನೀವು ನೋಡಿಕೊಳ್ಳಿ-ಎಂದು ತಾನು ಕಟ್ಟಿರುವ ಸಂಚಿಯೊಳಗಿನಿಂದ ತೆಗೆದು ನನ್ನ ಕೈಯಲ್ಲಿ ಕೊಡಲಾಗಿ; ಆಗ ಅವನ ಸಂಬಂಧದ ಮಾತುಗಳು ಕಿವಿಯಿಂದಲೇ ತಿಳಿಯತಕ್ಕುವಾದರೂ ಸರ್ವಾವಯವವ ರೋಮಾಂಚನಗೊಳಿಸಿ ಸ್ಪರ್ಶಸುಖವನುಂಟುಮಾಡಿ ಮನ್ಮಥಾವೇಶಮಂತ್ರದಂತೆ ಪರವಶನಮಾಡುತಿದ್ದಲ್ಲಿಗೂ ತಿಳುವಳಿಕೆಯು ತಂದುಕೊಂಡು ಕೈನೀಡಿ ಆನಿರೂಪವನು ತೆಗೆದುಕೊಂಡು ಓದಲಾಗಿ-ಅದರಲ್ಲಿ ಗ್ರಂಥ—

ದೂರಂ ಮುಕ್ತಾಲತಯಾ ಬಿಸಸಿತಯಾ ವಿಪ್ರಲೋಭ್ಯಮಾನೋ ಮೇ |
ಹಂಸ ಇವ ದರ್ಶಿತಾಶೋ ಮಾನಸಜನ್ಮಾ ತ್ವಯಾ ನೀತಃ ||

ಎಂದು ಬರೆದಿರಲಾಗಿ ಓದಿ ಅರ್ಥವನು ವಿಚಾರಿಸಿದಲ್ಲಿ† ನೀನು ತಾವರೆಯ ದಂಟಿನಂತೆ ಬಿಳಿದಾಗಿ ನಿಡಿದಾದ ಕಂಠಮಾಲೆಯನು ತೋರಿ, ಮೋಸಗೊಳಿಸಿದ ಹಂಸದಂತೆ ನನ್ನ ಮಾನಸದಲ್ಲಿ ಜನಿಸಿದ ಮನ್ಮಥನನ್ನು ಆಸೆದೋರಿ ಎಬ್ಬಿಸಿ ಮಿತಿಮೀರಿಸಿದೆ.—ಎಂಬ ಅಭಿಪ್ರಾಯವನು ತಿಳಿದ ಮಾತ್ರಕ್ಕೆ ನನಗೆ ದಾರಿದಪ್ಪಿದವರಿಗೆ ವಿಭ್ರಮೆ ತೋರಿದಂತೆ, ಕಣ್ಣುಕಾಣದವರಿಗೆ ಕಾರಿರುಳಾದಂತೆ, ಮೂಗನಿಗೆ ನಾಲಗೆ ಹರಿದಂತೆ, ಕಂಡು ತಿಳಿಯದವನಿಗೆ ಇಂದ್ರಜಾಲವಿದ್ಯೆ ತೋರಿದಂತೆ, ತಪ್ಪುಮಾತವನಿಗೆ ಸನ್ನಿಪಾತ ಪ್ರಲಾಪವಾದಂತೆ, ಶಾಸ್ತ್ರವಿಚಾರವಿಲ್ಲದವನಿಗೆ ಚಾರ್ವಾಕವಿದ್ಯೆಯನೋದಿದಂತೆ, ದೈವಹೊಡಕ ಮದ್ಯವ ಪಾನಮಾಡಿದಂತೆ, ಮೊದಲೆ ಮನ್ಮಥವಿಕಾರವುಂಟಾದ ನನ್ನ ಮನಸ್ಸು ಈವೋಲೆಯಂ ಕಣ್ಣಲಿ ನೋಡಿದುದರಿಂದ ಹೊಸ ನೀರಿನಿಂದ ಹೊಳೆ ಕದಡುವಂತೆ ಕದಡಿತು. ಆಗ ಆಸಖಿಯು ಆಪುಂಡರೀಕನು ಎರಡನೆಯ ವೇಳೆ ಕಂಡು ಮಾತನಾಡಿ ಒಂದು ಇರುವುದರಿಂದ ಅತಿಶಯವಾದ ಸುಕೃತವ ಮಾಡಿರುವಳಂತೆ, ದೇವಲೋಕದಿಂದ ಬಂದಿರುವಳಂತೆ, ಆವಾಗಲೂ ಸಮೀಪವಲ್ಲಿದ್ದರೂ ಬಹು ಯತ್ನದಿಂದಲೂ ಕಂ

† ಈ ಪದ್ಯಕ್ಕೆ ನಾಗವರ್ಮನು— ಎನಗಾಸೆದೋರಿ ಬಿಸಸಿತ | ಮೆನಿಸುವ ನಿಜತಾರಹಾರಲತೆಯಿಂದಂ ಹಂ || ಸನವೊಲ್ಮಾನಸಸಂಭವ | ಮೇನಿಸಮುದೀಯಾಭಿಮಾನಮಂಕಟ್ಟೊಯ್ದೌ || ಎಂದು ತರ್ಜುಮೆಮಾಡಿದ್ದಾನೆ.

ಡಂತೆ, ಬಹು ಪರಿಚಯವಾಗಿದ್ದರೂ ಹೊಸಬೆಯಂತೆ ಕಂಡು ಆದರಗೂಡಿ ಮಾತನಾಡಿಸುತ್ತ, ಮಗ್ಗುಲಲ್ಲಿ ಇದ್ದಲ್ಲಿಗೂ ಮೂಱುಲೋಕದ ಮೇಲ್ಗಡೆಯಲ್ಲಿರುವಂತೆ ಭಾವಿಸಿ, ಗಲ್ಲವಿಡಿದು ಕುರುಳ ತಿದ್ದುತ, ಒಡತಿ ಊೞಿಗದವಳು ಎಂಬ ಮೇರೆಯು ಮೀಱಿ ಪ್ರಸಂಗಿಸುವಲ್ಲಿ;—ಏತಱವ ? ನೀನು ಹೇೞು. ಅವನನು ಆವ ರೀತಿಯಲ್ಲಿ ಕಂಡೆ ? ನಿನ್ನೊಂದಿಗೆ ಏನು ಹೇೞಿದ ? ಎಷ್ಟು ಹೊತ್ತು ಪರಿಯಂತ ಆತನ ಸನ್ನಿಧಾನದಲ್ಲಿದ್ದೆ ? ಅವನು ಎಷ್ಟು ದೂರ ನಮ್ಮ ಬೞಿವಿಡಿದು ಬಂದನು ? ಎಂದು ಮತ್ತೆ ಮತ್ತೆ ಕೇಳುತ್ತ, ಇದೇ ಪ್ರಸಂಗದಲ್ಲಿ ನಾವು ಇಬ್ಬರೇ ಎಲ್ಲಾ ಊೞಿಗದವರನು ನೊಱಗೆ ತಪೆಯಿಸಿ ಉಪ್ಪರಿಗೆಯ ಮೇಲೆ ಹಗಲೆಲ್ಲವು ಕಳೆದೆವು.

ಸಾಯಂಕಾಲದ ಸಮಯದಲ್ಲಿ ಸತ್ತಿಗೆಯೂೞಿಗದವಳು ಬಾಗಿಲಿಗೆ ಬಂದು-ಅಮ್ಮಾ, ಆಪನದಲ್ಲಿ ಇಬ್ಬರು ಮುನಿಕುಮಾರರನು ನೋಡಿ ಇದ್ದೆವಲ್ಲ; ಅವರಲ್ಲಿ ಒಬ್ಬನು ಕಂಠಸರವನು ತಂದು ಜಪಮಾಲೆಯನ್ನು ಕೇಳುವುದಕ್ಕೆ ಬಂದು ಇದ್ದಾನೆ-ಎನಲಾಗಿ; ನಾನು ಮುನಿಕುಮಾರನು ಎಂಬ ಹೆಸರ ಕೇಳಿದ ಮಾತ್ರದಲ್ಲಿಯೆ ಆಪುಂಡರೀಕನು ಎಂಬ ಅಭಿಲಾಷೆಯಿಂದ ಇದ್ದ ಬೞಿಯಲ್ಲಿದ್ದ ಹಾಗೆ ಬಾಗಿಲಿಗೆ ಇದಿರೆದ್ದು ಹೋದಂತಾಗಿ, ಅಲ್ಲಿರುವ ಅಣ್ಣಗಳಲ್ಲಿ ಒಬ್ಬನನು ಕರೆದು ಶೀಘ್ರದಲ್ಲಿ ಆ ಮುನಿಯ ಕರೆದುಕೊಂಡು ಬಾ, ಎಂದು ಕಳುಹಿಸಲಾಗಿ; ಆಕ್ಷಣವೇ ಅತಿಶಯವಾದ ರೂಪಿಗೆ ಯೌವನದಂತೆ, ಯೌವನಕ್ಕೆ ಮನ್ಮಥನಂತೆ, ಮನ್ಮಥನಿಗೆ ವಸಂತಕಾಲದಂತೆ, ವಸಂತಕಾಲಕ್ಕೆ ತೆಂಗಾಳಿಯಂತೆ, ಆ ಪುಂಡರೀಕನಿಗೆ ಸಕಲಕಾರ್ಯಗಳಿಗೂ ಸಹಾಯನಾದ ಕಪಿಂಜಲನೆಂಬ ಮುನಿಕುಮಾರನನು ಕಂಡು, ಎದ್ದುನಿಂತು, ಪಾದಪ್ರಣಾಮವ ಮಾಡಿ, ಆದರಣೆಗೂಡಿ, ನನ್ನ ಕೈಯಿಂದಲೆ ಪೀಠವನು ಕೊಟ್ಟು ಕುಳ್ಳಿರಿಸಿ, ಅವನು ಸಂಕೋಚಪಡುತ್ತಿದ್ದರೂ ಬಲುಮೆಯಿಂದ ಪಾದಗಳನು ತೊಳೆದು, ಮೇಲುದಿನ ಸೆಱಗಿನಿಂದ ತೊಡೆದು, ನಾನು ಆತನ ಸಮೀಪದಲ್ಲಿಯೆ ಒಂದಿಷ್ಟು ಹೊತ್ತು ಕುಳಿತಿರುವಲ್ಲಿ, ಆ ಕಪಿಂಜಲನು ಅದೇನನೊ ನುಡಿವ ಮನಸ್ಸಿನಿಂದ ನನ್ನ ಸಮೀಪದಲ್ಲಿ ಕುಳಿತಿರುವ ತರಳಿಕೆಯ ನೋಡಲಾಗಿ; ನಾನು ಆನೋಟದಿಂದಲೆ ಅವನ ಅಭಿಪ್ರಾಯವನು ತಿಳಿದು-ಅಯ್ಯಾ, ಇವಳು ನನ್ನ ಶರೀರವೆ; ಮನವಱಿಯದ ಬೇಱೊಬ್ಬಳಲ್ಲ. ಮನಸ್ಸಿನಲ್ಲಿ ಇದ್ದುದ ನಿಶ್ಯಂಕೆಯಾಗಿ ಹೇಳಬಹುದು- ಎನಲಾಗಿ; ಆಕಪಿಂಜಲನು ನುಡಿದನು:-ಅರಸುಮಗಳೆ, ಕೇಳು, ನಾನಿನ್ನೇನ ಹೇೞುವೆನು? ಲಜ್ಜೆಯಿಂದ ನುಡಿಯು ಕೋಡಿಸ್ರ

ವುದಿಲ್ಲ. ಗೆಡ್ಡೆಗೆಣಸುಗಳಂ ಮೆಲ್ಲುವ ಮುನಿಗಳೆಲ್ಲಿ ! ಈಪಲವು ಬಗೆಯ ವಿಲಾಸ ಗೂಡಿದ ವಿಷಯಭೋಗದ ಅಭಿಲಾಷೆಯೆಲ್ಲಿ ! ಇದೆಲ್ಲವು ಅಯುಕ್ತವಾಗಿದೆ. ದೈವವು ಇದೇನ ತೊಡಗಿತು ! ಜಗದೀಶ್ವರನು ಪ್ರಯಾಸವಿಲ್ಲದೆ ಮನುಷ್ಯರನು ಪರಿಹಾಸಕವ ಮಾಡುತಲಿದ್ದಾನೆ. ಇದೇನು ಈನಡತೆ ? ಉಟ್ಟ ನಾರಿ ಸೀರೆಗೆ ತಕ್ಕುದೊ? ಹೊತ್ತ ಜಡೆಗೆ ತಕ್ಕುದೊ ? ಕೇಳಿದ ಧರ್ಮೋಪದೇಶಕ್ಕೆ ತಕ್ಕುದೋ ತಪಕ್ಕಿದನುರೂಪವೊ ? ನನಗೆ ತಿಳಿಯಬರಲಿಲ್ಲ. ಇದನು ನುಡಿವುದು ಬಹು ಪರಿಹಾಸಕ. ಆದರೂ ಅವಶ್ಯ ಹೇಳಬೇಕಾಗಿದೆ. ಬೇರೆ ಉಪಾಯವಿಲ್ಲ; ಬೇರೆ ಗತಿಯಕಾಣೆನು. ಹೇಳದೆ ಇದ್ದರೆ ಬಹು ಅನರ್ಥ ಬರುತ್ತಲಿದೆ. ತನ್ನ ಪ್ರಾಣವ ಬಿಟ್ಟಾದರೂ ಸ್ನೇಹಿತನ ಪ್ರಾಣವನುಳಿಸಬೇಕೆಂಬುದರಿಂದ ಹೇಳುತ್ತಲಿದ್ದೇನೆ ಕೇಳು. ಅಂದು ನಿಮ್ಮ ಸಮಕ್ಷದಲ್ಲಿ ಅವನನು ಆಬಗೆ ನಿಷ್ಠುರಗಳನು ನುಡಿದು ಅಲ್ಲಿಂದ ಆಚೆಗೆ ನಾನು ಕೋಪಿಸಿಕೊಂಡು ಹೋದೆ ನಲ್ಲ; ಆಮೇಲೆ ನೀನು ತೆರಳಿಹೋದ ಬಂದಿಷ್ಟು ಹೊತ್ತಿನ ಮೇಲೆ ಅವನು ಒಬ್ಬನೆ ಏನುಮಾಡುತ್ತಲಿದ್ದಾನೋ ನೋಡಬೇಕೆಂದು ಎಣಿಸಿ, ತಿರುಗಿ ಆಬಳಿಗೆ ಬಂದಲ್ಲಿ ಅವನನು ಕಾಣದೆ ಮನಸ್ಸಿನಲ್ಲಿಯೆ ಯೋಚಿಸಿದೆನು. ಮನ್ಮಥಪರವಶ ನಾಗಿ ಅವಳ ಬೆನ್ನುಹಿಡಿದು ಹೋದನೋ ? ಅಲ್ಲದೆ ಇದ್ದರೆ ಅವಳು ಹೋದ ಮೇಲೆ ತಿಳುವಳಿಕೆ ಹುಟ್ಟಿ ನನ್ನ ಮುಂಗಡೆಗೆ ಬರುವುದಕ್ಕೆ ನಾಚಿಕೊಂಡು ಇದ್ದಾನೊ ? ಅದು ಅಲ್ಲವೋ ? ಕೋಪಿಸಿಕೊಂಡು ನನ್ನನ್ನು ಬಿಟ್ಟು ಹೋದ ನೋ ? ಎಂದು ಚಿಂತಿಸುತ್ತ ಬಂದಿಷ್ಟು ಹೊತ್ತು ಅಲ್ಲಿ ಇದ್ದು ಹುಟ್ಟಿದಾರಭ್ಯ ವಾಗಿ ಒಂದು ದಿನವೂ ಅತನನಗಲದೆ ಇದ್ದುದರಿಂದ ಆ ಕ್ಷಣವಿರಹವನು ಸಹಿಸಲಾರದೆ ಕೆಲಬಲದಲ್ಲಿ ಅವನನು ಅರಸುತ್ತ ಕಾಣದೆ ಗಿಡುಮರಗಳ ಬಳಿ ಯಲ್ಲಿ ಹೊದರುಮನೆಗಳಲ್ಲಿ ಕೊಳದ ತಡಿಗಳಲ್ಲಿ ನೋಡುತ್ತ ಬಹು ಹೊತ್ತಿನ ಮೇಲೆ ಒಂದು ಹೊದರುಮನೆಯ ಮುಂದುಗಡೆಯಲ್ಲಿ ಕಲ್ಲಹಾಸಿಯ ಮೇಲೆ ಕುಳಿತು ಸಕಲ ವ್ಯಾಪಾರವನು ಬಿಟ್ಟಿರುವುದರಿಂದ ಚಿತ್ರದಲ್ಲಿ ಬರೆದಂತೆ ಕೆತ್ತಿಸಿದಂತೆ ಮರವಟ್ಟಂತೆ ವೈರಾಗ್ಯವುಂಟಾದಂತೆ ಮುಳುಗಿದವನಂತೆ ಯೋಗಧ್ಯಾನದಲ್ಲಿರುವವ ನಂತೆ ಸಂಚಲಿಸದೆ, ಮರುಳಾಗಿ ಮತಿಮೋಹವಂದು ಮನ್ಮಥಪರವಶನಾಗಿ ಬೆಳ್ಗಾಳಿಯನೇರಿಸಿ, ಮೌನವಾಗಿದ್ದರೂ ಆಕಾರದಿಂದಲೆ ವಿರಹವೇದನೆಯ ಹೇಳುತ್ತ ಸೂಸೈಸಿ ಬಿಸುಸುಯ್ಲ ಸುಯ್ಯುತ್ತ ಎಡದ ಗಲ್ಲದ ಮೇಲೆ ಕೈಯನಿಟ್ಟು ಕಂಬನಿ ಗಳ ಕರೆಯುತ್ತ, ಮುಂಬಗಲ ಚಂದ್ರನಂತೆ ಕಾಂತಿಹೀನನಾಗಿ, ಬೇರೊಬ್ಬ

ನಂತೆ ಹೊಸಬನಂತೆ ಗುರುತರಿಯದವನಂತೆ ಮತ್ತೊಂದಾಕಾರವಾಗಿ ಕಾಣಿ ಸುತ್ತ, ತೂರಿಗ ಬಂದವನಂತೆ ಭೂತ ಸೋಂಕಿದವನಂತೆ ಹುಚ್ಚನಂತೆ ಕುರುಡ ನಂತೆ ಮೂಗನಂತೆ ಕಿವುಡನಂತೆ ಮನ್ಮಥಪರವಶನಾಗಿರುವ ಬಗೆಯನು ಕಂಡು, ಎವೆಹೊಯ್ಯದೆ ನೋಡಿ, ಬಹುದುಃಖಪಡುತ್ತ ಹೃದಯದಲ್ಲಿ ಆಲೋಚಿಸಿದೆನು:-- ಲೋಕದಲ್ಲಿ ಮನ್ಮಥವೇದನೆಯನು ತಾಳತಕ್ಕವರಾರುಮಿಲ್ಲ. ಕ್ಷಣಮಾತ್ರಕ್ಕೆ ಇಂಥವನು ಈಬಗೆಯಾದನು! ಆತನ ವಿವೇಕವೆಲ್ಲವು ಒಂದೇಸಾರಿಗೆ ವ್ಯರ್ಥ ವಾಯಿತು. ಇವನು ಹುಟ್ಟಿದಂದು ಮೊದಲಾಗಿ ಬಹುಧೈರ್ಯವಂತನು; ಬೆದ ರುವ ಮನಸ್ಸಿನವನಲ್ಲ. ಇವನ ನಡೆವಳಿತವ ನೋಡಿದರೆ ನಾನು ಮೊದಲಾದ ಸಕಲ ಮುನಿಕುಮಾರರು ಬಯಸುವಹಾಗೆ ಇರುವುದು. ಈಗ ಆಬಗೆಯ ವಿವೇಕವನು ಲೆಕ್ಕಿಸದೆ, ತಪವನು ಎಣಿಸದೆ, ಪ್ರಭಾವವನು ಗಣನೆಗೆ ತಾರದೆ, ಮನ್ಮಥನು ಒಳಗುಮಾಡಿಕೊಂಡನು ! ಸರ್ವಪ್ರಕಾರದಲ್ಲಿಯು ಜವ್ವನದಲ್ಲಿ ಎಡ ಹದವರಿಲ್ಲ——ಎಂದು ಯೋಚಿಸುತ್ತ, ಅವ ಕುಳಿತಿರುವ ಕಲ್ಲಜಗಿಯಮೇಲೆ ಕೆಲ ದಲ್ಲಿ ಕುಳಿತು ಕಣ್ಮುಚ್ಚಿರುವ ಪುಂಡರೀಕನನು ಕೈಮುಟ್ಟಿ ಎಚ್ಚರಿಸುತ್ತ, ಇದೇ ನೆಂದು ಕೇಳಿದೆನು.

ಆಮೇಲೆ ಅವನು ಬಿಡದೆ ಅಳುವುದರಿಂದ ಕೆಂಪುವಡೆದ ಕಂಬನಿಗೂಡಿದ ಕಣ್ಗಳನು ತೆರೆದು ಬರಿಲುನೋಟದಿಂದ ನನ್ನ ಮೊಗವನು ಧ್ಯಾನಿಸಿ ನೋಡಿ ನಿಡುಸುಯ್ದು, ಲಜ್ಜೆಯಿಂ ನುಡಿ ತಡಬಡಿಸುತಿಂತೆಂದನು:——ಎಲೆ ಕಪಿಂಜಲ, ಈ ವೃತ್ತಾಂತವನು ಎಲ್ಲವನು ನೀನು ತಿಳಿದಿದ್ದೂ ನನ್ನನೇನುಕಾರಣ ಕೇಳುತಿದ್ದೆ? ಎಂದು ನುಡಿಯಲಾಗಿ; ನಾನು ಆಮಾತ ಕೇಳುತ್ತ ಅವನಿರುವ ಆಕಾರದಿಂದಲೆ ಅವನ ಬಿಡಿಸುವದಕ್ಕಾಗದೆಂಬಂತೆ ಅರಿತಿದ್ದೂ, ತನ್ನವನು ತಪ್ಪುದಾರಿಗೆ ಹೋಗುತ್ತಲಿದ್ದರೆ ತನ್ನ ಕೈಯಲಾದಷ್ಟು ತಿಳಿಯಹೇಳಿ ತಿರುಗಿಸಬೇಕೆಂಬುದ ರಿಂದ ನುಡಿದೆನು:——ಬಾರೈ ಪುಂಡರೀಕ, ದಿಟ್ಟನಹುದು. ಈ ವೃತ್ತಾಂತವನು ನಾನು ಬಲ್ಲೆನು. ಆದರೂ ಕೇಳುತಲಿದ್ದೇನು. ಈಗ ನೀನು ತೊಡಗಿದ ಕಾರ್ಯ ವಿದೆಯಲ್ಲ; ಇದೇನು ! ಗುರುಗಳುಪದೇಶಮಾಡಿದುದೊ ? ಅಲ್ಲವೆ ಧರ್ಮಶಾಸ್ತ್ರ ದಲ್ಲಿ ಓದಿ ಇದ್ದುದೊ? ಪುಣ್ಯವ ಸಂಪಾದಿಸುವ ಬಗೆಯೊ ? ಬೇರೊಂದು ಬಗೆಯ ತಪವ ಮಾಡುವ ಕ್ರಮವೊ ? ಸದ್ವ್ರತರಹಸ್ಯವೊ ? ಮೋಕ್ಷೋಪಾ ಯವೊ ? ನಿಯಮವೊ ? ಇದೇನು ? ನಿನ್ನಂಥವನು ಮನಸ್ಸಿನಲ್ಲಿ ಯೋಚಿಸು ವುದಕ್ಕೂ ಯೋಗ್ಯವಲ್ಲ. ಇದನು ಬಯಸಿ ಇದಕ್ಕೆ ಮನವ ಮಾಡುವುದು

ಚಿತನೆ ? ಅಱಿಯದವನಂತೆ ಮನ್ಮಥವಿಕಾರದಿಂದ ಲೋಕದಲ್ಲಿ ನಗೆಗೀಡಾಗುತ್ತಿದ್ದೀಯೆ ! ಅಜ್ಞಾನಿಗಳು ಬಯಸುವ ಈ ವಿಷಯಸುಖಕ್ಕೆ ನಿನ್ನಂಥವರು ಆಸೆ ಪಡುವರೆ ! ಸಸಿಗೆ ನೀರೆಱೆದರೆ ಪುಣ್ಯವೆಂದು ವಿಷಲತೆಗಳ ಸಾಕುವಂತೆ, ಹೊಗೆಯೆಂದು ಕೃಷ್ಣಸರ್ಪಕ್ಕೆ ಮೈಗೊಡುವಂತೆ, ರತ್ನವೆಂದು ತನಿಗೆಂಡವ ಮುಟ್ಟುವಂತೆ, ತಾವರೆಯ ಗೆಣಸೆಂದು ಕಡಿದಿನಾನೆಯ ಕೊಂಬಿಗೆ ಕೈನೀಡುವಂತೆ, ಮೂಢರು ಸುಖವೆಂದು ವಿಷಯಗಳ ಭೋಗಿಸುವರು. ನೀನು ನೆಲೆಯ ತಿಳಿದಿದ್ದೂ ಬೆಂಕಿಗೆ ಬೀೞುವ ಪತಂಗದಂತೆ ಏತಕ್ಕೆ ಮುಗ್ಗುತಲಿದ್ದೀಯೆ ? ನಿನ್ನ ವಿವೇಕವೆಲ್ಲ ವ್ಯರ್ಥವಾಗಿದೆ. ಮೇರೆಯ ಮೀಱುವ ಇಂದ್ರಿಯಗಳನು ನೆಲೆಗೆ ನಿಲ್ಲಿಸು ಪದರುವ ಮನವನು ಗಟ್ಟಿಮಾಡಿಕೊಳ್ಳು. ಅನಂಗನೆಂಬ ದುರಾಚಾರನನ್ನು ನಿವರ್ತಿಸು. ಧೈರ್ಯದಿಂದ ಸಕಲವನು ಗೆಲಬಹುದು. ಎಂದು ನುಡಿಯುತ್ತಿರುವ ಎನ್ನ ಮಾತನು ನಿಲ್ಲಿಸಿ, ತನ್ನ ಕಣ್ಣೀರುಗಳ ತೊಡೆದುಕೊಂಡು ನುಡಿದನು:—ಕೇಳ್ಳೈ ಕಪಿಂಜಲ, ನಾನಿನ್ನೇನ ಹೇೞುವೆನು ? ನೀನು ಸ್ವಸ್ಥವಾಗಿ ಇದ್ದೀಯೆ. ಉರಿಸಿಂಗಿಯಂತೆ ಕ್ರೂರವಾದ ಮನ್ಮಥನಂಬುಗಳು ಎಡತಾಕುವ ದಾರಿಗೆ ನೀನು ಸುೞಿದವನಲ್ಲ. ಆವವನಿಗೆ ಇಂದ್ರಿಯಗಳು ಉಂಟಾಗಿವೆ, ಮನಸ್ಸು ಉಂಟಾಗಿವೆ, ಆವವನು ನೋಡುತಲಿದ್ದಾನೆ, ಕೇಳುತ್ತಲಿದ್ದಾನೆ, ಕೇಳಿದುದಱಲ್ಲಿ ಇದು ಒಳ್ಳಿತು ಇದು ಅಲ್ಲದು ಎಂದು ತಿಳಿಯುತಲಿದ್ದಾನೆ, ಅವನಿಗುಪದೇಶಮಾಡುವುದು ಯೋಗ್ಯವು. ನನಗೆ ಈಗ ಇದೊಂದೂ ಇಲ್ಲ; ತಿಳುವಳಿಕೆ ಯೆಂಬ, ವಿವೇಕವೆಂಬ, ಧೈರ್ಯವೆಂಬ, ಈ ಕಥೆಗಳು ಅಸ್ತಮಿಸಿದುವು. ಬಹು ಯತ್ನದಿಂದ ಪ್ರಾಣವ ಮಾತ್ರ ನಿಲ್ಲಿಸಿಕೊಂಡಿದ್ದೇನೆ. ಹಿತೋಪದೇಶವ ಕೇಳುವ ಕಾಲವೆಲ್ಲ ಹೋಯಿತು. ಧೈರ್ಯವ ಮಾಡುವ ದಿವಸವೆಲ್ಲವು ಗತವಾಯಿತು. ನನಗೆ ನೀನಲ್ಲದೆ ಬೇಱೆ ಹಿತವ ನುಡಿವರಾರು ? ತಪ್ಪುದಾರಿಗೆ ಹೋಗುತಿದ್ದರೆ ತಡೆವರಾರು ? ನಾನು ಬೇಱೆ ಇನ್ನಾವನ ಮಾತ ಕೇಳಿ ನಡೆದುಕೊಳ್ಳತಕ್ಕುದು ? ನಿನ್ನ ಬೇಱೆ ಇನ್ನು ಆಪ್ತಬಂಧುವಾರು ? ಆದರೂ ನಾನೇನ ಮಾಡುವೆನು ? ಮನಸ್ಸು ಹಿಡಿಯಲಾಱೆನು. ಈಗ ನಾನು ಇರುವ ಬಗೆಯ ನೀನೆ ಕಂಡೆಯಲ್ಲ; ಇನ್ನು ನನ್ನ ಪ್ರಾಣಗಳು ಹೋಗುವುದಕ್ಕೆ ಮುಂಚಿತ್ತಾಗಿಯೆ ಪ್ರಳಯಕಾಲದಲ್ಲಿ ಒಂದೇವೇಳೆ ಮೂಡಿದ ಹನ್ನೆರಡು ಸೂರ್ಯರ ಕಿರಣಂಗಳಂತೆ ಬಿಸಿಯಾದ ಈ ವಿರಹಸಂತಾಪವನು ನಿಲಿಸುವುದಕ್ಕೆ ಉಪಾಯವ ಕಾಣು. ಮೈಕೈಗಳೆಲ್ಲ ಉರಿಯುತ್ತಲಿವೆ; ಮನಸ್ಸು ಕುದಿಯುತ್ತಲಿದೆ; ದೃಷ್ಟಿ ಜ್ವಲಿಸುತ್ತಲಿದೆ; ಈ

ಸಮಯಕ್ಕೆ ಏನು ಉಚಿತವೋ ಆಪ್ರಕಾರ ನಡೆಸೆಂದು ನುಡಿದು, ಸುಮ್ಮನಾದಲ್ಲಿ; ನಾನು ಮತ್ತು ಮತ್ತು ಶಾಸ್ತ್ರವಚನಗಳ ಹೇೞಿ ದೃಷ್ಟಾಂತಗಳ ತೋಱಿ ಕಥೆಗಳನು ಹೇೞಿ ಒಡಂಬಡಿಕೆಗೂಡಿ ಏಷ್ಟೆಷ್ಟುಬಗೆಯಲ್ಲಿ ತಿಳಿಯ ಹೇೞಿದರೂ ಅವನ ಕಿವಿಗೆ ಹೊಗದೆ ಇದ್ದುದಱಿಂದ, ಇವನು ಮಿತಿಮೀಱಿದವನು, ಇವನಿಗೆ ಹೇೞಿ ಪ್ರಯೋಜನವಿಲ್ಲ, ಇವನ ಪ್ರಾಣವನಾದರೂ ಕಾಪಾಡಬೇಕು-ಎಂದು ನಿಶ್ಚಯಿಸಿ, ಎದ್ದು ಆಬೞಿಯಲ್ಲಿದ್ದ ಕೊಳದಲ್ಲಿ ಇೞಿದು ತಾವರೆಯ ಗೆಣಸು ತಾವರೆಯ ಎಲೆ ನೈದಿಲ ದಂಟುಗಳ ಸಹವಾಗಿ ತಂದು ಹಾಸಿ ಅವನನು ಮಲಗಿಸಿ ಸಮೀಪದಲ್ಲಿರುವ ಚಂದನದ ಮರದ ಚಿಗುರುಗಳಂ ಕೈಗಳಿಂದ ತಿಳಿರಸವ ಹಿಂಡಿ, ನಖಶಿಖಿಪರ್ಯಂತವು ಲೇಪಿಸಿ, ಬಿಡದೆ ಬೆಮರುವ ಮೈಗೆ ಕೆಲದಲ್ಲಿರುವ ಕಪ್ಪುರವಾೞಿಯ ಮರದ ಕಪ್ಪುರದ ಹುಡಿಗಳ ಚೆಲ್ಲುತ್ತ, ಎದೆಗೆ ಚಂದನರಸದಲ್ಲಿ ನೆನೆಯಿಕ್ಕಿದ ನಾರ ಸೀರೆಯ ಹೊದಿಸಿ, ಎಳವಾೞೆಯ ಎಲೆಯಿಂದ ಬೀಸುತ್ತ, ಮತ್ತೆಮತ್ತೆ ಹೊಸಹೊಸತಾಗಿ ತಾವರೆಯ ಎಲೆಗಳ ಹಾಸುತ್ತ, ಚಂದನರಸಗಳ ಲೇಪಿಸುತ್ತ, ಬೆಮರ ಕಳೆಯುತ, ಬಾೞೆಯೆಲೆಗಳಿಂ ಬೀಸುತ್ತ, ಮನಸ್ಸಿನಲ್ಲಿ ಚಿಂತಿಸಿದೆನು. ಮನ್ಮಥನಿಗೆ ಅಸಾಧ್ಯವಾದ ಕಾರ್ಯಗಳಿಲ್ಲ. ಕಾಡಿನಲ್ಲಿ ಮೃಗದಂತೆ ಏನನೂ ಅಱಿಯದ ಇವನೆಲ್ಲಿ, ನೆಱೆಸೊಗಸುಗಾತಿಯಾದ ಈ ಗಂಧರ್ವರಾಜನ ಮಗಳೆಲ್ಲಿ! ಎಂಥ ದುರ್ಘಟವಾದರೂ ಮನ್ಮಥನ ಕೈಯಲ್ಲಿ ಆಗದ ಕಾರ್ಯವಿಲ್ಲ; ಇವನಿಗೆ ವಶವಾಗದುದಿಲ್ಲ. ಅಚೇತನವಸ್ತುಗಳನಾದರೂ ಒಳಗುಮಾಡಿಕೊಳ್ಳಬಲ್ಲನು. ಇವನು ಬೇಕೆಂದು ತೊಡಗಿದನಾದರೆ ನೈದಿಲಾದರೂ ಸೂರ್ಯನ ಬಯಸುವುದು; ತಾವರೆಯು ಚಂದ್ರನ ಮೇಲಣ ದ್ವೇಷವ ಬಿಡುವುದು; ಇರುಳು ಹಗಲೊಡನೆ ಸ್ನೇಹವಾಗಿ ಕೂಡಿರುವುದು; ಬೆಳುದಿಂಗಳು ಕತ್ತಲೆಯೊಡನೆ ಬೆರೆದಿರುವುದು; ನೆೞಲು ದೀವಿಗೆಯಿದಿರಾಗಿ ಇರುವುದು; ಮಿಂಚು ಮುಗಿಲಲ್ಲಿ ಸ್ಥಿರವಾಗಿರುವುದು; ಮುಪ್ಪು ಜವ್ವನದೊಡನೆ ಕೂಡಿರುವುದು. ಮನ್ಮಥನ ಕೈಯಲಾಗದ ಕಾರ್ಯವಾವುದು? ಅಬಗೆಯಧೈರ್ಯವುಂಟಾಗಿರುವ ಪುಂಡರೀಕನನ್ನು ಒಂದೇ ವೇಳೆ ತೃಣಕ್ಕೆ ಕಡೆಮಾಡಿ ಬಿಟ್ಟನು. ಆ ಬಗೆಯ ತಪಸ್ಸೆಲ್ಲಿ! ಈಗಿರುವ ಬಗೆಯಲ್ಲ! ನಾನಾ ಪ್ರಕಾರದಿಂದಲು ಈವಿಪತ್ತನು ಪರಿಹರಿಸುವುದಕ್ಕೆ ಆಗದೆ ಇದೆ. ಈಗ ಏನು ಮಾಡಬೇಕು? ಎಂತು ಪ್ರವರ್ತಿಸಬೇಕು? ಇದಕ್ಕೆ ಗತಿಯಾರು? ಆರು ದಯೆಗೈವರು? ಆರು ಸಹಾಯವಾದಾರು? ಇದಕ್ಕೆ ಯುಕ್ತಿಯೇನು? ಇದಕ್ಕೆ ಬದಲಾವುದು? ಆರ ಸೇರುವೆನು? ಆವ ಕೌಶಲದಿಂದಾಗಲಿ, ಆವ ಬಲುಮೆ

ಯಿಂದಾಗಲಿ, ಆವ ಬುದ್ಧಿಯಿಂದಾಗಲಿ, ಆವ ಬದಲುಕಾರ್ಯದಿಂದಾಗಲಿ, ಆವ ಒಡಂಬಡಿಕೆಯಿಂದಾಗಲಿ, ಆತನ ಕಾಪಾಡಬೇಕು. ಅದು ಕಾರ್ಯವಾಗಲಿ ಅಕಾರ್ಯ ವಾಗಲಿ ಆಗಂಧರ್ವಕನ್ಯೆಯ ಒಡಗೂಡಿಸುವುದಲ್ಲದೆ ಇದಕ್ಕೆ ಬೇರೆ ಉಪಾಯವಿಲ್ಲ. ಇವನು ಬಾಲ್ಯವಯಸ್ಸಿನವನಾದರೂ ತಾನು ಮಾಡುವ ತಪಕ್ಕೆ ವಿರುದ್ಧವಾದ ಮನ್ಮಥ ವಿಕಾರಕ್ಕೆ ಒಳಗಾದನೆಂಬ ಪರಿಹಾಸಕ್ಕೆ ಈಡಾಗಬಾರದೆಂದು, ಪ್ರಾಣ ಹೋಗುತ್ತಿದ್ದರೂ ಸಾಹಸವ ಮಾಡಿ ತಾನೆ ಅವಳ ಬಳಿಗೆ ಹೋಗಿ ಸೇರಿ ತನ್ನ ಮನೋರಥವ ಸಲಿಸಿಕೊಳಲಾರನು. ಇನ್ನು ಬಹುದಿನ ಪ್ರಾಣವನ್ನು ಹಿಡಿಯ ಲಾರನು. ಲೋಕದಲ್ಲಿ ಆವ ಅಲ್ಲದ ಕೃತ್ಯವ ನಡೆಸಿಯಾದರೂ ಸ್ನೇಹಿತನ ಪ್ರಾಣ ವನುಳುಹಬೇಕು. ಅದಱಿಂದ ಈಗ ಎಷ್ಟು ನಾಚಿಕೆಗೇಡಾದರೂ, ಮಾಡಬಾರದಂ ತಾದರೂ ಈ ಸಂಕಟವು ಅವಶ್ಯ ಮಾಡತಕ್ಕುದಾಯಿತು. ಇನ್ನೇನ ಮಾಡಬೇಕು ? ಇನ್ನು ಬೇಱೆ ಗತಿಯಾವುದು? ಸರ್ವಪ್ರಕಾರದಲ್ಲಿಯೂ ಅವಳ ಬಳಿಗೆ ಹೋದೇನು. ಇವನ ಬಗೆಯನೆಲ್ಲವನು ತಿಳಿಯುಹೇಱೇನು--ಎಂದು ಯೋಚಿಸಿಕೊಂಡು ಈ ವೃತ್ತಾಂತವನು ಅವನಿಗೆ ಅಱಿಕೆಮಾಡಿದರೆ ನಾಚಿಕೊಂಡು ಬೇಡವೆಂದಾನೋ ಎಂಬುದಱಿಂದ ಬೇಱೊಂದು ನೆವವ ಮಾಡಿಕೊಂಡು ಅಲ್ಲಿಂದ ಹೊಱಟು ನಿನ್ನ ಬಳಿಗೆ ಬಂದೆನು. ಈಮೇಲೆ ಈವೇಳೆಗೆ ಏನು ಉಚಿತವೊ ? ಈಬಗೆಯ ಪ್ರೀತಿಗೆ ಏನು ಅನುಕೂಲವೊ? ಅನುಗುಣವೊ? ನನ್ನಂಥವನು ನಿನ್ನಂಥವಳ ಬಳಿಗೆ ಬಂದುದಕ್ಕೆ ಸಲುವಂಥಯು ನಡತೆಯಾವುದೊ ? ಅದನು ವಿಚಾರಿಸಿಕೊಂಡು ನಿನಗೆ ಸರಿಬಂದರೀತಿಗೆ ಪ್ರವರ್ತಿಸು--ಎಂದು ಆಕಪಿಂಜಲನು ನನ್ನ ಅಭಿಪ್ರಾಯವ ತಿಳಿಯ ಬೇಕೆಂದು ನನ್ನ ಮುಖವನೆ ನೋಡುತ್ತ ಮೌನದಲ್ಲಿ ಇರಲಾಗಿ; ನಾನು ಆನುಡಿ ಯನು ಕೇಳಿದುದಱಿಂದ ಸುಖಸಾಗರದಲ್ಲಿ ತೇಲುವಳಂತೆ, ಸಕಲಮನೋರಥವು ಕೈಸೇರಿದಂತೆ, ಸಕಲ ಉತ್ಸವಗಳುಂಟಾದಂತೆ ಪರಮಾನಂದಭರಿತೆಯಾಗಿ ತತ್ಕಾಲ ದಲ್ಲಿ ಉಂಟಾದ ಕಿಱುನಾಚಿಕೆಯಿಂದ ಮುಖವನು ಒಂದಿಷ್ಟು ಬಾಗಿಸಿ ಬಿಡದು ಗುವ ಆನಂದಬಾಷ್ಪದಿಂದ ಮನೋಹರ್ಷವನು ಹೊಱಹೊಮ್ಮಿಸುತ್ತ ಮನಸ್ಸಿನಲ್ಲಿ ಯೋಚಿಸಿದೆನು. ಎನ್ನನು ಪೀಡಿಸಿದಂಥ ಮನ್ಮಥನು ದೈವಾಧೀನದಿಂದ ಅವನನು ಪೀಡಿಸಿದನು. ನನ್ನನು ಎಷ್ಟು ಬಗೆಯಲ್ಲಿ ನೋಯಿಸಿದರೂ ಎಷ್ಟು ಸಂತಾಪ ಪಡಿಸಿದರೂ ನನಗೆ ಅನುಕೂಲನಾದನು. ಅವನಿಗೆ ಆಬಗೆಯ ವಿರಹವನುಂಟು ಮಾಡಿದಮೇಲೆ ಮನ್ಮಥನು ನನಗೆ ಆವ ಉಪಕಾರಮಾಡಲಿಲ್ಲ ! ಆವ ಕಾರ್ಯವನು ಸಾಧಿಸಿಕೊಡಲಿಲ್ಲ ! ಇನ್ನು ಅವನಿಂದ ಬೇಱೆ ಆಪ್ತಬಂಧುಗಳಾರು ? ಈಬಗೆಯ

ಗುಣವುಂಟಾದ ಕಪಿಂಜಲನ ಮಾತು ಹುಸಿಯಾಗದು. ಇದಕ್ಕೆ ಏನು ಯತ್ನವ ಮಾಡಬೇಕು ? ಈಗ ಏನೆಂದು ಉತ್ತರವ ಹೇಳಬೇಕು ? ಎಂದು ಯೋಚಿಸುತಿರುವಷ್ಟರೊಳಗೆ ಬಾಗಿಲ ಉಳಿಗದವಳೊಬ್ಬಳು ಕದುಬುಗೂಡಿ ನನ್ನ ಬಳಿಗೆ ಬಂದು, ಅಮ್ಮನಿಗೆ ಸ್ವಸ್ಥವಿಲ್ಲವೆಂಬುದನು ಕೇಳಿ, ಅರಸಿತಿಯಮ್ಮನವರು ಬಂದು ಇದ್ದಾರೆ, ಎಂದು ಹೇಳಿದಳು.

ಆಮಾತ ಕೇಳಿ ಕಪಿಂಜಲನು ಸಂದಣಿಗೆ ಅಳುಕಿ ಬೇಗ ನಿಂತುಕೊಂಡು–ಅರಸುಮಗಳೆ, ಕೇಳು; ನಾನು ಬಂದು ಬಹು ಹೊತ್ತಾಯಿತು; ಸೂರ್ಯಾಸ್ತಮವಾಯಿತು; ನಾನು ಹೋಗುತ್ತಲಿದ್ದೇನೆ ಸರ್ವಪ್ರಕಾರದಲ್ಲೂ ಸ್ನೇಹಿತನ ಪ್ರಾಣದಾನವ ಮಾಡಬೇಕೆಂದು ಕೈಮುಗಿದು ಬೇಡಿಕೊಂಡು ಪ್ರತ್ಯುತ್ತರವನು ಬಯಸದೆ, ಸಂದಣಿಗೆ ಸಿಕ್ಕದೆ ತೆರಳಿದನು.

ಆಮೇಲೆ ನಮ್ಮ ತಾಯಿಯು ಸಮೀಪಕ್ಕೆ ಬಂದು ಕೆಲವು ಹೊತ್ತು ಕುಳಿತಿದ್ದು ಮನೆಗೆ ಹೋದಳು. ಆಸಮಯದಲ್ಲಿ ಅವಳು ಬಂದು ಆವ ರೀತಿಯಲ್ಲಿ ಇದ್ದಳೋ ಆವ ಮಾತನಾಡಿದಳೋ ಅರಿಯೆನು ಸಾಯಂಕಾಲವಾದಮೇಲೆ ಮನೋವ್ಯಾಕುಲದಿಂದ ಸಮೀಪದಲ್ಲಿರುವ ತರಳಿಕೆಯ ನುಡಿಸಿದೆನು. ಎಲೆ ತರಳಿಕೆ, ನನ್ನ ಮನಸ್ಸಿನ ವ್ಯಾಕುಲವನು ಕಾಣೆಯ ? ನನಗೆ ಕಣ್ಣು ಕಾಣಬರಲಿಲ್ಲ; ಕಿವಿ ಕೇಳಬರಲಿಲ್ಲ; ಈ ರೀತಿ ನಡೆದುಕೊಳ್ಳಬೇಕೆಂದು ನನಗೆ ತಿಳಿಯಬರಲಿಲ್ಲ; ನಾನು ಈಸಮಯದಲ್ಲಿ ನಡೆದು ಕೊಳ್ಳತಕ್ಕುದನು ಹೇಳು. ಕಪಿಂಜಲನು ಹೇಳಿಹೋದ ಮಾತ ನೀನೇ ಕೇಳಿದೆಯಲ್ಲ, ಅದಕ್ಕೆ ನಾನು ಆವರೀತಿಯಲ್ಲಿ ಈ ಚಿಕ್ಕಪ್ರಾಯದಲ್ಲಿಯೆ ನಾಚಿಕೆಯನು ಬಿಟ್ಟು, ಧೈರ್ಯವನು ತೊರೆದು, ನೀತಿಯನುಳಿದು, ಲೋಕಾಪವಾದವನೆಣಿಸದೆ, ಕುಲಾಚಾರವ ಮೀರಿ, ಅಪಕೀರ್ತಿಗೆ ಅಳುಕದೆ, ಕಾಮಾಂಧಕಾರದಿಂದ ತಂದೆಯ ಅಪ್ಪಣೆಯಿಲ್ಲದೆ, ತಾಯಿಯ ಸಮ್ಮತಿಯಿಲ್ಲದೆ, ನಾನೆ ಅವನ ಬಳಿಗೆ ಹೋಗಿ ಸೇರಿದೆನಾದರೆ, ತಂದೆತಾಯಿಗಳ ಮೀರಿ ನಡೆದುದರಿಂದ ಬಹು ಅಧರ್ಮ ಉಂಟಾಗುತ್ತಲಿದೆ. ಧರ್ಮದಲ್ಲಿ ನಡೆಯಬೇಕೆಂದು ಅವನ ಬಳಿಗೆ ಹೋಗದೆ, ಸಾವಿಗೆ ಒಪ್ಪಿಕೊಂಡು ಇದ್ದರೂ ತಾನಾಗಿ ಬಂದು ಬೇಡಿಕೊಂಡ ಕಪಿಂಜಲನ ಮನೋರಥವ ಭಂಗವ ಮಾಡಿದುದರಿಂದ ಮೊದಲು ಒಮ್ಮೆ ಪಾಪ ಬರುತ್ತದೆ; ಆಮೇಲೆ ನಾನು ಬರುವುದಿಲ್ಲವೆಂದು ನಿರಾಶೆಯಲ್ಲಿ ಆ ಪುಂಡರೀಕನು

ಪ್ರಾಣವ ಬಿಟ್ಟನಾದರೆ ಮುನಿಯು ಕೊಂದುದರಿಂದ ಮಹಾಪಾತಕ ಬರುತ್ತಲಿದೆ, ಎಂದು ಹೇಳುತ್ತಿರುವ ಸಮಯದಲ್ಲಿಯೇ ಚಂದ್ರೋದಯ ವಾಗಲಾಗಿ ಕಂಡು ಮನಸ್ಸಿನಲ್ಲಿ ಮನ್ಮಥಾಗ್ನಿ ಉರಿಯುತ್ತಲಿದ್ದರೂ ಮೋಹಾಂಧ ಕಾರವುಂಟಾಗಿ, ತರಳಿಕೆಯು ತೊಡೆಯಮೇಲೆ ಬಿದ್ದಿದ್ದು ಮದನನ ಕೈಗೊಳಗಾಗಿ ಚಂದ್ರನಲ್ಲಿ ದೃಷ್ಟಿಯಿಟ್ಟು ಇದ್ದರೂ ಮೃತ್ಯುವನೆ ನೋಡಿಕೊಂಡಿದ್ದಾಳೆ ಎನಿಸಿ ಕೊಳುತ ಚಿಂತಿಸುತ್ತಿದ್ದೆನು. ಲೋಕದಲ್ಲಿ ಮನ್ಮಥ ವಸಂತಕಾಲ ತಂಗಾಳಿ ಮೊದಲಾದ ವಿರಹೋದ್ದೀಪನಕಾರಿಗಳೆಲ್ಲವು ಒಂದು ತಟ್ಟು; ಈಪಾಪಿಯಾದ ಚಂದ್ರನೆ ಒಂದು ತಟ್ಟು; ಅದೆಲ್ಲವನು ಸಹಿಸಬಹುದು; ವಿರಹವ ಸಹಿಸುವುದ ಕ್ಕಾಗದು. ಮೊದಲೇ ವಿರಹವೇದನೆಯಿಂದ ನೊಂದಿರುವ ಸಮಯದಲ್ಲಿ ಈ ಚಂದ್ರೋದಯವಾದುದು ತಾಪಜ್ವರದಲ್ಲಿ ಇರುವವನ ಮೇಲೆ ಕೆಂಡದ ಮಳೆಯು ಸುರಿದಂತೆ, ಚಳಿ ಬಂದವನ ಮೇಲೆ ಹಿಮ ಬಿದ್ದಂತೆ ಎನ್ನುತ್ತ, ಅಂತೆಯೇ ಮೂರ್ಛೆವಡೆದೆನು.

ಆಗ ತರಳಿಕೆಯು ಕದುಬುಗೂಡಿ ಚಂದನರಸವ ಲೇಪಿಸಿ ಬೀಸಣಿಗೆಯಿಂದ ಬೀಸಿದುದರಿಂದ ಕಣ್ಣು ತೆರೆದು, ನನ್ನ ಸಮೀಪದಲ್ಲಿಯೆ ಇದ್ದು ನನಗೆ ಆಬಗೆಯ ಶೈತ್ಯೋಪಚಾರವ ಮಾಡುತ ಕಣ್ಣೀರ ಕಾಲುವೆಯು ಹರಿಸುತ್ತ ದುಃಖಿತೆಯಾಗಿ ರುವ ತರಳಿಕೆಯ ಕಂಡೆನು. ಅವಳು ನನಗೆ ಮೂರ್ಛೆ ತಿಳಿದುದ ಕಂಡು ಕಾಲಿಗೆ ಬಿದ್ದು ಕೈಗಳ ಮುಗಿದುಕೊಂಡು ನುಡಿವಳು:— ಅಮ್ಮಾ, ನಾಚಿಕೆಯು ಸಾಕು. ತಂದೆತಾಯಿಗಳ ಮಾತ ಕೇಳುವುದು ಸಾಕು. ನನ್ನ ಮಾತ ಲಾಲಿಸು. ನನಗೆ ಅಪ್ಪಣೆಯ ಕೊಟ್ಟರೆ ನಿನ್ನ ಪ್ರಾಣಕಾಂತನಿದ್ದ ಬಳಿಗೆ ಹೋಗಿ ಕರೆದುಕೊಂಡು ಬಂದೇನು. ಅಲ್ಲದೆ ಇದ್ದರೆ ನೀನಾದರೂ ಅವನ ಬಳಿಗೆ ಐದುವೆಯಂತೆ, ಏಳು. ನೀನು ಇನ್ನು ತಾಳಲರಿಯೆ. ಚಂದ್ರೋದಯ ಮತ್ತೆ ಹೆಚ್ಚುತ್ತಲಿದೆ- ಎಂಬ ಮಾತುಗಳ ಕೇಳಿ—ನೀನು ಹೇಳುದುದು ಸಹಜವೇ ಸರಿ. ಈಬಗೆಯಲ್ಲಿ ಹೆಚ್ಚಿ ಬರುವ ಚಂದ್ರಮನು ಮನಸ್ಸಿನ ಸಂದೇಹವನು ಪರಿಹರಿಸಿ, ಮೋಸದ ಎಣಿಕೆ ಯೆಂಬುದನು ಕಾಣಬಿಡದೆ, ಸಕಲವಿಘ್ನವನು ಮುರಿಸಿ, ನಾಚಿಕೆಯ ಕೆಡಿಸಿ, ತಾನೆ ಗಂಡನನರಸಿಕೊಂಡು ಹೋಗುವುದು ಹೀನನೆಂಬುದನು ತಿಳಿಯಬಿಡದೆ, ಬಹುಶೀಘ್ರದಲ್ಲಿ ಅವನ ಬಳಿಗಾದರೂ ಯಮನ ಬಳಿಗಾದರೂ ಕರೆದುಕೊಂಡು ಹೋಗುವುದಕ್ಕೆ ಬಂದಿದ್ದಾನೆ. ಪ್ರಾಣ ಹೋಗುವುದಕ್ಕೆ ಮುಂಚಿತ್ತಾಗಿಯೆ ಅವನ ಬಳಿಗೆ ಹೋಗಿಸುವುದಕ್ಕೆ, ಬಂದಿದ್ದಾನೆ. ಪ್ರಾಣ ಹೋಗುವುದಕ್ಕೆ,

ಮುಂಚಿತವಾಗಿಯೆ ಅವನ ಬೞಿಗೆ ಹೋಗುವುದಕ್ಕೋಸುಗ ಎದ್ದು, ಮೂರ್ಛೆಯಿಂದ ಅಲಸಿದ ಮೈಕೈಗಳಿಗೆ ತ್ರಾಣವಿಲ್ಲದೆ ಅವಳ ಕೈಲಾಗ ತೆಗೆದುಕೊಂಡು ಏೞುವ ಸಮಯದಲ್ಲಿ ಅಪಶಕುನವಾಗಿ ಬಲದ ಕಣ್ಣು ಹಾಱಿಲಾಗಿ, ಅಳುಕು ಹುಟ್ಟಿ, ನನ್ನನು ದೈವವದೊಂದು ಬಗೆಯಲ್ಲಿ ತೊಡಗಿಬರುತ್ತದೆ ಎಂದು ಮನದೊಳಗೆ ಚಿಂತಿಸಿದೆನು. ಆಮೇಲೆ ತರಳಿಕೆಯು ಹೂವಿನಸರ ಎಲೆಯ ಗಂಧವುಡಿ ಮೊದಲಾದ ಬೇಕಾದ ವಸ್ತುಗಳೆಲ್ಲವನು ತೆಗೆದುಕೊಂಡು ಸಂಗಡ ಬರುತ್ತಿರಲಾಗಿ; ನಾನು ಆ ಮೂರ್ಛೆಯ ಸಮಯದಲ್ಲಿ ಕೆದಱಿದ ಮಂಡೆ, ಪೂಸಿದ ಗಂಧ, ಕೊರಲಲ್ಲಿ ಧರಿಸಿದ ಜಪಸರ, ಕಿವಿಯ ಮೇಲಿಟ್ಟ ಪಾರಿಜಾತದ ಹೂವು, ಮೇಲುಮುಸುಕಿಟ್ಟ ಚಂದ್ರಗಾವಿ ಸಹವಾಗಿ ನನ್ನ ಊೞಿಗದವರು ಕಾಣದ ಹಾಗೆ ಉಪ್ಪರಿಗೆಯಿಂದಿೞಿದು ಶೃಂಗಾರದ ತೋಟದ ದಿಡ್ಡಿಯಲ್ಲಿ ಹೊಱಟು ಅವನ ಸಮೀಪಕ್ಕೆ ಹೋಗುವಾಗ ದಾರಿಯಲ್ಲಿ ಯೋಚಿಸಿದೆನು:— ತಾನೆ ಪುರುಷನ ನಱಿಸಿಕೊಂಡು ಹೋಗುವವಳಿಗೆ ಊೞಿಗದವರಿಂದ ಫಲವೇನು ? ಹೆದೆಯೇಱಿದ ಬಿಲ್ಲು ಸಹವಾಗಿ ಮನ್ಮಥನು ಬರುತ್ತಲಿದ್ದಾನೆ. ಚಂದ್ರನು ತನ್ನ ಕರಗಳಿಂದ ಕೈಲಾಗ ಕೊಡುತ್ತಲಿದ್ದಾನೆ. ಲಜ್ಜೆಯನು ಬೆಂಗಾವಲಿಗೆ ಇರಿಸಿ ಪಂಚೇಂದ್ರಿಯಂಗಳು ಸಹ ಮನಸ್ಸು ಮುಂದೆ ನಡೆಯುತ್ತಲಿದೆ- ಎಂದು ಯೋಚಿಸುತ್ತ, ತರಳಿಕೆಯೊಂದಿಗೆ ನುಡಿದೆನು:—ಎಲೆ ತರಳಿಕೆ, ಈ ಚಂದ್ರನು ಅವನನು ಮುಂದಲೆ ಹಿಡಿದೆೞೆದು ಈ ದಿಕ್ಕಿನ. ಮುಖವನೆ ತಹನೇ, ಎನಲಾಗಿ; ತರಳಿಕೆಯು ನಗುತ ನುಡಿದಳು:— ಕೇಳು ಮಹಾಶ್ವೇತೆ, ಈ ಚಂದ್ರನಿಗೆ ಅವನೊಂದಿಗೆ ಹೋರಾಟವೇನು ? ನಿನ್ನ ಬಯಸಿ ನಿನ್ನೊಡನೆ ಹೋರುತಲಿದ್ದಾನೆ; ಕಿಱುಬೆಮರುವಡೆದ ಕಪೋಲವನು ಪ್ರತಿಬಿಂಬದ ನೆವದಿಂದ ಚುಂಬಿಸುತ್ತಲಿದ್ದಾನೆ; ಕರಗಳಿಂದ ಸೋಂಕುತಲಿದ್ದಾನೆ; ಉಗುರುಗಳಲ್ಲಿ ಪ್ರತಿಫಲಿಸುವ ವ್ಯಾಜದಿಂದ ಪಾದದ ಮೇಲೆ ಬೀೞುತ್ತಲಿದ್ದಾನೆ —ಇವು ಮೊದಲಾಗಿ ಪರಿಹಾಸಕವ ಮಾಡಿ ನುಡಿಯಲಾಗಿ; ಕೇಳುತ್ತ, ಈ ಬೞಿಗೆ ಬಂದ ದಾರಿಯಲ್ಲಿ ಕುಸುಮಪರಾಗಗಳಿಂದ ದೂಳಾದ ಕಾಲುಗುರುಗಳನ್ನು ಚಂದ್ರೋದಯದಿ ಚಂದ್ರಕಾಂತಶಿಲೆಗಳಿಂದ ಸುರಿವ ನೀರಿನಿಂದ ತೊಳೆಯುತ್ತಿರುವ ಸಮಯದಲ್ಲಿ, ಆ ಪುಂಡರೀಕನು ಆವ ಬೞಿಯಲ್ಲಿದ್ದಾನೋ ಆ ಸಮೀಪದಲ್ಲಿ ಕೊಳದ ಪಡುವಣ ತಡಿಯಲ್ಲಿ ಒಬ್ಬನು ಅೞುತ್ತಿರುವುದನು ಕೇಳಿದೆನು. ಮೊದಲೆ ಬಲದ ಕಣ್ಣು ಹಾಱಿದುದಱಿಂದ ಮನಸ್ಸಿನಲ್ಲಿ ಉಂಟಾದ ಭಯವು ಈ ಧ್ವನಿಯ ಕೇಳಿದುದಱಿಂದ ಇಮ್ಮಡಿಸಿ, ಏನನೋ ಚಿಂತಿಸುತ್ತ, ತರಳಿಕೆ ಇದೇನು ? ಎಂದು ಕೇಳುತ್ತ, ಏೞುತ್ತ ಮುೞುಕುತ್ತ ತ್ವರಿತದಲ್ಲಿ ಬಂದೆನು.

ಅರ್ಧರಾತ್ರಿಯ ಸಮಯವಾದ ಕಾರಣ ಸ್ವರವೆತ್ತಿ ಅಳುತ್ತ ಬೈವ ಬಗೆಗಳನು ಪೈನವಾಗಿ ಕೇಳಿದೆನು. 'ಹಾ ದುರಾತ್ಮಕ! ಮನ್ಮಥಾ! ಒಂದಿಷ್ಟು ದಯವಿಲ್ಲದೆ ಇದೇನು ಅಕೃತ್ಯವ ನಡೆಸಿದೆ; ಪಾಪಿಷ್ಠೆ, ಮಹಾಶ್ವೇತೆ, ನಿನಗೆ ಇವನು ಏನು ಅಪಕಾರವ ಮಾಡಿದನು? ದುಶ್ಚರಿತ್ರ ಚಂದ್ರ, ನೀನಿಂದು ಕೃತಾರ್ಥ ನಾದೆಯಲ್ಲಾ! ಪಾಪಿ ತಂಗಾಳಿ, ನಿನ್ನ ಇಷ್ಟಾರ್ಥ ಸಂದುದೇ! ಮಾಡತಕ್ಕು ದೆಲ್ಲವನು ಮಾಡಿದೆ; ಇನ್ನು ನಿನ್ನ ಮನಸ್ಸು ಬಂದ ರೀತಿಯಲ್ಲಿ ಬೀಸುತ್ತಲಿರು. ಹಾ ಧರ್ಮವೇ, ಪರದೇಶಿಯಾದೆಯಾ? ತಪಸ್ಸೇ, ನಿರಾಶೆಯಾದೆಯಾ? ಸತ್ಯವೇ, ಅನಾಥನಾದೆಯಲ್ಲಾ! ದೇವಲೋಕವೇ, ಹಾಳಾದೆಯಲ್ಲಾ! ಎಲೆ ಪುಂಡರೀಕನೆ, ಎನ್ನೊಡನೆ ಮಾತನಾಡು. ನಾನು ನಿನ್ನ ಬಳಿವಿಡಿದು ಬಂದೆನು, ನಿನ್ನ ಬಿಟ್ಟು ಒಂಟಿಯಾಗಿ ಒಂದು ಕ್ಷಣ ಇರಲಾರೆನು. ಸ್ನೇಹವಿಲ್ಲದವನಂತೆ ಒಂದುವೇಳೆ ಹೀಗೆ ನನ್ನನು ಬಿಟ್ಟು ಹೋಗಬಹುದೆ? ನಿನಗೆ ಇಷ್ಟೊಂದು ಕ್ರೌರ್ಯ ವೆಲ್ಲಿಂದ ಬಂದಿತು? ನಿನಗಾಗಿ ನಾನು ಆರ ಬಳಿಗೆ ಹೋಗುವೆನು. ಆರ ಬೇಡು ವೆನು. ಆರ ಮರೆಯ ಹುಗುವೆನು? ಕಣ್ಣು ಕಾಣದಾದೆನು, ನಾಲ್ಕು ದಿಕ್ಕು ಪಾಳಾಗಿ ಕಾಣುತ್ತಲಿದೆ; ಬದುಕಿದುದೆಲ್ಲವು ವ್ಯರ್ಥವಾಯಿತು; ತಪವ ಮಾಡಿದು ದೆಲ್ಲವು ಅಪ್ರಯೋಜಕವಾಯಿತು; ಇನ್ನು ಆರ ಜತೆಯಲ್ಲಿ ತಿರುಗುವೆನು? ಆರ ನುಡಿಸುವೆನು? ಅಳುತ್ತಿರುವ ಎನ್ನೊಡನೆ ಪ್ರತ್ಯುತ್ತರವ ನುಡಿ; ನನ್ನ ಮೇಲೆ ಉಂಟಾದ ಆಬಗೆ ಎಲ್ಲಿಗೆ ಹೋಯಿತು?- ಎಂದು ಇವು ಮೊದಲಾದ ಪ್ರಲಾಪಗಳನು ಕೇಳಿ, ಆಕ್ಷಣವೇ ಆರ್ತನಾದವ ಮಾಡಿಕೊಳುತ, ಎಡಹುತ, ತಡಬಡಿಸುತ, ಹಳ್ಳತಿಟ್ಟು ಗಳನರಿಯದೆ ಆಸಮೀಪಕ್ಕೆ ಬಂದು, ಆಕೊಳದ ತಡಿಯಲ್ಲಿ ಚಂದ್ರೋದಯದಿಂದ ನೀರೊಸರ್ವ ಚಂದ್ರಕಾಂತದ ಶಿಲೆಯ ಮೇಲೆ ನೈದಿಲು ಕನ್ನೈದಿಲು ಚೆಂಗಣಿಗಲು ಮುಂತಾದ ಹೂವುಗಳ ಹಾಸಿಗೆಯ ಮೇಲಿರುವುದರಿಂದ ಮನ್ಮಥಶರತಲ್ಪದ ಮೇಲೆ ಮಲಗಿರುವಂತೆ, ಸದ್ದಿಲ್ಲದೆ ಇರುವುದರಿಂದ ನನ್ನ ಹಜ್ಜೆಯ ದನಿಯ ನಾಲೈವಂತೆ, ಬಹುಕಾಲದಿಂದ ಬಂದ ವಿರಹಸಂತಾಪವು ಯಮಧರ್ಮನಿಂದ ಈಗ ಸಮಾಧಾನವಾಗಲಾಗಿ ಸುಖದಿ ನಿದ್ರೆಗೈವಂತೆ, ನನಗಿಂತ ಹೆಚ್ಚಾಗಿ ಮತ್ತೊಂದು ಪ್ರಿಯವಸ್ತು ವುಂಟಾಯಿತು ಎಂಬುದರಿಂದ ಪ್ರಾಣವು ಬಿಟ್ಟು ಹೋದಂತೆ, ಮನ್ಮಥಯೋಗಧ್ಯಾನವ ಮಾಡುವವನಂತೆ, ಬಹುವಾಗಿ ಉಸಿರ ಹಿಡಿದು ಅಪೂರ್ವ ವಾದ ಪ್ರಾಣಾಯಾಮವನು ಸಾಧಿಸುವಂತೆ, ನಾನು ಬರುವ ಒಸಗೆಯ ಹೇಳಿಲಿದ ಮನ್ಮಥನಿಗೆ ತನ್ನ ಪ್ರಾಣವನೆ ಕೊಟ್ಟು, ಭುಜದಿಂದ ಸಡಿಲಿದ ಯಜ್ಞೋಪ

ವೀತಡಿಂ ಕರ್ಪೂರಧೂಳಿತದಿಂ ವ್ರತನಿಷ್ಠನಾಗಿ ನನ್ನೊಡಗೂಡುವುದಕ್ಕೆ ಮಂತ್ರ ಸಿದ್ಧಿಯ ಮಾಡಿಕೊಂಬವನಂತೆ, ಮೊದಲೆ ಎಡೆಬಿಡದೆ ಅೞುವುದಱಿಂದ ಕಣ್ಣು ಗಳು ಕೆಂಪಾಗಿ ಪ್ರಾಣವೇದನೆಯಿಂದ ಕಲಯಾಲೆ ಕಡೆಗಣ್ಣಿನಲ್ಲಿ ಸಿಕ್ಕಿ, ಕಣ್ಣೀರು ಅೞಿ ಇರುವುದಱಿಂದ ಈಬಗೆಯಲ್ಲಿರುವ ನನ್ನ ಮೊಗವನಾದರೂ ನೋಡದೆ ಹೋದೆಯಲ್ಲಾ ಎಂದು ಕೋಪಗೊಂಡಂತೆ, ಒಂದಿಷ್ಟು ತುಟಿ ಬಿಚ್ಚಿರುವುದಱಿಂದ ಹೊಱಹೊಱಡುವ ಜೀವಾತ್ಮಕಾಂತಿಯಂತೆ ಪಸರಿಸುವ ದಂತಕಾಂತಿಗಳಿಂದ ಪ್ರಾಣಗಳೊಡನೆ ನೀನು ಹೋಗಬೇಡವೆಂದು ತನ್ನ ಎದೆಯೊಳಿರುವ ಎನ್ನನೊಡ ಬಡಿಸುವಂತೆ ಬೆಳ್ದಿಂಗಳಿಗೆ ಮಱೆಮಾಡಿದಂತೆ, ಎದೆಯ ಮೇಲಿರಿಸಿದ ಹಸ್ತದಿಂ ಪ್ರಾಣಗಳು ಹೋಗುವ ದಾರಿಯ ನೋಡುವಂತೆ, ಕೊರಲನು ಮೇಲಕ್ಕೆ ಎತ್ತಿ ಕೊಂಡು ಇದ್ದನು. ನನ್ನ ಬರವನು ನೋಡಿ ಅೞುತ್ತಿರುವ ಕಪಿಂಜಲನಿಂ ಕಾರ್ಯ ಕೈಮೀಱಿತು ಎಂದು ನಿಶ್ಚಯಿಸಿ ಪಾಪಿಷ್ಠೆಯಾಗಿ ಭಾಗ್ಯಹೀನೆಯಾಗಿರುವ ನಾನು ಮೂರ್ಛೆಹೋಗಿ ಬಿದ್ದೆನು.

ಆಗ ನಾನು ಎಂತಿರ್ದೆನೋ, ಆವ ಬಗೆಯಲ್ಲಿ ಪ್ರಳಾಪವ ಮಾಡಿದೆನೋ, ಅದೊಂದನು ಅಱಿಯೆನು. ಆಸಮಯದಲ್ಲಿ ನನ್ನ ಪ್ರಾಣಗಳು ಏನು ನಿಮಿತ್ತ ವಾಗಿ ಉೞಿದುವೋ ತಿಳಿಯದು. ನನ್ನೆರ್ದೆ ಕಲ್ಲಾದುದಱಿಂದಲೋ ನನ್ನ ಮೈ ಸಕಲದುಃಖಗಳನೂ ತಾಳಬಲ್ಲುದು ಎಂಬುದಱಿಂದಲೋ ನನ್ನ ಹಣೆಯಲ್ಲಿ ಈ ಪ್ರಾಪ್ತಿ ಬರೆದಿದ್ದುದಱಿಂದಲೋ ದೈವಕ್ಕೆ ಮನುಷ್ಯರ ದುಃಖಪಡಿಸುವ ತ್ರಾಣ ಉಂಟೆಂಬುದ ತಿಳುಹಬೇಕೆಂಬುದಱಿಂದಲೋ ಅಱಿಯೆನು. ಮೆಲ್ಲಗೆ ಮೂರ್ಛೆ ದಿಳಿದು ಬಹುದುಃಖದಿಂದ ಕಿಚ್ಚಿಗೆ ಹೊಕ್ಕಂತೆ ತಾಳಬಾರದ ಉರಿತದಿಂ ನೆಲದಲ್ಲಿ ಬಿದ್ದು ಹೊರಳುತ, ಅವನು ದೈವಾಧೀನವಾಗಿ ನಾನು ಬದುಕುತಲಿರುವುದನು ತಿಳಿದು ನೋಡುತ ಆಶ್ಚರ್ಯಪಡುತ ಎದ್ದು ನಿಂತು ಆರ್ತನಾದವ ಮಾಡುತ— ಹಾ ನಾಥ! ನೀನೇ ಗತಿಯೆಂದಿರುವ ನನ್ನನು ಒಬ್ಬಳನ್ನೇ ಬಿಟ್ಟುಹೋಗುವರೆ! ನಿನ್ನ ನಿಮಿತ್ತವಾಗಿ ಪಟ್ಟ ಪಾಡುಗಳನು ತರಳಿಕೆಯನು ಕೇಳು. ಒಂದು ಹಗ ಲನು ಒಂದು ಯುಗವಾಗಿ ಕಳೆದೆನು. ನನ್ನಲ್ಲಿ ದಯವ ಮಾಡು. ಒಂದು ವೇಳೆಯಾದರೂ ಮಾತನಾಡು, ನಿನ್ನ ಭಕ್ತವಾತ್ಸಲ್ಯವನು ತೋಱು. ಒಂದಿ ಷ್ಟಾದರೂ ನೋಡು; ನನ್ನ ಮನೋರಥವನು ಸಲಿಸು; ನಾನು ಬಲುನೊಂದವಳು; ಬಲಿದವಳು; ಬೇಱೆ ಗತಿಯಿಲ್ಲದವಳು; ಮನ್ಮಥನ ಬಾಧೆಗೆ ಒಳಗಾಗಿ ಇದ್ದೇನೆ. ಏನು ಕಾರಣ ದಯವ ಮಾಡದೆ ಇದ್ದೀಯೆ? ತಿಳಿಯಹೇೞು. ನಾನು ಆವ

ತಪ್ಪ ಮಾಡಿದೆನು ? ಆವ ರೀತಿಗೆ ನಡೆದುಕೊಳ್ಳದೆ ಹೋದೆನು ? ಆವ ಆಜ್ಞೆಯ ಮೀರಿದೆನು ? ಆವುದರಿಂದ ಕೋಪಿಸಿಕೊಂಡು ಇದ್ದೀಯೆ ? ನೆವವಿಲ್ಲದೆ ನಂಬಿದ ಊಳಿಗದವರನು ಬಿಟ್ಟು ಲೋಕಾಪವಾದಕ್ಕೆ ಹೇಗೆ ಅಳುಕದೆ ಇದ್ದೀಯೆ ? ನಾನು ಮಹಾಪಾಪಿಷ್ಠೆ. ಹುಸಿಗೆ ಪ್ರೀತಿಯುಂಟೆಂದು ಎಲ್ಲರನು ವಂಚಿಸುತ ಜೀವನವನು ಹೊರೆದುಕೊಂಡು ಇದ್ದೇನೆ. ಅಕಟಕಟ! ನಿನ್ನನು ಎಣಿಸದೆ, ನೀತಿಯನು ಯೋಚಿಸದೆ, ಪರಲೋಕವನು ಲೆಕ್ಕಿಸದೆ, ಈ ರೀತಿಗೆ ಉಳಿದಿರು ವೆನು. ನಾನು ಮಹಾಪಾತಕಗಿತ್ತಿ; ನನ್ನ ನಿಮಿತ್ತವಾಗಿ ನಿನ್ನಂಥವನಿಗೆ ಈತೆರನಾಯಿತು; ನನಗಿಂತಲೂ ಕ್ರೂರದೇಹಿಯರಾರು ? ಇಂಥ ನನಗೆ ಮನೆ ಯಿಂದ ಪ್ರಯೋಜನವೇನು ? ತಂದೆತಾಯಿಗಳಿಂದಲೂ ಊಳಿಗದವರಿಂದಲೂ ಬಂಧುಗಳಿಂದಲೂ ಪ್ರಯೋಜನವೇನು ? ಹಾ ದೈವವೇ! ನನ್ನ ಕಾಂತನ ಪ್ರಾಣ ದಾನವ ಮಾಡೆಯ ? ವಿಧಿಯೆ! ದಯೆನೋಡೆಯ ? ವನದೇವತೆಗಳಿರ! ಇವನ ಪ್ರಾಣಗಳನುಳುಹಿ ಅನಾಥೆಯಾಗಿರುವ ಹೆಣ್ಣುಬಾಲೆಯನು ರಕ್ಷಿಸಿರೆ ? ತಾಯೆ ಭೂದೇವಿ! ಸಕಲರನು ಕಾಪಾಡುವವಳು ನನ್ನನು ಕಾಪಾಡಬಾರದೆ ? ಕೈಲಾಸ ಪರ್ವತವೆ! ನಿನ್ನ ಮರೆಯ ಹೊಕ್ಕೆನು; ದಯಾಳುತ್ವವನು ತೋರು-ಎಂದು ಇವು ಮೊದಲಾಗಿ ಹಲವು ಬಗೆಯಲ್ಲಿ ಹಂಬಲಿಸುತ ಹಲುಬಿದೆನು. ಅವನು ಎಷ್ಟೆಂದು ನೆನೆದುಕೊಂಡಿದ್ದೆನು! ಗಾಳಿ ಸೋಂಕಿದವಳಂತೆ, ಆವೇಶ ಹತ್ತಿದವ ಳಂತೆ, ಮರುಳುಗೊಂಡವಳಂತೆ, ಗಳಪಿಕೊಳುತ್ತ ಮತ್ತೆಮತ್ತೆ ಧಾರೆಯಾಗಿ ಸುರಿವ ಕಂಬನಿಗಳ ನೆವದಿಂದ ನೀರಾಗಿ ಕರಗುವಳಂತೆ, ಕೆದರಿದ ಮಂಡೆಯಿಂ ಕೆಲಸಿಡಿದ ಭೂಷಣದಿಂ ಕಡುದೈನ್ಯವಡೆದು ಅವನ ಜೀವವನಾದರೂ ಎನ್ನ ಸಾವ ನಾದರೂ ಬಯಸಿ ದೈವಕ್ಕೆ ಮೊರೆಯಿಡುವಳಂತೆ ಅವನು ನಿರ್ಜೀವನಾಗಿದ್ದರೂ ಅವನ ಹೃದಯವ ಒಳಹೊಗಲಿಚ್ಛೈಸಿ ಹಣೆ ಗಲ್ಲ ಭುಜ ಎದೆಗಳ ತಡವಿ ನೋಡುತ್ತ- ಎಲೆ ಪುಂಡರೀಕ, ಈ ಬಗೆಯಲ್ಲಿ ದುಃಖಿಪ ನನ್ನನು ಸಷ್ಟೆಮಾಡದಿರುವುದು ಚಿತವೆ?-ಎಂದು ಜರೆದು ನುಡಿಯುತ್ತ ಕೂಡೆ ಒಡಂಬಡಿಸುತ್ತ ಕಂಠಾಲಿಂಗನಂ ಗೈಯುತ ಕಂಠಮಾಲೆಯನು ನೋಡಿ,- ಪಾಪಿ ಕಂಠಮಾಲೆ, ನಾನು ಬರುವ ಪರಿಯಂತವಾದರೂ ಇವನ ಪ್ರಾಣವನುಳುಹಿಕೊಂಡಿರದೆ ಹೋದೆಯಲ್ಲ ?-ಎಂದು ನುಡಿಯುತ 'ಆವ ರೀತಿಯಲ್ಲಾದರೂ ಇವನ ಬದುಕಿಸಿಕೊ' ಎಂದು ಕಪಿಂಜಲನ ಪಾದದ ಮೇಲೆ ಬೀಳುತ್ತ ಮತ್ತೆ ಮತ್ತೆ ತರಳಿಕೆಯ ಕೊರಲ ಕಟ್ಟಿಕೊಂಡು ಅಳುತ್ತಲಿದೆ ನು.

ಆಗ ನನಗೆ ಒಬ್ಬರೂ ಕಲಿಸದೆ ನೆನೆಯಿಸದೆ ಯೋಚಿಸದೆ ಆಬಗೆಯ ಮಾತುಗಳು ಎಲ್ಲಿಂದ ಬಂದುವೋ ಅಱಿಯೆನು. ಈಗಲೂ ನೆನೆದೊಡೆ ಆಶ್ಚರ್ಯವಾಗುತಲಿದೆ. ಆದುಃಖವೆಲ್ಲಿ? ಆಬಗೆಯ ಮಾತುಗಳೆಲ್ಲಿ? ಅದು ಬೇಱೆ ಒಂದು ತೆಱನಾಗಿರುವುದು. ತೆರೆಗಳ ಹಾಗೆ ಮತ್ತೆ ಮತ್ತೆ ಮಾತುಗಳು ಒದಗುವುವು. ಎದೆಯೊಳಗೆ ಏತವೆತ್ತಿದಂತೆ ಕಂಬನಿಗಳು ಕೂಡಿ ಹಾಯುತ್ತಲಿರುವುವು. ಬಹು ಪ್ರಲಾಪ ದುಃಖ ಮೂರ್ಛೆಯುಂಟಾಗಿರುವುವು-ಎಂದು ಇವು ಮೊದಲಾದ ತನ್ನ ವೃತ್ತಾಂತವನು ಹೇಳುತ್ತ ಪೂರ್ವದ ದುಃಖಗಳೆಲ್ಲವನು ನೂತನವಾಗಿ ಅನುಭವಿಸುತ್ತ ಮಹಾಶ್ವೇತೆಯು ಮೂರ್ಛಿತೆಯಾಗಿ ಕಲ್ಲಱೆಯ ಮೇಲೆ ಬೀಳುತ್ತಿರಲಾಗಿ; ಆ ಚಂದ್ರಾಪೀಡನು ಶೀಘ್ರದಲ್ಲಿ ನೆಲಕ್ಕೆ ಬೀೞಲೀಸದೆ ಕೈಗಳಿಂದ ಆತುಕೊಂಡು ದುಃಖಿತನಾಗಿ ಕಣ್ಣೀರುಗಳಿಂದ ನನೆದ ನಾಱ ಸೀರೆಯ ಸೆಱಗಿನಿಂದ ಮೆಲ್ಲಮೆಲ್ಲನೆ ಬೀಸುತ್ತ ಮೂರ್ಛೆಯನು ತಿಳುಹಿ ಮೆಲ್ಲಗೆ ಒಂದು ಮಾತ ನುಡಿದನು:—ತಾಯೆ, ನಾನು ಪಾಪಿ, ಹಱೆಯದಾಗಿ ಅಡಗಿದ್ದ ನಿನ್ನ ಶೋಕವನು ನೂತನವಾಗಿ ಹೆಚ್ಚಿಸಿದೆನು. ಇನ್ನು ಈ ಕಥೆ ಸಾಕು. ಈಮೇಲೆ ಕೇಳಲಾಱೆನು. ಹಿಂದಕ್ಕೆ ಹೋದ ಸುದ್ದಿಗಳಾದರೂ ಈಗ ನಡೆವ ಹಾಗೆ ದುಃಖಗಳನುಂಟುಮಾಡುತ್ತಲಿವೆ. ಆದುದಱಿಂದ ಬಹು ಪ್ರಯಾಸದಲ್ಲಿ ಇಷ್ಟು ದಿನ ನಿಲಿಸಿಕೊಂಡಿರ್ದ ಪ್ರಾಣಗಳನು ಶೋಕಾಗ್ನಿಯಿಂದ ದಹಿಸಬೇಕೆ?- ಎಂದು ಹೇಳಲಾಗಿ; ಬಿಸಿಯಾಗಿ ಸುಯ್ದು ಕಣ್ಣೀರಂ ತುಳುಕಿಸುತ ದುಃಖದಿಂದ ನುಡಿದಳು. ಆ ಸಮಯದಲ್ಲಿ ಹೋಗದೆ ಉೞಿದ ಪ್ರಾಣಗಳು ಈಗ ಹೋದಾವೆ? ಪುಣ್ಯಹೀನೆಯಾಗಿ ಪಾಪಿಯಾಗಿರುವ ನನ್ನ ಮುಖವಂ ನೋಡುವುದಕ್ಕೆ ಯಮಧರ್ಮನು ಹೇಸುವನು. ಕಲ್ಲೆದೆಯಾದ ಕಾರಣ ಎನಗೆ ಶೋಕವೆಂದರೇನು? ಇವೆಲ್ಲವು ಹುಸಿ. ನಾನಾಬಗೆಯಲ್ಲಿಯು ಎನ್ನಂತೆ ನಾಚಿಕೆಗೆಟ್ಟವರು ಆರೂ ಇಲ್ಲ. ಆಬಗೆಯ ಕಷ್ಟಗಳೆಲ್ಲವನು ಅನುಭವಿಸಿ ಕಳೆದುೞಿದವಳಿಗೆ ಈ ಕಥೆಯ ಹೇೞಿದುದಱಿಂದ ಬರುವ ಉಪದ್ರವವೇನು? ಇನ್ನು ಬೇಱೆ ಹೇೞುವುದಕ್ಕೂ, ಆ ಕಥೆಯ ಕೇಳುವದಕ್ಕೂ ಆಗದೆ ಇರುವ ಕಾರ್ಯವೇನಿದ್ದೀತು? ಆಮೇಲೆ ನಡೆದ ಆಶ್ಚರ್ಯವಾದ ವೃತ್ತಾಂತವನ್ನು ಕೇಳು. ಆ ಬಱಸಿಡಿಲು ಹೊಯ್ದ ಮೇಲೂ ಪ್ರಾಣವ ಹಿಡಿವುದಕ್ಕೆ ನೆವವೊಂದನು ಹೇೞೆನು ಕೇಳು. ನಾನು ಆದುರಾಶೆಗೆ ಒಳಗಾಗಿ ಅಚೇತನವಾಗಿ ಪರಶರೀರದಂತೆ ಭಾರವಾಗಿ ಅಪ್ರಯೋಜಕವಾದ ಈ ಶರೀರವನು ಹೊತ್ತು ಇದ್ದೇನೆ. ಆಮೇಲೆ ಅವನು ಹಾಗಾಗಿ ಹೋದುದು ನಿಶ್ಚಯವಾಗೆ ನಾನು

ಬಹು ಪ್ರಲಾಪವ ಮಾಡಿದಮೇಲೆ ತರಳಿಕೆಯೊಡನೆ ನುಡಿದೆನು:— ಎಲೆ ತರಳಿಕೆ ಈಗ ಏಟು, ಕಲ್ಲೆದೆಯಿಂದ ಎಷ್ಟು ಹೊತ್ತಾದರೂ ಅಳುತಿದ್ದು ಫಲವೇನು ? ಸೌದೆಗಳನು ಕೂಡಿಹಾಕಿ ಚಿತೆಯನುಂಟುಮಾಡು. ಶೀಘ್ರದಲ್ಲಿ ನನ್ನ ಜೀವಿತೇಶ್ವರನ ಬಳಿವಿಡಿದು ಹೋದೇನು-ಎಂದು ನುಡಿಯುತಿರುವಷ್ಟರೊಳಗೆ ಒಬ್ಬಾನೊಬ್ಬ ದಿವ್ಯಪುರುಷನು ಶುಭ್ರವರ್ಣವಾಗಿ, ಮುತ್ತಿನ ಕಿರೀಟ, ಮುತ್ತಿನ ಕುಂಡಲ, ಮುತ್ತಿನ ಕಂಠಮಾಲೆ, ಮುತ್ತಿನ ಕಡಗ, ಬಿಳಿಯ ಹೊದಕೆಗಳ ಧರಿಸಿಕೊಂಡು ಚಂದ್ರಮಂಡಲದಿಂದ ಹೊರಟು ಆಕಾಶಮಾರ್ಗದಿಂದ ಇಳಿದುಬಂದು ಐರಾವತದ ಸೊಂಡಿಲ ಮರ್ಯಾದೆಯಲ್ಲಿ ಬಿಳಿದಾದ ತೋಳುಗಳ ನೀಡಿ, ಅಲ್ಲಿ ಬಿದ್ದಿರುವ ಪುಂಡರೀಕನ ಶರೀರವನೆತ್ತಿಕೊಂಡು ಗಂಭೀರಸ್ವರದಿಂದ-ಮಗಳೆ, ಮಹಾಶ್ವೇತೆ, ನೀನು ಪ್ರಾಣವ ತೊರೆದುಕೊಂಡೇನು ಎಂದೆನ್ನಬೇಡ, ಮುಂದೆ ನಿನಗೂ ಇವನಿಗೂ ಸಮಾಗಮ ಉಂಟಾದೀತು- ಎಂದು ಹೆತ್ತ ತಂದೆಯು ಮಗಳಿಗೆ ಬುದ್ಧಿಯ ಹೇಳುವ ಮರ್ಯಾದೆಯಲ್ಲಿ ಹೇಳಿ ಆಕಾಶಮಾರ್ಗದಲ್ಲಿ ತೆರಳಲು; ನಾನು, ಇದೇನೆಂದು ಬೆಸಗೊಳಲು; ನನಗೆ ಪ್ರತ್ಯುತ್ತರವ ಕೊಡದೆ ಕಪಿಂಜಲನು ಆಕಾಶಮಾರ್ಗವನೆ ನೋಡುತ್ತ-ನಿಲ್ಲುನಿಲ್ಲು ಪಾಪಿಷ್ಠ. ನನ್ನ ಸ್ನೇಹಿತನನು ಆವೆಡೆಗೆ ಕೊಂಡುಹೋಗುತಲಿದ್ದೀಯೆ ?—ಎನುತ ಕಡುಕೋಪದಿಂದ ಅವನೊಡನೆ ಹೋದನು.

ನಾನು ನೋಡುತ್ತಿರುವಲ್ಲಿ ಅವರೆಲ್ಲರೂ ನಕ್ಷತ್ರಮಂಡಲವ ಹೊಕ್ಕು ಅಂತರ್ಧಾನವಾಗಲಾಗಿ; ಅಚೇತನವಾಗಿ ಉಳಿದಿದ್ದ ಪುಂಡರೀಕನ ಶರೀರವೂ ಅವನಿಗೆ ಅಪರಶರೀರವಾದ ಕಪಿಂಜಲನೂ ಹೋದುದರಿಂದ ನನಗೆ ದುಃಖವಿಮ್ಮಡಿಸಿ ಮುಂಗಾಣದೆ-ಎಲೆ ತರಳಿಕೆ, ಇದೇನು ? ಎಂದು ಕೇಳಲಾಗಿ; ಅವಳು ಸ್ತ್ರೀಜಾತಿಯಾದಕಾರಣ ಆ ಕೌತುಕವನು ಕಂಡು ಭಯ ಹುಟ್ಟಿ, ಅವನ್ನಿದೆ ನಾನು ಬದುಕುವೆನು ಎಂಬುದರಿಂದ, ನಡುಗುತ್ತ ಇಂತೆಂದಳು.- ತಾಯೆ, ಇನ್ನು ನಾನು ಏನೆಂದು ಹೇಳಿಯೇನು ? ಆದರೂ ಆದಿವ್ಯಪುರುಷನು ಬಂದು ಅಭಯಪ್ರದಾನವ ಮಾಡಿದುದು ಆಶ್ಚರ್ಯವಾಗಿದೆ. ಇಂಥವರು ಕನಸಿನಲ್ಲಿ ಬಂದು ಹೇಳಿದರೂ ಹುಸಿಯಾಗದು. ಸಾಕ್ಷಾತ್ತಾಗಿ ಬಂದು ಹೇಳಿದರೆ ಕೇಳುವುದೇನು ? ಕಪಿಂಜಲನು ಇವನ ಸಂಗಡ ಹೋಗಿ ಇದ್ದಾನೆ. ಅವನ ಮುಖದಿಂದ ಆದಿವ್ಯಪುರುಷನಾರು ? ಏನುಕಾರಣ ಈ ಪುಂಡರೀಕನ ಶರೀರವ ನೆತ್ತಿಕೊಂಡು ಹೋದನು ? ಎಲ್ಲಿಗೆ ಕೊಂಡುಹೋದನು ? ನಮಗೆ ಧೈರ್ಯವ

ಹೇಳು ಹೋದ ನಿಮಿತ್ತವೇನು ? ಎಂಬುದನು ತಿಳಿದು ಆಮೇಲೆ ಬದುಕಲಾದರೂ ಬಹುದು. ಬೇಕೆಂದು ಹೋಗಿದ್ದರೆ ಸಾವು ಆವಾಗಳಿಗೂ ದುರ್ಲಭವಲ್ಲ; ಆಕಪಿಂಜಲನು ಬದುಕಿದ್ದರೆ ನನ್ನ ಬಳಿಗೆ ಬಾರದೆ ಇರನು. ಆ ಪರ್ಯಂತವು ಹೇಗಾದರೂ ಪ್ರಾಣವ ಧರಿಸಿರಬೇಕು-ಎಂದು ನನ್ನ ಕಾಲ ಮೇಲೆ ಬಿದ್ದು ಬೇಡಿ ಕೊಳಲಾಗಿ, ಅವಳ ಮಾತ ಮೀರಲರಿಯದೆ ಇರುವುದರಿಂದಲೂ ಎಲ್ಲರಿಗೂ ಪ್ರಾಣದಾಸೆ ದೊಡ್ಡಿತಾಗಿರುವುದರಿಂದಲೂ ಆಕಪಿಂಜಲನು ತಿರುಗಿ ಬರುವ ಪರ್ಯಂತವು ಬದುಕಿರುವುದು ಕಾರ್ಯವೆಂದು ನಿಶ್ಚೈಸಿ, ಆಕೊಳದ ತಡಿಯಲ್ಲಿಯೆ ಬೀಳುತ್ತ ಏಳುತ್ತ ನೆಲದಲ್ಲಿ ಹೊರಳುತ್ತ ಕೆಂಡದ ಮೇಲೆ ಇರುವ ಹಾಗೆ ಒಂದು ಇರುಳನು ಒಂದು ಸಾವಿರ ಯುಗವಾಗಿ ಕಳೆದು, ಉದಯವಾದಮೇಲೆ ಆಕೊಳ ದಲ್ಲಿ ಮುಳುಗಿ ಅವನ ಒಡವೆಯೆಂಬ ಪ್ರೀತಿಯಿಂದ ಅಲ್ಲಿರಿಸಿರುವ ಅವನ ಕಮಂಡಲು ಜಪಮಾಲೆ ನಾರಸೀರೆಗಳನು ತೆಗೆದುಕೊಂಡು, ಇನ್ನು ಸಂಸಾರದಿಂದ ಪ್ರಯೋಜನವಿಲ್ಲವೆಂದು ನಿಶ್ಚೈಸಿ, ಮನಸ್ಸನು ಗಟ್ಟಿಮಾಡಿಕೊಂಡು, ಸಕಲವಾದ ಭೋಗಭಾಗ್ಯ, ಊಳಿಗದವರು, ಸ್ನೇಹಿತರು, ತಂದೆತಾಯಿಗಳು ಮುಂತಾದ ಸಕಲಬಂಧುಗಳನು ತೊರೆದು, ಬ್ರಹ್ಮಚರ್ಯವ್ರತದಲಿ ಈ ರೀತಿಯಾದೆನು.

ಆಮೇಲೆ ಮರುದಿವಸ ನನ್ನ ತಂದೆತಾಯಿಗಳು ಈ ವೃತ್ತಾಂತವನು ಕೇಳಿ ಅತಿಚಿತ ಈಬಳಿಗೆ ಬಂದು, ಬಂಧುಗಳು ಸಹವಾಗಿ ನಾನಾಬಗೆಯಲ್ಲಿ ಬೋಧಿಸಿ ತಿಳಿಯಹೇಳಿ, ಎಷ್ಟೆಷ್ಟು ಬಗೆಯಲ್ಲಿ ಯತ್ನಮಾಡಿದರೂ ನಾನು ಮನೆಗೆ ಬರುವುದಕ್ಕೆ ಸಮ್ಮತಿಸದೆ ಇರಲಾಗಿ, ಮತ್ತು ನನ್ನ ಬಿಟ್ಟು ಹೋಗ ಲಾರದೆ ಇಲ್ಲಿಯೆ ಕೆಲವು ದಿವಸವಿದ್ದು ನೋಡಿ ನಿರಾಶೆಮಾಡಿಕೊಂಡು ದುಃಖ ಪಡುತ್ತ ಮನೆಗೆ ಹೋದರು.

ಅಂದುಮೊದಲಾಗಿ ನಾನು ಕೊಳದಲ್ಲಿ ಮೂರು ಹೊತ್ತು ಸ್ನಾನವ ಮಾಡುತ ಜಪವೆಂಬ ವ್ಯಾಜದಿಂದ ಅವನ ಗುಣಗಳನೆ ಧ್ಯಾನವ ಮಾಡುತ್ತ ಅವನು ನನ್ನ ನಿಮಿತ್ತವಾಗಿ ಪ್ರಾಣವ ಬಿಟ್ಟುದಕ್ಕೆ ನಾನು ಈ ಬಗೆಯ ಕಣ್ಣೀರ ಬಿಡುತಲಿದ್ದೇನೆ. ನಾನು ಈ ಬಗೆಯ ಪಾಪಿ; ಕ್ರೂರಹೃದಯೆ; ಲಜ್ಜೆಯಿಲ್ಲದ ವಳು; ಬ್ರಹ್ಮಹತ್ಯವನು ಮಾಡಿದಂಥ ಮಹಾಪಾತಕಿ; ನನ್ನನು ನಿನ್ನಂಥ ಪುಣ್ಯ ಪುರುಷರು ನೋಡಬಾರದು ಎಂದು ನಾರುಸೀರೆಯ ಸೆರಗಿನಿಂದ ಮುಖವ ಮರಿಸಿ ಕೊಂಡು ಸ್ವರವೆತ್ತಿ ಮೀರಿ ಅಳಲಾಗಿ; ಚಂದ್ರಾಪೀಡನು ಮೊದಲೆ ಅವಳ ಆಕಾರ ವಿನಯ ವಿವೇಕ ದಾಕ್ಷಿಣ್ಯ ಮೃದುಭಾಷೆ ಮಹಾತಪಸ್ಸುಗಳಿಂದ ಘನ

ವಾದವಳು ಎಂದು ತಿಳಿದಿದ್ದನು. ಈಗ ಅವಳು ತನ್ನ ವೃತ್ತಾಂತವನು ಹೇಳಿ ದುದಱಿಂದಲೂ, ಅವಳಿಗೆ ಪುಂಡರೀಕನಲ್ಲಿ ಉಂಟಾದ ವಿಶ್ವಾಸದಿಂದಲೂ, ಬಹು ಭಕ್ತಿಯುಕ್ತನಾಗಿ ಮನಸ್ಸು ಕರಗಿ ವಿನಯಗೂಡಿ ನುಡಿದನು:—ತಾಯೆ, ಲೋಕದವರು ತಾವು ದುಃಖವನನುಭವಿಸದೆ ಹೋದಲ್ಲಿ, ಉಂಟಾದ ಸ್ನೇಹಕ್ಕೆ ತಕ್ಕ ನಡತೆಯನ್ನು ನಡೆಸುವ ಬಗೆದೆ ಕಣ್ಣೀರ ಬಿಟ್ಟು ಅೞುವರು. ನೀನು ನಡತೆಯಲ್ಲದ ನಡತೆಯಲ್ಲಿಯೆ ನಡೆಯುತಲಿದ್ದೆ; ಅೞುವುದೇತಕ್ಕೆ ? ನೀನು ಆ ಪುಂಡರೀಕನ ನಿಮಿತ್ತವಾಗಿ ಆವಾವ ದುಃಖವನನುಭವಿಸಲಿಲ್ಲ; ತಂದೆತಾಯಿ ಗಳು ಮೊದಲಾದ ಎಲ್ಲ ಬಂಧುಬಳಗಗಳನು ಬಿಟ್ಟು ದಿವ್ಯೈಶ್ವರ್ಯ ಮೊದಲಾದುದ ತೊಱೆದು ಶರೀರಸುಖವನುೞಿದು ಕಾಡಿನಲ್ಲಿ ಮೃಗದೊಂದಿಗೆ ಮೃಗವಾಗಿ ಒಬ್ಬಳೆ ಇದ್ದೆ; ಸಾವುದು ಮಹಾ ಸುಲಭ; ದುಃಖವೆ ಇಲ್ಲ; ಆದರೂ ಇದು ಅಱಿಯದವರು ನಡೆವ ನಡತೆ; ಅಜ್ಞಾನದ ದಾರಿ; ಸಾಹಸಕೃತ್ಯ, ಕಡುಮೂರ್ಖ ತನ. ಪತಿ ಹೋದನೆಂದು ತನ್ನಿಂದ ತಾನೇ ಹೋಗದ ಪ್ರಾಣಗಳನು ಬಲುಮೆ ಯಲ್ಲಿ ಹೋಗಲಾಡಿಸಿಕೊಂಬುದು, ತಾನು ದುಃಖವನನುಭವಿಸಲಱಿಯದೆ ತನಗೆ ಮಾಡಿಕೊಂಬ ಹಿತವಲ್ಲದೆ ಪತಿಗೆ ಹಿತವಾದ ಕಾರ್ಯವಲ್ಲ; ಇದಱಿಂದಲೇನು ? ಸತ್ತವನ ಬದುಕಿಸಿಕೊಂಬ ಉಪಾಯವೊ ? ಅವನಿಗೆ ಧರ್ಮವ ತಂದು ಕೊಡುವ ಬಗೆಯೊ ? ಪುಣ್ಯಲೋಕವ ಸಂಪಾದಿಸಿಕೊಡುವ ಕ್ರಮವೊ ? ನರಕಕ್ಕೆ ಬೀಳದ ಹಾಗೆ ನಡೆಸುವ ಯತ್ನವೊ ? ಅವನ ಕಾಣುವ ಉಪಾಯವೊ ? ಒಂದೂ ಅಲ್ಲ; ಅವನ ಪುಣ್ಯಪಾಪಗಳಿಂದ ಹಾಗೆ ತನ್ನ ಲೋಕಕ್ಕೆ ಹೋಗುತ್ತಲಿದ್ದಾನೆ. ಇವಳು ದುಃಖವನನುಭವಿಸಲಱಿಯದೆ ಆತ್ಮಹತ್ಯಮಾಡಿಕೊಂಬ ಪಾಪದಿಂದ ನರಕದಲ್ಲಿ ಬೀೞುತ್ತಲಿದ್ದಾಳೆ. ಬದುಕಿದ್ದರೆ ತೀರ್ಥಯಾತ್ರೆಗಳ ಮಾಡಿ ಪುಣ್ಯತೀರ್ಥಗಳಲ್ಲಿ ಸ್ನಾನ ದಾನಧರ್ಮಗಳಮಾಡುವುದಱಿಂದಲೂ ವ್ರತೋಪವಾಸತರ್ಪಣಗಳಿಂದಲೂ ತಾನು ಪುಣ್ಯವ ಸಂಪಾದಿಸಿಕೊಂಡು ಪತಿಗೂ ಗತಿಯ ಸಂಪಾದಿಸಿಕೊಡಬಹುದು; ಸತ್ತರೆ ಇಬ್ಬರಿಗೂ ಪ್ರಯೋಜನವಿಲ್ಲ. ಪೂರ್ವದಲ್ಲಿ ಪರಮೇಶ್ವರನ ಉರಿಗಣ್ಣಿನಿಂದ ಮನ್ಮಥನು ಹೋದರೂ ರತಿದೇವಿ ಹೋಗದೆ ಉೞಿದಿದ್ದಳು. ಮುನಿಶಾಪದಿಂದ ಪಾಂಡುರಾಯಹೋದರೂ ಕುಂತಿದೇವಿ ಉೞಿದಿದ್ದಳು. ಅಭಿಮನ್ಯು ಹೋದಲ್ಲಿಗೂ ಉತ್ತರೆ ಮೊದಲಾದ ಪತಿವ್ರತಾಸ್ತ್ರೀಯರುಗಳ ನಡತೆಗಳನು ಕೇಳಿ ಅಱಿಯೆಯ ? ಅವರಿಗೆ ತಮ್ಮ ಪತಿಗಳು ತಿರುಗಿ ಬಂದಾರು ಎಂಬ ಆಸೆಯಿಲ್ಲ. ನಿನ್ನ ಪತಿಯು ತಿರುಗಿ ಬರುವುದಕ್ಕೆ ದಿವ್ಯಪುರುಷ ಹೇೞಿದ ಮಾತನು ನೀನೆ ಹೇೞಿದೆಯಲ್ಲ.

ಅಂಥವರು ನುಡಿದ ಮಾತಿನಲ್ಲಿ ಹುಸಿ ಬಾರದು. ಪ್ರಾಣಹೋದಂಥವರು ತಿರುಗಿ ಆವ ರೀತಿಯಲ್ಲಿ ಬದುಕಿ ಬಂದಾರು ಎಂಬ ಆಲೋಚನೆಮಾಡಬೇಡ. ದೈವ ವನುಕೂಲವಾದರೆ ಆಗದ ಕಾರ್ಯವಾವುದು ? ಈ ಸಂಸಾರದಲ್ಲಿ ಇದು ಆದೀತು, ಇದು ಆಗದು ಎಂಬ ಮಿತಿಯಾವುದಿದೆ ? ಸರ್ವಪ್ರಕಾರದಲ್ಲಿ ವಿಚಾರಿಸಿ ನೋಡಿ ದರೆ ಪುಂಡರೀಕನಿಗೆ ಪ್ರಾಣವನುಂಟುಮಾಡಬೇಕಾಗಿಯೆ ದೇವಲೋಕಕ್ಕೆ ಕೊಂಡು ಹೋದರು ಎಂದು ಕಾಣಿಸುತ್ತಲಿದೆ; ಮತ್ತೆ ಬೇರೆ ಯೋಚನೆಯಿಲ್ಲ. ಪೂರ್ವ ಕಾಲದಲ್ಲಿಯು ಸತ್ತು ಬದುಕಿದವರುಂಟು. ವಿಶ್ವಾವಸುವೆಂಬ ಗಂಧರ್ವರಾಜನಿಗೆ ಹುಟ್ಟಿದಂಥ ಪ್ರಮದ್ವರೆಯೆಂಬ ಕನ್ನಿಕೆಯು ಸ್ಥೂಲಕೇಶಾಶ್ರಮದಲ್ಲಿ ಹಾವು ಕಡಿದು ಹೋಗಲಾಗಿ ಭಾರ್ಗವಚ್ಯವನರ ಮಋಮಗ ರುರು ಎಂಬ ಮುನಿ ಕುಮಾರನು ತನ್ನ ಆಯುಸ್ಸಿನಲ್ಲಿ ಅರ್ಧವ ಕೊಟ್ಟು ಬದುಕಿಸಿದನು. ಅರ್ಜುನನು ಅಶ್ವಮೇಧಯಾಗದ ಕುದುರೆಯ ಬೞಿವಿಡಿದು ಹೋಗಿ ಬಭ್ರುವಾಹನನ ಕೂಡೆ ಯುದ್ಧವ ಮಾಡಿ ಅಸ್ತ್ರದಿಂದ ಮೃತನಾಗಲಾಗಿ ಉಲೂಪಿಯೆಂಬ ನಾಗಕನ್ಯೆಯು ಬದುಕಿಸಿದಳು. ಅಭಿಮನ್ಯುವಿನ ಕುಮಾರನಾದ ಪರೀಕ್ಷಿತ್ತು ಉತ್ತರೆಯ ಗರ್ಭದಲ್ಲಿಯೆ ಅಶ್ವತ್ಥಾಮನ ಬಾಣಾಗ್ನಿಯಿಂದ ಬೆಂದು ನಿರ್ಜೀವನಾಗಿ ಜನಿಸಲಾಗಿ ಶ್ರೀಕೃಷ್ಣನು ಜೀವವನುಂಟುಮಾಡಿದನು. ಉಜ್ಜಯಿನೀಪಟ್ಟಣದಲ್ಲಿ ಸಾಂದೀಪ ನೆಂಬ ಬ್ರಾಹ್ಮಣನ ಮಕ್ಕಳು ಯಮಲೋಕಕ್ಕೆ ಹೋಗಲಾಗಿ ಈ ಶ್ರೀಕೃಷ್ಣನೇ ಅಲ್ಲಿಂದ ತಂದುಕೊಟ್ಟನು. ನಿನ್ನ ಪತಿಯು ಆರೀತಿಯಲ್ಲಿ ಬದುಕಬಹುದು. ಲೋಕದಲ್ಲಿ ದೃಷ್ಟಾಂತಗಳ ಕಂಡು ಇದೆ. ಹಾಗಲ್ಲದೆ ಇದ್ದರೂ ಮಾಡತಕ್ಕು ದೇನು ? ವಿಧಿ ಬಲು ದೊಡ್ಡಿತ್ತು. ದೈವಸಹಾಯವಿಲ್ಲದೆ ತನ್ನ ಸ್ವಾತಂತ್ರ್ಯದಿಂದ ಉಸಿರ ಬಿಡುವುದಕ್ಕೂ ಆಗದು. ಒಬ್ಬರಲ್ಲಿ ಸ್ನೇಹವ ಮಾಡಿದುದಱಿಂದ ದುಃಖವೆ ಅಧಿಕವಲ್ಲದೆ ಸುಖ ವಿಶೇಷವಿಲ್ಲ. ಶರೀರವಿದ್ದ ಪರಿಯಂತವು ಕೂಡಿ ಇದ್ದರೂ ಒಂದು ಜನ್ಮಪರಿಯಂತ ಮಾತ್ರವೇ ಕೂಟ, ಅನೇಕ ಜನ್ಮದಲ್ಲಿ ವಿರಹ; ಆದುದಱಿಂದ ನಿನ್ನನು ಏನು ಕಾರಣ ನಿಂದಿಸಿಕೊಳ್ಳುತಿದ್ದೀಯೆ ? ಏನು ದುಃಖ ಬಂದರೂ ಧೈರ್ಯದಿಂದಲೆ ಸಹಿಸಿಕೊಂಡು ತಾಳಿಕೊಳಬೇಕು-ಎಂದು ಇವು ಮೊದಲಾಗಿ ಹಲವು ಬಗೆಯ ಮೃದುನುಡಿಗೂಡಿದ ಒಡಂಬಡಿಕೆಯಿಂದ ಮಹಾ ಶ್ವೇತೆಯ ದುಃಖವನು ತಂಪಿಸಿ, ಕೆಲದಲ್ಲಿ ಹರಿವ ಒಜ್ಜರದ ನೀರನ್ನು ಬೊಗಸೆಯಲ್ಲಿ ತಂದು, ಅವಳು ಒಲ್ಲದೆ ಇದ್ದರೂ ಬಲುಮೆ ಮಾಡಿ ಮುಖವ ತೊಳೆದು ಕೊಂಬು ದಕ್ಕೆ ಕೊಟ್ಟನು.

ಆಮೇಲೆ ಸೂರ್ಯಾಸ್ತಮಯವಾಗಲಾಗಿ, ಮಹಾಶ್ವೇತೆಯು ಸಾಯಂಕಾಲದ ಸಂಧ್ಯಾವಂದನೆಯ ಮಾಡಿ, ಕಮಂಡಲುವಿನ ನೀರಿನಿಂದ ಕೈಕಾಲ ತೊಳೆದುಕೊಂಡು ಶುಚಿಯಾಗಿ ನಾರಿ ಸೀರೆಯ ಹಾಸಿಗೆಯ ಮೇಲೆ ನಿಟ್ಟುಸಿರ ಬಿಡುತ ಬಿದ್ದುಕೊಂಡಳು. ಚಂದ್ರಾಪೀಡನು ಎದ್ದು ಒಜ್ಜರದ ನೀರಿನಲ್ಲಿ ಸಂಧ್ಯಾವಂದನೆಯ ಮಾಡಿ ಜಪವನು ತೀರಿಸಿಕೊಂಡು ಮಹಾಶ್ವೇತೆ ಮಲಗಿರುವುದಕ್ಕೆ ಒಂದಿಷ್ಟು ದೂರದಲ್ಲಿ ಮತ್ತೊಂದು ಕಲ್ಲಚ್ಚಿಯ ಮೇಲೆ ಚಿಗುರುಹಾಸಿಗೆಯ ಮೇಲೆ ಕುಳಿತು, ಮತ್ತೆಮತ್ತೆ ಆಮಹಾಶ್ವೇತೆಯ ವೃತ್ತಾಂತವ ನೆನೆದುಕೊಳುತ್ತ ಮನಸ್ಸಿನಲ್ಲಿ ಎಣಿಸಿದನು:—ಮೂರು ಲೋಕದಲ್ಲಿಯು ಮನ್ಮಥಾಜ್ಞೆಯ ಮೀರಿದವರಿಲ್ಲ. ಅಂತು ಮುನಿಕುಮಾರನು ಮೊದಲಾಗಿ ದೇಶಕಾಲವರ್ತಮಾನಗಳ ವಿಚಾರಿಸಿ ಧೈರ್ಯವ ಹಿಡಿಯಲರಿಯದೆ ಪ್ರಾಣವ ಬಿಟ್ಟನು; ಇನ್ನು ಮಿಕ್ಕವರ ಪಾಡೇನು !- ಎಂದು ಯೋಚಿಸಿ ಮಹಾಶ್ವೇತೆಯನು ನುಡಿಸಿದನು,—ತಾಯೆ, ನಿನ್ನ ಸುಖದುಃಖಕ್ಕೆ ಒಳಗಾಗಿರುವಾಗಲು ಊಳಿಗವ ಮಾಡಿಕೊಂಡಿರುವ ತರಳಿಕೆಯು ಆವ ಬಳಿಗೆ ಹೋದಳು- ಎಂದು ಚಂದ್ರಾಪೀಡನು ಕೇಳಲಾಗಿ; ಮಹಾಶ್ವೇತೆ ನುಡಿದಳು:- ಅಯ್ಯ, ಅಪ್ಸರಸ್ತ್ರೀಯರುಗಳ ಕುಲವ ಹೇಳುವಾಗ ಅಮೃತದಿಂದ ಹುಟ್ಟಿದುದು ಒಂದು ಕುಲನೆಂದು ಹೇಳಿದೆನಲ್ಲ. ಆಕುಲದಲ್ಲಿ ಮಧುರೆಯೆಂಬವಳೊಬ್ಬಳು ಹುಟ್ಟಿದಳು. ಅವಳು ಸಕಲ ಗಂಧರ್ವರಿಗೂ ಅರಸಾಗಿರುವ ಚಿತ್ರರಥನಿಗೆ ಪಟ್ಟದರಾಣಿಯಾದಳು. ಆಮಧುರೆಗೂ ಚಿತ್ರರಥನಿಗೂ ಸರ್ವಗುಣಸಂಪನ್ನೆಯಾಗಿ ಕಾದಂಬರಿಯೆಂಬ ಕುಮಾರಿಯುಂಟಾದಳು. ಅವಳೂ ನಾನೂ ಚಿಕ್ಕಂದು ಮೊದಲಾಗಿ ಕುಳಿತಾಗ ಮಲಗಿರುವಾಗ ಊಟ ಮಾಡುವಾಗ ಒಬ್ಬರನೊಬ್ಬರಗಲದೆ ಏಕಹೃದಯರಾಗಿರುವೆವು. ಸಂಗೀತ, ನರ್ತನ, ವೀಣೆ, ಸಾಹಿತ್ಯ ಮೊದಲಾದ ವಿದ್ಯಾಭ್ಯಾಸಗಳನು ಕೂಡಲೆ ಮಾಡಿದೆವು. ಅದರಿಂದ ಆಕಾದಂಬರಿಯು ನಾನು ಹೀಗಾದುದ ಕೇಳಿ ದುಃಖದಿಂದ 'ಮಹಾಶ್ವೇತೆ ಮದುವೆಯಾಗದೆ ನಾನು ಮದುವೆಯಾಗುವುದಿಲ್ಲ. ನಾನು ಒಲ್ಲದೆ ಇದ್ದರೂ ಬಲುಮೆಯಿಂದ ತಂದೆತಾಯಿಗಳು ಮದುವೆಮಾಡಿದರೆ ಊಟವ ಬಿಟ್ಟಾದರೂ ವಿಷವ ತೆಗೆದುಕೊಂಡಾದರೂ ಪ್ರಾಣವ ತೊರೆದುಕೊಳ್ಳುತ್ತೇನೆ,' ಎಂದು ಶಪಥವ ಮಾಡಿಕೊಂಡಳು. ಆಬಗೆಯಲ್ಲಿ ಅವಳು ಮನಸ್ಸಿನಲ್ಲಿ ಮಾಡಿಕೊಂಡಿರುವ ನಿಶ್ಚಯವನು ಅವಳ ಸಂಗಾತಿಗಳ ಮುಖಾಂತರದಿಂದ ಚಿತ್ರರಥನು ಕೇಳಿ ಕಾದಂಬರಿಗೂ ಯೌವನಕಾಲವಾಗಲಾಗಿ ವಿವಾಹವ ಮಾಡಬೇಕಾದುದರಿಂದ ಒಲು

ಬಗೆಯಲ್ಲಿ ಒಡಂಬಡಿಸಿ ಅವಳು ಕೇಳದೆ ಇರಲಾಗಿ, ಒಬ್ಬಳೆ ಮಗಳಾದ ಕಾರಣ ಬಹು ಸ್ನೇಹದಿಂದ ಪ್ರಾಣವ ತೊರೆದುಕೊಂಬಳೋ ಎಂದು ಅಳುಕಿ ಬಲುಮೆಯು ಮಾಡಲಮ್ಮದೆ, ಮಧುರೆಯೂ ನಾನಾಬಗೆಯಲ್ಲಿ ಯೋಚಿಸಿ,—ಮಹಾಶ್ವೇತೆಯು ನಿಮಿತ್ತವಾಗಿ ವೈರಾಗ್ಯದಲ್ಲಿರುವಳು, ಆಮಹಾಶ್ವೇತೆ ಹೇಳಿಯದಲ್ಲದೆ ಒಡಂಬಡಳು ಎಂದು ನಿಶ್ಚೈಸಿ, ನನ್ನ ಬಳಿಗೆ ಹೇಳಿ ಕಳುಹಿಸಿದ ವಿವರ:-ತಾಯೆ, ಮಹಾಶ್ವೇತೆ, ನೀವು ವೈರಾಗ್ಯವ ಮಾಡಿಕೊಂಡುದರಿಂದಲೇ ನಾವು ದುಃಖ ಪಡುತಲಿದ್ದೆವು; ಈಗ ನಿಮ್ಮ ನಿಮಿತ್ತವಾಗಿ ಕಾದಂಬರಿಯೂ ಅದೇರೀತಿಯಲ್ಲಿದ್ದಾಳೆ; ಆವ ಬಗೆಯಲ್ಲಾದರೂ ಕಾದಂಬರಿಯಂ ಮದುವೆಯಾಗುವ ಹಾಗೆ ಹೇಳಿಕಳುಹಿಸುವುದು-ಎಂದು ಈ ದಿನ ಉದಯದಲ್ಲಿ ಹೇಳಲಾಗಿ; ದೊಡ್ಡವರು ಹೇಳಿಕಳುಹಿಸಿದ ಮಾತ ಮೀರಬಾರದು ಎಂಬುದರಿಂದಲೂ, ಕಾದಂಬರಿಯು ಮೇಲಣ ಸ್ನೇಹದಿಂದಲೂ, ಅಲ್ಲಿಂದ ಬಂದ ಕೇಯೂರನ ಸಂಗಡಲೆ ತರಳಿಕೆಯನು ಕೂಡಿಸಿ ನಾನು ಕಾದಂಬರಿಗೆ ಹೇಳಿ ಕಳುಹುವಲ್ಲಿಗೆ-ಕಾದಂಬರೀ, ನೀನು ಮೊದಲೆ ದುಃಖಪಟ್ಟು ಇರುವ ನನಗೆ ದುಃಖದಮೇಲೆ ದುಃಖವನೇತಕ್ಕೆ ಉಂಟು ಮಾಡುತಲಿದ್ದೀಯೆ ? ನಾನು ಬದುಕಬೇಕಾದರೆ ನೀನು ತಂದೆತಾಯಿಗಳ ಮಾತ ಕೇಳಿ ನಡೆದುಕೊ ಎಂದು ಹೇಳಿಕಳುಹಿದೆನು. ಅವಳು ತೆರಳಿ ಹೋದ ಒಂದಿಷ್ಟು ಹೊತ್ತಿಗೆ ನೀವು ಈ ಬಳಿಗೆ ಬಂದಿರಿ, ಎಂದು ಹೇಳಿ ಮೌನವಾದಳು.

ಆಮೇಲೆ ಮಹಾಶ್ವೇತೆಯು ನಿದ್ರೆಯ ಮಾಡಿಕೊಂಡುದನು ತಿಳಿದು ಚಂದ್ರಾಪೀಡನು ತನ್ನ ಹಾಸಿಗೆಯ ಮೇಲೆ ಒರಗಿಕೊಂಡು- ನನ್ನ ಕಾಣದೆ ವೈಶಂಪಾಯನನೇನೆಂದು ಎಣಿಸುವನೋ ? ಪತ್ರಲೇಖೆ ಆವ ಬಗೆಯಲ್ಲಿರುವಳೋ? ಅರಸುಮಕ್ಕಳು ಏನೆಂದು ಎಣಿಸಿಕೊಳುತ್ತಿರುವರೋ ? ಎಂದು ಯೋಚಿಸಿಕೊಳುತ್ತ ನಿದ್ರೆಗೈದನು. ಮರುದಿವಸ ಉದಯವಾದಮೇಲೆ ಮಹಾಶ್ವೇತೆಯೂ ಚಂದ್ರಾಪೀಡನೂ ಸ್ನಾನ ಸಂಧ್ಯಾವಂದನೆಗಳ ಮಾಡಿ ಜಪವ ಮಾಡುವ ಸಮಯದಲ್ಲಿ ತರಳಿಕೆಯು ಸರ್ವಾಭರಣಭೂಷಿತನಾದ ಹದಿನಾರು ವರುಷದ ಗಂಧರ್ವಕುಮಾರನೊಬ್ಬನ ಕರೆದುಕೊಂಡು ಆಬಳಿಗೆ ಬಂದು ಚಂದ್ರಾಪೀಡನ ಕಂಡು, ಇವನಾರು ಎಂದು ಯೋಚಿಸುತ್ತ, ಮಹಾಶ್ವೇತೆಗೆ ಕೈಮುಗಿದು ನೆಲದಲ್ಲಿ ಕುಳಿತುಕೊಂಡಳು. ಆಮೇಲೆ ಆಗಂಧರ್ವಕುಮಾರನು ದೂರದಲ್ಲಿಯೇ ಅಡ್ಡಬಿದ್ದು, ಮಹಾಶ್ವೇತೆಯು ಕಣ್ಣುಸನ್ನೆಯಿಂದ ತೋರುವ ಬಳಿಯಲ್ಲಿ

ಕುಳಿತುಕೊಂಡನು. ಜಪವ ಮಾಡಿ ಮುಗಿದಮೇಲೆ ಮಹಾಶ್ವೇತೆಯು ತರಳಿಕೆಯ ಮುಖವ ನೋಡಿ–ಕಾದಂಬರಿಯು ಕಂಡೆಯ ? ಹರುಷವಾಗಿದ್ದಾಳೆಯೆ ? ನಾನು ಹೇಳಿಕಳುಹಿಸಿದ ಮಾತ ನಡೆಸಿಯಾಳೆ ?– ಎಂದು ಕೇಳಲಾಗಿ; ಆತರಳಿಕೆ ಬಿನ್ನಹವ ಮಾಡಿದುದು:— ಇಲ್ಲಿಂದ ಹೋದಮೇಲೆ ಕಾದಂಬರಿಯ ಕಾಣಿಸಿಕೊಂಡೆನು. ಅವಳು ಹರ್ಷದಲ್ಲಿದಾಳೆ. ನೀವು ಹೇಳಿಕಳುಹಿಸಿದುದು ಎಲ್ಲವನು ಕೇಳಿ ಎಡೆಬಿಡದೆ ಕಂಬನಿಗಳ ಕಱೆದು ಅಬಳಿಕ ತಿರುಗಿ ಹೇಳಿಕಳುಹಿಸಿದ ಮಾತುಗಳನು ಅವಳ ವೀಣೆಯ ಮೇಳವ ಮಾಡುವ ಈ ಮಯೂರಕನು ಹೇಳುತ್ತಲಿದಾನೆ. ಕೇಳು– ಎಂದು ಸುಮ್ಮನಾಗಿರಲಾಗಿ; ಆಮಯೂರಕನು ವಿವರವಾಗಿ ಹೇಳಿದ ವಿವರ:— ಕಾದಂಬರೀದೇವಿಯು ನಿಮ್ಮನು ಕ್ಷೇಮಾಲಿಂಗನವ ಮಾಡಿಕೊಂಡೇವೆಂದು ಹೇಳಿಕಳುಹಿದುದು. ತರಳಿಕೆ ಬಂದು ಹೇಳಿದ ಮಾತನ್ನು ಕೇಳಿದೆನು. ನೀನು ಹಾಗೆ ಇದ್ದು ನನ್ನ ಮದುವೆಯಾಗ ಹೇಳಿದುದು ಇದೇನು! ನನ್ನ ತಂದೆತಾಯಿಗಳ ಪ್ರೀತಿಗಾಗಿಯು ನನ್ನ ಮನಸ್ಸನು ಪರೀಕ್ಷಿಸಬೇಕಾಗಿಯು ನಾನು ಮನೆಯಲ್ಲಿ ಇದ್ದ ತಪ್ಪಿಗೆ ಜಱಿದು ನುಡಿವ ಬಗೆಯೋ ? ನನ್ನ ಮೇಲೆ ಪ್ರೀತಿಯಿಲ್ಲದ ಬಗೆಯೊ ? ನನ್ನನ್ನು ತೊಱೆದುಬಿಡುವ ಬಗೆಯೊ ? ಇದೇನು ? ಚಿಕ್ಕಂದು ಮೊದಲಾಗಿಯು ನನ್ನ ಸ್ನೇಹವ ತಿಳಿದಿದ್ದು ಈ ರೀತಿಯಲ್ಲಿ ಹೇಳಿಬಿಡುವುದಕ್ಕೆ ನಾಚಿಕೆಯಿಲ್ಲದೆ ಹೋಯಿತೆ ? ಆಬಗೆಯ ಒಳ್ಳೆಯ ಮಾತನಾಡುವವಳು ಈನಿಷ್ಠುರದ ಮಾತುಗಳನಾರ ಕೈಯಿಂದ ಕಲಿತೆ ? ನೀಹೊಱತಾಗಿ ಇರುವ ಎನಗೆ ಸುಖದಾಸೆಯಿಂದೇನು ? ಸಂತೋಷವಾವುದು ? ಭೋಗಗಳೇನು ? ನಿನ್ನನು ಈಬಗೆಯ ಮಾಡಿದ ಮನ್ಮಥನ ಮನೋರಥವನು ಸಲಿಸುವುದು ಹೇಗೆ ? ಸೂರ್ಯಾಸ್ತಮಯವಾಗಲಾಗಿ ಸ್ನೇಹದಿಂದ ಚಕ್ರವಾಕಪಕ್ಷಿಗಳು ಸಂಭೋಗ ಸುಖವ ಬಿಟ್ಟುವವೆ; ಹೆಣ್ಣುಗಳ ಕೇಳುವುದೇನು ? ನೀನು ಪತಿವಿರಹದಿಂದ ಮಿಕ್ಕ ಪುರುಷರನು ನೋಡನೊಲ್ಲೆನೆಂದು ಈಬಗೆ ವನದಲ್ಲಿರುವಾಗ ನನ್ನ ಮನಸ್ಸಿಗೆ ಪರಪುರುಷನು ಆವ ರೀತಿಯಲ್ಲಿ ಬಂದುಹೊಕ್ಕಾನು ? ಅದು ಅಲ್ಲದೆ ಚಿಕ್ಕಂದಿನಲ್ಲಿಯೆ ತಂದೆ ತಾಯಿಗಳ ಮಾತ ಮೀಱಿದಳು ಎಂಬ ಅಪಕೀರ್ತಿಯನು ಕಟ್ಟಿಕೊಂಡು ಲೋಕಾಪವಾದಕ್ಕೂ ಅಳುಕದೆ ಲಜ್ಜೆಯನು ಬಿಟ್ಟು ಮದುವೆಯನು ಒಲ್ಲೆನೆಂದು ನಿಶ್ಚಯವ ಮಾಡಿಕೊಂಡೂ ಇದ್ದು ತಪ್ಪುವುದುಚಿತವೆ ? ನಿನಗೆ ಕೈಮುಗಿದೆನು, ಅಡ್ಡಬಿದ್ದೆನು, ಕಾಲ್ಪಿಡಿದು ಬೇಡಿಕೊಳುತಲಿದ್ದೇನೆ. ದಯೆಮಾಡು ಎನಗೆ. ಎನ್ನಾಣೆ, ಕನಸಿನಲ್ಲಿಯೂ ಆ ಕಾರ್ಯವ ಮನಸ್ಸಿಗೆ ತರಬೇಡ, ಎಂದು

ಹೇಳಿಕಳುಹಿದಳು- ಎನೆ; ಮಹಾಶ್ವೇತೆಯು ಮನದೊಳಗೆ ಬಹುಯೋಚಿಸಿ- ಒಳ್ಳೆಯದಾಯಿತು. ನೀನು ಮುಂಚಿತವಾಗಿ ಹೋಗು. ನಾನೆ ಬಂದು ಉಚಿತರೀತಿಗೆ ನಡೆಸುತಿದೇನೆ- ಎಂದು ಮಯೂರಕನ ಕಳುಹಿಸಿಬಿಟ್ಟು, ಚಂದ್ರಾಪೀಡನೊಂದಿಗೆ ನುಡಿದಳು:- ಅರಸುಮಗನೆ, ಕೇಳು. ಹೇಮಕೂಟಪರ್ವತವು ಅಂದವಾಗಿರುವುದು. ಅಲ್ಲಿ ಚಿತ್ರರಥಪರ್ವತವು ವಿಚಿತ್ರವಾಗಿರುವುದು. ಗಂಧರ್ವರ ಕಿಂಪುರುಷರ ಲೋಕಗಳು ರಮಣೀಯಗಳಾಗಿರುವುವು; ಕಾದಂಬರಿಯು ಮನಸ್ಸಿನವಳು; ನಿನಗೆ ಪಯಣಹೋಗುವುದಕ್ಕೆ ಬಲು ಆಯಾಸವಿಲ್ಲದೆ ಇದ್ದರೆ, ಕೆಟ್ಟುಹೋಗುವ ಕಾರ್ಯವಿಲ್ಲದೆ ಇದ್ದರೆ, ಅಪೂರ್ವವಸ್ತುಗಳ ನೋಡಬೇಕಾಗಿದ್ದರೆ ನನ್ನಲ್ಲಿ ಸ್ನೇಹವುಂಟಾದರೆ, ನನಗೆ ಪ್ರಿಯ ಮಾಡಬೇಕಾದರೆ, ನಾನು ಬೇಡಿಕೊಂಡುದನು ವ್ಯರ್ಥವಮಾಡದೆ ನನ್ನ ಸಂಗಡಲೆ ಹೇಮಕೂಟಕ್ಕೆ ಬಂದು ನನಗೆ ಅಪರಶರೀರವಾದ ಕಾದಂಬರಿಯ ದುರಾಲೋಚನೆಯ ಬಿಡಿಸಿ ಇಂದುದಿನವಿದ್ದು ನಾಳೆಗೆ ತಿರುಗಿ ಬರುವೆಯಂತೆ. ಅದೇನೋ ನನಗೆ ನಿನ್ನ ಕಂಡಾರಭ್ಯವಾಗಿ ಮನಸ್ಸಿನ ದುಃಖವೆಲ್ಲವು ಪರಿಹಾರವಾಗಿದೆ. ನನ್ನ ವೃತ್ತಾಂತವನು ನಿನ್ನೊಂದಿಗೆ ಹೇಳುದುದಱಿಂದ ಸಹಿಸಬಾರದ ದುಃಖವಾದರು ಸಹಿಸಬಹುದಾಗಿದೆ. ನಿನ್ನಂತಹ ಸತ್ಪುರುಷನ ಕಂಡಮಾತ್ರದಲ್ಲಿಯೆ ಸಕಲ ಶ್ರೇಯಸ್ಸು ಉಂಟಾಗುವುದು- ಎಂದು ಹೇಳಲಾಗಿ;- ತಾಯೆ, ನಿನ್ನ ಕಂಡಾರಭ್ಯವಾಗಿ ನಿನ್ನಧೀನವಾಗಿದೇನೆ. ಆವಕಾರ್ಯವ ಹೇಳಬೇಕೋ ಅದೆಲ್ಲವನು ಸಂದೇಹಪಡದೆ ಹೇಳು. ಅದೇ ರೀತಿಗೆ ನಡೆದುಕೊಳುತ್ತಾ ಇದೇನೆ-ಎಂದು ಹೇಳಿ ಮಹಾಶ್ವೇತೆಯ ಸಂಗಡಲೇ ಹೊಱಟನು. ಆಮೇಲೆ ಪಯಣಗತಿಯಲ್ಲಿಯೆ ಹೊಱಟು ಹೇಮಕೂಟಪರ್ವತಕ್ಕೆ ಹೋಗಿ ಗಂಧರ್ವರಾಜನ ಪಟ್ಟಣವನ್ನು ಸೇರಿ ಅರಮನೆಯ ಏಳು ಅಂತಸ್ತಿನ ಚಿನ್ನದ ಬಾಗಿಲನು ದಾಂಟಿ, ಅಂತಃಪುರದಲ್ಲಿ ಮಹಾಶ್ವೇತೆಯನು ಕಂಡು ವೇಗದಲ್ಲಿ ಇದಿರೆದ್ದು ಬಂದು ಕೈಮುಗಿದು ಎಚ್ಚರಿಕೆ! ಪರಾಕು! ಹೇಳುತ್ತಾ ಮುಂದೆ ನಡೆದು ಬಾಗಿಲ ಕಾವಲವರು ಕಟ್ಟಿಗೆಯ ಉಳಿಗದವರು ಸಹ ಒಳಹೊಕ್ಕು ಹೋಗಿ ಅಲ್ಲಿ ಗಣನೆಯಿಲ್ಲದೆ ಲಕ್ಷಾಂತರ ಹೆಣ್ಣುಗಳು ತುಂಬಿರುವುದಱಿಂದ ಪ್ರಸಿದ್ಧವಾದ ಹದಿನಾಲ್ಕು ಲೋಕಗಳಲ್ಲದೆ ಇದು ಬೇಱೆ ಒಂದು ಸ್ತ್ರೀಮಯವಾದ ಲೋಕವೋ! ಲೆಕ್ಕವನು ತೆಗೆದುಕೊಳ್ಳಬೇಕಾಗಿ ಮೂಱುಲೋಕದ ಹೆಣ್ಣುಗಳನ್ನು ಕೂಡಿಟ್ಟುಕೊಂಡಿರುವ ಬೞಿಯೊ! ಪುರುಷರು ಇಲ್ಲದಿರುದ ಬೇಱೊಂದು ಬ್ರಹ್ಮಸೃಷ್ಟಿಯೊ! ಹೆಣ್ಣುಗಳೆ ಇರುವ ನೂತನ ದ್ವೀಪಾಂತರವೊ! ಸ್ತ್ರೀಮಯ

ವಾದ ಯುಗಾಂತವೊ! ಅನೇಕ ಬ್ರಹ್ಮಕಲ್ಪಕ್ಕೆ ಆಗಬೇಕೆಂದು ಸೃಷ್ಟಿಸಿ ಇರಿಸಿ
ಕೊಂಡಿರುವ ಹೆಣ್ಣುಗಳ ಬೊಕ್ಕಸವೊ! ಎಂಬ ಹಾಗೆ ಕಾಣಪಡುತ್ತ ವೆಗ್ಗಳ
ವಾಗಿ ಪಸರಿಸುವ ಯುವತಿಯರ ಶರೀರಕಾಂತಿಪ್ರವಾಹದಿಂದ ದಿಕ್ಕುಗಳನು
ನೆನೆಯಿಕ್ಕುವಂತೆ, ಅಮೃತದ ಮೞೆಗಱೆವಂತೆ ಎಲ್ಲಿ ನೋಡಿದರೂ ಜವ್ವನದ
ಹೆಣ್ಣುಗಳೇ ತುಂಬಿ ಇರುವುದಱಿಂದ ಚಂದ್ರಮಂಡಲದ ಸಹಸ್ರದಿಂದ ಆಕಾಶವ
ನುಂಟುಮಾಡಿ, ಬೆಳುದಿಂಗಳಿಂದ ಬಣ್ಣವಿಟ್ಟು ತನ್ನ ತೊಡಿಗೆಯ ಪೊಗರುಗಳಿಂದ
ದಿಕ್ಕುಗಳನಲಂಕರಿಸಿ, ಯೌವನವಿಲಾಸಗಳಿಂದಲೆ ಅವಯವಗಳನುಂಟುಮಾಡಿ,
ವನ್ಮಥಚರಿತೆಗಳಿಂದಲೆ ಪೂರಿಸಿ, ಅನುರಾಗದಿಂದ ಲೇಪಿಸಿದಂತೆ ಶೃಂಗಾರಮಯ
ವಾಗಿ ಕೌತುಕಮಯವಾಗಿ ಲಾವಣ್ಯಮಯವಾಗಿ ಪ್ರೀತಿರಸಮಯವಾಗಿರುವ
ಕನ್ಯಾಂತಃಪುರವನು ಪೊಕ್ಕು, ಅಲ್ಲಿರುವ ಕನ್ನೆವೆಣ್ಣುಗಳ ಮುಖಕಾಂತಿಗಳಿಂದ
ಚಂದ್ರಮಂಡಲದ ಮೞೆ ಸುರಿದಂತೆ, ಕಡೆಗಣ್ಣುಗಳ ನೋಟಗಳಿಂದ ನೆಲಕ್ಕೆ
ನೈದಿಲುಗಳ ಹರಡಿದಂತೆ, ಹುಬ್ಬುಗಳ ಹಾಱಿಸುವುದಱಿಂದ ಕಾಮನ ಬಿಲ್ಲುಗಳು
ಕದಲಿ ಬರುವಂತೆ, ಮುಡಿಗಳ ಕತ್ತಲೆಗಳಿಂದ ಕೃಷ್ಣಪಕ್ಷದ ಮುಂಗಾವಳ
ತೋಱಿದಂತೆ, ಮುಗುಳುನಗೆಯ ಬೆಳಗುಗಳಿಂದ ಹೂವುಗಳಿಂದ ಬಿಳಿದಾದ ವಸಂತ
ಕಾಲವಾದಂತೆ, ಉಸಿರ ಪರಿಮಳಗಳಿಂದ ಅರಮನೆಗಳಲ್ಲಿ ತೆಂಗಾಳಿ ಬೀಸಿದಂತೆ,
ಕದಪುಗಳ ಡಾಳದಿಂದ ಕನ್ನಡಿಗಳು ಹೊಳೆದಂತೆ, ಅಂಗೈಗಳ ಕೆಂಪಿನಿಂದ
ಕೆಂದಾವರೆಗಳು ಕೆದಱಿದಂತೆ, ಉಗುರುಗಳ ಪೊಗರಿನಿಂದ ದೆಸೆಗಳು ಕಾಮನಂಬಿನ
ಹೊದಿಕಯ ಹೊದಿಸಿದಂತೆ, ಆಭರಣಕಿರಣಗಳಿಂದ ಅರಮನೆಯ ನವಿಲುಗಳು
ಎದ್ದಾಡಿದಂತೆ, ಯೌವನ ವಿಕಾರಗಳಿಂದ ಮನ್ಮಥ ಸಹಸ್ರ ಉಂಟಾದಂತೆ ಇರು
ವುದು. ಅಲ್ಲಿರುವ ಎಳವೆಣ್ಣುಗಳು ಕೆಳದಿಯರ ಕೈಲಾಗ ತೆಗೆದುಕೊಂಬಲ್ಲಿ
ಪಾಣಿಗ್ರಹಣವನು, ಕೊೞಲೂದುವಲ್ಲಿ ಚುಂಬನವನು, ವೀಣೆಯ ಬಾರಿಸುವಲ್ಲಿ
ಉಗುರಿಡುವುದನು, ಸೆಂಡಾಡುವಲ್ಲಿ ಕೈಹೊಯ್ವುದನು, ಎಳ ಸಸಿಗಳಿಗೆ ನೀರೆ
ಱೆವ ಚಿನ್ನದ ಗುಂಬವ ತೆಗೆವಲ್ಲಿ ತೋಳ ತೆಕ್ಕೆಗಳನು, ಉಯ್ಯಾಲಾಡುವಲ್ಲಿ ಪೊಱ
ವಾಱ ಕದಲಿಸುವುದನು, ಎಲೆಗಡಿವಲ್ಲಿ ಪಲ್ಲೊತ್ತುವುದನು, ಕೈಗೞಿದ ಹೂವಿನ
ಸೆಂಡು ಮೊದಲಾದುವು ಬಿದ್ದಲ್ಲಿ ಸೀತ್ಕಾರವನು, ಕಲಿಯುತ್ತಿರುವುದನು ಕಂಡನು.
ಆ ಕನ್ನೆವೆಣ್ಣುಗಳಿಗೆ ಕದಪುಗಳ ಕಾಂತಿಯೆ ಮುಖಮಜ್ಜನದ ತಿಳಿನೀರು; ನಿಡು
ಗಣ್ಗಳೆ ಕಿವಿಯ ಕನ್ನೆಯ್ದಿಲು; ಕಿಱುನಗೆಯ ಬೆಳಗೆ ಪೂಸಿದ ಗಂಧ; ಸುಯ್ಲು
ಗಳೆ ಗಂದವುಡಿ; ತುಟಿಯ ಕೆಂಪೆ ಕುಂಕುಮ; ನುಡಿಯೆ ವೀಣಾನಾದ; ತೋಳು

ಗಳೆ ಸಂಪಗೆಯ ದಂಡೆ; ಅಂಗೈಗಳೆ ಕೆಂದಾವರೆಗಳು; ಮೊಲೆಗಳೆ ಕನ್ನಡಿ; ಮೈಗಳ ಕಾಂತಿಯೆ ಮೇಲುಮುಸುಕು; ಅಂಗಾಲ ಕೆಂಪೆ ಅಲತಿಗೆಯಾಗಿ, ತೋರುವುದು. ಇದಲ್ಲದೆ ಬೇಱೆ ಅಲತಿಗೆಯೆಂಬುದು ಅಂಗಾಲಿಗೆ ಭಾರವಾಗಿರುವುದು; ಬಕುಳದ ಹೂವಿನುಡೆನೂಲು ನಡೆಗೆ ತಡೆಯಾಗುವುದು; ಗಂಧವ ಧರಿಸಿದರೆ ಭಾರವಾಗಿ ಉಸಿರು ವೆಗ್ಗಳಿಸುವುದು; ದುಕೂಲವ ಹೊದೆದರೆ ಮೈ ಕಂದುವುದು; ಕಂಕಣವ ಕಟ್ಟಿದರೆ ಕೈ ಜಡಿವುದು; ಹೂವ ಸೂಡಿದರೆ ಬೞಲಿಕೆ ತೋಱುವುದು; ಕಿವಿಯ ಪೂಗೊಂಚಲಿಗೆಱಗುವ ತುಂಬಿಯ ಱೆಕ್ಕೆಯ ಗಾಳಿಯು ಆಯಾಸವನುಂಟುಮಾಡುವುದು. ಅದು ಅಲ್ಲದೆ ಅಲ್ಲಿಯ ಹೆಣ್ಣುಗಳು ಕೆಳದಿಯ ಕೈಲಾಗಿನಲ್ಲಿ ಎದ್ದು ನಿಲ್ಲುವುದು ಸಾಹಸವೆನಿಸುವುದು; ನಡೆವಲ್ಲಿ ಕಂಠಮಾಲೆಯ ಹೊಯ್ಲ್ಲ ತಾಳುವುದು ಸ್ತನಗಳ ಮಹಿಮೆಯೆನಿಸುವುದು; ಹೂವ ಕೊಯ್ವಲ್ಲಿ ಎರಡನೆಯ ಹೂವ ಕೊಯ್ವುದು ಯೌವನದ ತ್ರಾಣದಿಂದಲೆನಿಸುವುದು; ಹೂವಿನ ದಂಡೆಯ ಕಟ್ಟುವುದು ಕಷ್ಟದ ಕಾರ್ಯವೆನಿಸುವುದು; ದೇವರುಗಳಿಗೆ ಅಡ್ಡಬೀೞುವಲ್ಲಿ ನಡುಮುಱಿಯದೆ ನಿಂತಿರುವುದು ಆಶ್ಚರ್ಯವಾಗಿರುವುದು.

ಈ ಬಗೆಯ ಹೆಣ್ಣುಗಳ ನಡುವೆ ಕೆಲವು ದೂರ ನಡೆದು ಕಾದಂಬರಿಯ ಮೈಹೊದಿಕೆಯ ಊೞಿಗದ ಹೆಣ್ಣುಗಳು ಒಬ್ಬರಿಗೊಬ್ಬರು ನುಡಿದುಕೊಳ್ಳುವ ಸವಿನುಡಿಗಳನು ಕೇಳಿದನು. ಎಲೆ ಸಾರಸಿಕೆ, ನಡೆಬಾವಿಯ ತಡಿಯ ರತ್ನದ ಮಱಲಿನ ಮೇಲೆ ಪನ್ನೀರ ಚೆಲ್ಲು. ಎಲೆ ಮೃಣಾಳಿನಿ, ಕೇತಕಿಯ ದೂಳುಗಳಿಂದ ಮಲ್ಲಿಗೆಯ ಪಾತೆಗಳ ಕಟ್ಟು. ಎಲೆ ರಜನಿಕೆ, ಕದಳಿಯ ವನದ ಕತ್ತಲೆಯಲ್ಲಿ ರನ್ನದ ದೀವಿಗೆಯನಿರಿಸು. ಎಲೆ ಕುಮುದಿನಿ, ಗಿಳಿಗಳು ಕಡಿಯದ ಹಾಗೆ ದಾಳಿಂಬದ ಹಣ್ಣಿಗೆ ಮುತ್ತಿನ ಬಲೆಗಳನು ಕಟ್ಟು. ಎಲೆ ಉತ್ಪಲಿಕೆ, ಕಪ್ಪುರವಾೞೆಯ ರನ್ನದ ಜಗತಿಯನು ತಾವರೆಯ ಹೂವಿನಿಂದ ಗುಡಿಸು. ಎಲೆ ನಳಿನಿ, ಅಂಚೆಯ ಮಱಿಗಳಿಗೆ ತಾವರೆಯ ರಸವನೆ ಕುಡಿಯಿಸು. ಎಲೆ ಕದಳಿ, ನವಿಲ ಮಱಿಗಳನು ಜಲಸೂತ್ರದ ಮನೆಯಲ್ಲಿರಿಸು. ಎಲೆ ಮಯೂರಿ, ಕಿನ್ನರ ಪಕ್ಷಿಗಳನು ಸಂಗೀತಶಾಲೆಗೆ ಬಿಡು. ಎಲೆ ಹರಿಣಿ, ಹುಲ್ಲೆಯ ಮಱಿಗಳ್ಗೆ ಎಳೆಯ ಜವೆಯ ಹುಲ್ಲುಗಳನು ಕೊಡು. ಎಲೆ ಶಕುನಿ, ಪಂಜರದ ಗಿಳಿಗೆ ಮಾತ ಕಲಿಸು—ಎಂದಿವು ಮೊದಲಾದ ಆಲಾಪಗಳನು ಕೇಳಿದನು. ಮತ್ತೊಂದು ಬೞಿಯಲ್ಲಿ ಪರಿಹಾಸಕದ ನುಡಿಗಳನು ಕೇಳಿದನು. ಎಲೆ ಚಮರಿ, ಅಱಿಯದವಳಂತಿದ್ದು ಆರ ಮೋಸ ಮಾಡುವುದಕ್ಕೆ ಕಾದುಕೊಂಡು ಇದ್ದೆ ? ಯೌವನ ಮದದಿಂದ ಮುಂದಱಿಯದೆ

ಮೊಲೆಯ ಭಾರಕ್ಕೆ ಬಳಕುತ್ತ ರನ್ನಗಂಭದ ಕಾಂತಿಯ ಮೇಲೆ ಒರಗಿಕೊಳ್ಳುತ್ತ ಲಿದ್ದೆ! ಗೋಡೆಯಲ್ಲಿ ಕಾಣಿಸುವ ನಿನ್ನ ಪ್ರತಿಬಿಂಬವನು ಏನುಕಾರಣ ನುಡಿಸುತ್ತ ಲಿದ್ದೆ? ಜಾಳಂದರದ ಬಾಗಿಲುಗಳಿಂದ ಬರುವ ಕೆಂಪಿನ ರತ್ನದ ಬೆಳಕಿಗೆ ಬಿಸಿಲೆಂದು ಕೈಮುಚ್ಚಿಯ ಮಾಡಿಕೊಳುತಲಿದ್ದೆ; ಬೆಮರಿದ ಕೈಗಳಿಂದ ಚಾಮರ ಬಿದ್ದು ಹೋದುದನರಿಯದೆ ಉಗುರ ಕಾಂತಿಗಳ ಬೀಸುತಲಿದ್ದೆ—ಎಂದಿವು ಮೊದಲಾದ ಪರಿಹಾಸಕದ ಮಾತನು ಕೇಳುತ ಕಾದಂಬರಿಯ ಮನೆಯ ಸಮೀಪಕ್ಕೆ ಬಂದನು.

ಅಬಚಿಯ ಉಭಯ ಪಾರ್ಶ್ವದಲ್ಲಿಯು ಹೂವುಗಳ ದೂಳುಗಳಿಂದ ಮಬಲ ರಾಸಿಯೆನಿಸಿ, ಕೋಗಿಲೆಗಳು ಕುಟುಕಿದ ಮಾವಿನ ಹಣ್ಣಿನ ತನಿರಸದಿಂದ ಮಳೆ ಗಾಲವೆನಿಸಿ, ಗಾಳಿಗೆ ಉದುರಿದ ಬಕುಳದ ಹೂವಿನ ಮಕರಂದದಿಂದ ಹಿಮಗಾಲ ವೆನಿಸಿ, ಎಡೆಬಿಡದೆ ತಿರುಗುವ ಹೆಣ್ಣುಗಳ ಕಾಲ ಅಲತಿಗೆಯ ರಸದಿಂದ ರಾಗಸಾಗರ ವೆನಿಸಿ, ಕನ್ನಡಿಗಳಿಂದ ಚಂದ್ರಲೋಕವೆನಿಸಿ, ಪೂಸಿದ ಅಗಿಲು ಲೋಧ್ರದಿಂದ ಕಪ್ಪೆನಿಸಿ, ಕಿವಿಯ ಮೇಲಿಟ್ಟಿರುವ ಅಸುಗೆಯ ಚಿಗುರುಗಳಿಂದ ಕೆಂಪೆನಿಸಿ, ಶ್ರೀ ಗಂಧದಿಂದ ಬಿಳಿದೆನಿಸಿ, ತುಡಿಗಿದ ಬಾಗೆಯ ಹೂವುಗಳಿಂದ ಹಸುರೆನಿಸಿ ಎರಡು ಸಾಲಾಗಿ ಇಕ್ಕೆಲ್ಲದಲ್ಲಿ ನಿಂತಿರುವ ಮುದ್ದುಹೆಣ್ಣುಗಳ ನಡುವೆ ನಡುಬೀದಿಯಲ್ಲಿ ತುಂಬಿದ ಹೊಳೆಯಂತೆ ಹರಿದು ಬರುವ ರನ್ನದೊಡಿಗೆಗಳ ಕಾಂತಿ ಪ್ರವಾಹಕ್ಕೆ ಇದಿರಾಗಿ ನಡೆದು, ಆ ಮುಂದುಗಡೆಯ ಬಾಗಿಲವನು ಕಾದಿರುವ ಬಚ್ಚಿಯನು ದಾಂಟಿ, ಕಾದಂಬರಿಯ ಒಳಗದ ಚಾವಡಿಯನ್ನು ಕಂಡನು.

ಅಲ್ಲಿ ಸುತ್ತುಮುತ್ತಿದ್ದ ಸಾಸಿರ ಸಂಖ್ಯೆಯ ಹೆಣ್ಣುಗಳ ನಡುವೆ ರನ್ನದ ಮಂಚದ ಮೇಲೆ ಕರಿಯ ಸೂರಿಯ ಪುಟದ ಸುಪ್ಪತ್ತಿಗೆಯಲ್ಲಿ ಬಿಳಿಯ ಪಟ್ಟೆಯ ಒರಗಿನ ಮೇಲೆ ಒರಗಿಕೊಂಡು ವರಾಹನ ಕೋರದಾಡೆಯ ಮೇಲೆ ಇರುವ ಭೂಮಿ ಯಂತೆ ಕಾಣಿಸುತ ತಮ್ಮ ಕಾಯ ಕಾಂತಿಗಳಿಂದ ತಿಳಿಗೊಳದಲ್ಲಿ ಈಸುವಂತೆ ತೋಳುಗಳ ನೀಡಿ ಚವುರಿಗಳ ಬೀಸುವ ಹೆಣ್ಣುಗಳ ನಡುವೆ, ರತ್ನಗಳು ಕೆತ್ತಿಸಿರುವ ನೆಲದಲ್ಲಿ ಪ್ರತಿಬಿಂಬಿಸಿರುವುದರಿಂದ ಕಾದಂಬರಿಯ ಚೆಲ್ವಿಕೆಗೆ ಮೋಹಿಸಿ ನಾಗ ಲೋಕದವರು ಪಾತಾಳಲೋಕಕ್ಕೆ ಕೊಂಡುಹೋಗುತ್ತಲಿದ್ದಾರೆಯೋ ಎಂಬಂತೆ, ಎಂಟು ದಿಕ್ಕಿನ ಗೋಡೆಗಳಲ್ಲಿ ಕಾಣಿಸುವುದರಿಂದ ಅಷ್ಟದಿಕ್ಪಾಲಕರು ತಮ್ಮ ತಮ್ಮ ಪಟ್ಟಣಗಳಿಗೆ ಕರೆದುಕೊಂಡು ಹೋಗುತಲಿದ್ದಾರೆಯೋ ಎಂಬಂತೆ, ಕಂಭ ಗಳಲ್ಲಿ ಕಾಣಲ್ಪಡುವುದರಿಂದ ಅಚೇತನಗಳಾದ ಕಂಭಗಳು ಮೊದಲಾಗಿ ಹೃದ ಯದೊಳಗಿಟ್ಟುಕೊಂಬುವೋ ಎಂಬಂತೆ,- ಆಭರಣಧ್ವನಿಗಳಿಗೆ ಕೆದರಿಕೊಂಡು

ನವಿಲುಗಳು ಕುಣಿವುದರಿಂದ ಮನೆಗಳು ಮೊದಲಾಗಿಯು ಆಸೆಯಿಂದ ನೂರಾರು ಕಣ್ಣುಗಳ ತೆರೆದು ನೋಡುತ್ತವೋ ಎಂಬಂತೆ ಒಪ್ಪುವ ಕಾದಂಬರಿಯ ಕಂಡೆನು. ಅಲ್ಲಿ ಆವಾಗಲೂ ಸೇರಿ ಊಳಿಗವ ಮಾಡುವ ಹೆಣ್ಣುಗಳು ಮೊದಲಾಗಿಯು ಎವೆಹುಯ್ಯದೆ ನೋಡುತ್ತಿರುವರು. ಸ್ತ್ರೀಲಕ್ಷಣಗಳು ಇವಳನೆ ಬಯಸಿ ಸರ್ವಾ ವಯವಗಳನು ಆವರಿಸಿಕೊಂಡು ಇರುವುವು. ಪುಣ್ಯವಿಲ್ಲದಂತೆ ಬಾಲ್ಯವು ಇವಳ ಬಿಟ್ಟುಹೋಗುತ್ತಿರುವುದು. ಶರೀರದಲ್ಲಿರುವ ಯೌವನ ರಾಗ ಹೊರಿಸೂಸಿತೋ! ಉಟ್ಟ ಚಂದ್ರಗಾವಿಯ ಸೀರೆಸೆರಗೊ ! ಪಾದರಸದ ಕೆಂಪಿನ ಕಾಂತಿಗಳೊ ! ಬಹು ಮೃದುವಾದುದರಿಂದ ಊರುಗಳ ಹೊರಲಾರಿಯದೆ ಬೆರಲುಗಳು ನೆತ್ತರ ಕಾರು‌ದುವೋ ಎಂಬಂತೆ ಕೆಂಪು ವಡೆದಿರುವುವು. ಕಾಲ ಕಡಗಗಳ ರತ್ನಕಾಂತಿ ಗಳು, ಪೊರವಾರಿ ಪೊರಿಲಾರಿಯದೆ ನಡುಗುವ ತೊಡೆಗಳಿಗೆ ಸಹಾಯವಾಗು ವಂತೆ ಮೇಲಕ್ಕೆ ನೀಡಿ, ಪೊರಿವಾರು ಮುಟ್ಟಿರುವುವು. ತೊಡೆಗಳು ಬ್ರಹ್ಮ ದೇವರು ನಡುವ ಬಿಗಿದು ಹಿಡಿಯಲಾಗಿ ಪೊರಿಸೂಸಿದ ಲಾವಣ್ಯ ಪ್ರವಾಹವು ಜಘನವೆಂಬ ಕಲ್ಲರೆಯ ತಾಗಿ ಎರಡು ಪಾಲಾದಂತೆ ಇರುವುವು. ಕಾಂಚೀ ದಾಮವು ರತ್ನಕಾಂತಿ ಎಲ್ಲ ಕಡೆಯಲ್ಲು ಪಸರಿಸಿರುವುದರಿಂದ ಕಳ್ಳುಬಿ ಮತ್ತೊ ಬ್ಬರು ನೋಡದಂತೆ ಮರಿಸಿಕೊಂಡಿರುವ ಕೌತುಕದಿಂದ ಮೆಯ್ಯುಬ್ಬಿದಂತೆ ಸ್ಪರ್ಶ ಸುಖದಿಂದ ರೋಮಾಂಚನವಡೆದಂತೆ ಪೊರಿವಾರಬಳಸಿಕೊಂಡಿರ್ಪುದು. ಪೊರ ವಾರಿಗಳು ಎರಿಗಿರುವ ಸಕಲಜನ ಹೃದಯಗಳಿಂದ ದಪ್ಪವಾಗಿರುವುವು. ನಡುವು ಸ್ತನಗಳು ಮರೆಯಾಗಿರುವುದರಿಂದ ಮುಖವ ಕಾಣದ ದುಃಖದಿಂದ ಬಡವಾಗಿರು ವುದು. ನಾಭಿಯು ಬ್ರಹ್ಮದೇವರು ಇವಳ ಶರೀರವನುಂಟುಮಾಡುವಾಗ ಬೆರಳೊ ತ್ತಿತೋ ಎಂಬಂತೆ ಕುಳಿಯಾಗಿರುವುದು. ಬಡಬಾಸೆಯು ಮನ್ಮಥನು ಮೂರು ಲೋಕವನು ಜಯಿಸಿ ಜಯಸ್ತಂಭದಲ್ಲಿ ಬರೆಸಿದ ಬಿರುದಾವಳಿಯಂತೆ ಇರುವುದು. ಸ್ತನಗಳು ನುಣ್ಪಾದುದರಿಂದ ಕಿವಿಯ ಮೇಲಿಟ್ಟ ಅಶೋಕೆಯ ತಳಿರು ಪ್ರತಿ ಬಿಂಬಿಸಿರಲಾಗಿ ಹೃದಯವು ಹೊರಲಾರಿಯದೆ ಹೊರಿಯೆಂಕೆ ಕಳೆದ ಮನ್ಮಥನ ಪಾದ ಪೀಠದಂತೆ ತೋರುವುವು. ತೋಳುಗಳು ಹರಳೋಲೆಯ ಕಾಂತಿಯ ಕೆಳೆಯಿಂ ಕೆಳರಿದು ಬಂದುವೋ, ಅಂಗಕಾಂತಿಯೆಂಬ ತಿಳಿಗೊಳದಲ್ಲಿ ಹುಟ್ಟಿದ ತಾವ ರೆಯ ದಂಟುಗಳೋ ಎಂಬಂತಿರುವುವು. ಕೈಗಳು ಉಗುರುಗಳ ಕಾಂತಿಯಿಂದ ಕೆತ್ತನೆಯ ಕಡಗದ ಭಾರಕ್ಕೆ ಬಳಲಿ ಬೆವರುವನಿಯನು ನಿಲಿಸುವಂತೆ ಇರುವುವು. ಕಂಠಮಾಲೆಯ ಕಾಂತಿಯು ಸ್ತನಗಳು ಜಡಿವುದರಿಂದ ಬಾಗುವ ಮುಖವ

ನೆಗವುವಂತಿರುವುವು. ತುಟಿಗಳು ಹೊಸ ಜವ್ವನದ ಗಾಳಿಯಿಂದ ರಾಗಸಾಗರದಲ್ಲಿ ಎದ್ದ ತೆರೆಗಳೋ, ಹವಳದ ಕುಡಿಗಳೋ ಎನಿಸಿ ತೋರುವುವು. ಕಪೋಲಗಳು ಕೆಂಪು ಬಿಳುಪುಗೂಡಿ ಕಾಂತಿಯುಂಟಾಗಿರುವುದರಿಂದ ಜೇನು ತುಂಬಿದ ಮುತ್ತಿನ ಚಿಪ್ಪುಗಳಂತೆ ಕಾಣಿಸುವುವು. ಕಣ್ಣುಗಳು ತಾವು ನಡೆವುದಕ್ಕೆ ಅಡ್ಡಲಾದುದರಿಂದ ಕಿವಿಗಳ ಮೇಲೆ ಕೋಪಿಸಿದಂತೆ ಕಡೆಯಲ್ಲಿ ಕೆಂಪಾಗಿರುವುವು. ಹುಬ್ಬುಗಳು ಯೌವನವೆಂಬ ಮದದಾನೆಗೆ ಮೇಲುಮದ ಕಾಣಿಸಿದಂತೆ ಇರುವುವು. ಹಣೆಯೊಳಿಟ್ಟ ಕುಂಕುಮದ ಬೊಟ್ಟು ಮುಖಲಾವಣ್ಯರಸದಲ್ಲಿ ಸಿಲುಕಿದ ಮನ್ಮಥನ ರಾಗವುಂಟಾದ ಮನಸ್ಸಿನಂತಿರುವುದು. ಈ ಬಗೆಯ ಸರ್ವಾವಯವ ಸೌಂದರ್ಯವುಂಟಾದ ಕಾದಂಬರಿಯು ಪರಮೇಶ್ವರನ ಅರ್ಧ ಶರೀರದಲ್ಲಿ ಹುದುಗಿಕೊಂಡಿರುವ ಗೌರೀದೇವಿಯ ಗರ್ವವನು ಜಯಿಸುವಂತೆ ಸರ್ವ ಶರೀರದಲ್ಲಿಯು ಮನ್ಮಥನೊಡನೆ ಹುದುಗಿರುವಳು. ಎರ್ದೆಯಲ್ಲಿ ಲಕ್ಷ್ಮೀದೇವಿಯೊಬ್ಬಳನು ಧರಿಸಿದ ನಾರಾಯಣನ ಗರ್ವವನಪಹರಿಸುವಂತೆ ಪ್ರತಿಬಿಂಬಗಳ ನೆವದಿಂದ ಎರ್ದೆಯಲ್ಲಿ ನೂರಾರು ಲಕ್ಷ್ಮಿಯನು ಧರಿಸಿರುವಳು. ನೊಸಲಿನಲ್ಲಿ ಒಂದು ಚಂದ್ರನ ಧರಿಸಿದ ಪರಮೇಶ್ವರನ ಪರಿಹಾಸವ ಮಾಡುವ ರೀತಿಯಲ್ಲಿ ಮುಗುಳುನಗೆಗಳಿಂದ ದಿಕ್ಕುದಿಕ್ಕುಗಳಿಗೆ ನೂರಾರು ಚಂದ್ರರನು ಚೆಲ್ಲುತ್ತಿರುವಳು. ಒಬ್ಬ ಮನ್ಮಥನ ಜಯಿಸಿದ ಪರಮೇಶ್ವರನ ಮೇಲಣ ಕೋಪದಿಂದ ಒಬ್ಬೊಬ್ಬರ ಹೃದಯದಲ್ಲಿ ನೂರಾರು ಮನ್ಮಥರನುಂಟುಮಾಡುತ, ತಾನು ಸಾಕಿದ ಚಕ್ರವಕ್ಕಿಗಳು ರಾತ್ರಿ ನಿದ್ದೆಗೆಟ್ಟಿರಲಾಗಿ ಅವು ನಿದ್ರಿಸುವುದಕ್ಕೆ ಪನ್ನೀರ ಕಾಲುವೆಯ ತಡಿಯಲ್ಲಿ ತಾವರೆಯ ಹೂವುಗಳ ದೂಳುಗಳಂ ಹರಹಿಸಿಕೊಡುತ್ತ, ಊಳಿಗದ ಹೆಣ್ಣುಗಳ ಕಾಲಂದಿಗೆಯ ಧ್ವನಿಯ ಕೇಳಿ ಮೋಹವಡುವ ಹಂಸೆಗಳಿಗೆ ತಾವರೆಯ ದಂಟಿನ ಸಂಕಲೆಯ ತೊಡಿಸೆಂದು ಅಂಚೆಗಳ ಸಾಕುವವಳೊಡನೆ ಹೇಳುತ್ತ, ತೊಡಿಗೆಯ ಪಚ್ಚೆಯ ರತ್ನದ ಕಾಂತಿಯ ಬಯಸುವ ಹುಲ್ಲೆಯ ಮರಿಗೆ ಕಿವಿಯ ಮೇಲಿರುವ ಎಳೆಯ ಜವೆಯ ತೆನೆಯನು ಕೊಡುತ ತಾನೆ ನೀರೆರೆದು ಸಾಕಿದ ಮಾವು ಮಲ್ಲಿಗೆ ಮೊದಲಾದ ಸಸಿಗಳು ಹೊಸಫಲಗಳ ಬಿಟ್ಟುವು ಎಂದು ಬಂದು ಹೇಳಿದ ಶೃಂಗಾರದ ತೋಟದ ಕಾವಲವಳಿಗೆ ಬೇಕಾದ ವಸ್ತುಗಳ ಕೊಡಿಸುತ, ನೂತನವಾಗಿ ವನಾಂತರದಲ್ಲಿ ಉಂಟಾದ ಹೂವು ಕಾಯಿಗಳು ಮೊದಲಾದುವನ್ನು ಕಾಣಿಕೆಯನ್ನು ತಂದುಕೊಟ್ಟು ಹೆಸರುಗಳು ಕೇಳಿ ನುಡಿಸಿದರೆ ಮಾತನಾಡಲರಿಯದ ಸೋಲಿಗರ ಹೆಣ್ಣುಗಳನು ನುಡಿನುಡಿಸಿ ನಗುತ, ಸುಯ್ಯೆಲರ ಪರಿಮಳಕೆರಗಿ

ಕೈಬೀಸಿದುದಕ್ಕೆ ಬೆದರಿ ತಿರುತಿರುಗಿ ಬರುವ ತುಂಬಿಗಳನು ಕರಿಯ ಸೆಂಡ ಹೊಯ್ವಂತೆ ಹೊಯ್ಯುತ, ಪಂಜರದೊಳಗಿರುವರಗಿಳಿಯ ವಿನೋದದ ಮಾತಿಗೆ ಮುಗುಳುನಗೆಯ ನಗುತ, ಚಾಮರ ಬೀಸುವಳ ಪರಿಹಾಸಕವ ಮಾಡಿ ಕೈಯೊಳು ಪಿಡಿದಿರುವ ತಾವರೆಯ ಹೂವಿನಿಂದ ಹೊಯ್ಯುತ, ಸಂಚಿಯವಳೆದೆಯ ಮೇಲೆ ಮುತ್ತಿನ ಹಾರದ ಚಂದ್ರನು ಪ್ರತಿಬಿಂಬಿಸಿರಲಾಗಿ ಬೆವರುವನಿಗಳು ಸೇರಿದ ಉಗುರುಗಾಯವೆಂದು ತಿಳಿದು ಅವಳೆದೆಯ ಮೇಲೆ ಗಂದವುಡಿಯ ಚೆಲ್ಲುತ, ಕುಂಚದ ಊಳಿಗದವಳ ಕದಪಿನಲ್ಲಿ ಹರಳೋಲೆಯ ಕಾಂತಿ ಬಿದ್ದಿರಲಾಗಿ ಹಸಿಯ ಉಗುರು ಗಾಯವೆಂದು ತಿಳಿದು ಬೇಜಾರೊಂದು ಮಾತಿಗೆ ಮೆಚ್ಚಿದ ನೆವದಿಂದ ತನ್ನ ಕಿವಿಯ ಮೇಲಿರುವ ಚಿಗುರನು ಅವಳ ಕಿವಿಯ ಮೇಲಿರಿಸಿ ಮಣಿಸುತ್ತ, ಕೆಲದಲ್ಲಿ ಕುಳಿತು ಚಂದ್ರಾಪೀಡನ ಗುಣಗಳನು ಹೇಳುತ್ತಿರುವ ಮಯೂರಕನ ನುಡಿಯಿಸುವಲ್ಲಿ– ಅವನಾರು ? ಆರ ಕುಮಾರನು ? ಅವನ ರೂಪೆಂತಹದು ? ಆತನಿಗೆ ವರುಷವೆನಿತುಂಟು ? ಅವನೇನ ನುಡಿದನು ? ನೀನೇನೆಂದು ಪ್ರತ್ಯುತ್ತರವಿತ್ತೆ ? ಅವನ ಬಳಿ ಯೆಷ್ಟುಹೊತ್ತು ಮಾತನಾಡಿಕೊಂಡಿದ್ದೆ ? ಅವನಿಗೆ ಮಹಾಶ್ವೇತೆಯ ಸ್ನೇಹವಾವ ರೀತಿಯಿಂದಾಯಿತು ? ಅವನು ಇಲ್ಲಿಗೆ ಬಂದಾನೇ ?— ಎಂದು ಮತ್ತೆಮತ್ತೆ ಚಂದ್ರಾಪೀಡನ ವಿಷಯವಾದ ಮಾತನೆ ಕೇಳುತ್ತಿರುವ ಕಾದಂಬರಿಯನೆ ಕಂಡು ಚಂದ್ರನ ಕಂಡ ಸಮುದ್ರದಂತೆ ಉಬ್ಬಿ ಮನಸ್ಸಿನಲ್ಲಿ ಆಲೋಚಿಸಿದನು. ಬ್ರಹ್ಮ ದೇವರು ಮಿಕ್ಕ ಇಂದ್ರಿಯಗಳನು ನಯನೇಂದ್ರಿಯವಾಗಿ ಮಾಡದೆ ಹೋದನಲ್ಲ; ಈ ಕಣ್ಣುಗಳು ಏನ ಪುಣ್ಯವ ಮಾಡಿದುವೊ ? ತಡೆಯಿಲ್ಲದೆ ಇವಳ ನೋಡುತ್ತಲಿವೆ. ಬ್ರಹ್ಮನು ಆಶ್ಚರ್ಯವಾಗಿ ಎಲ್ಲ ಸೌಂದರ್ಯವು ಒಂದೆ ಬಳಿಯಲ್ಲಿ ಕೂಡಿರುವಂಥ ಒಂದು ವಸ್ತುವನುಂಟುಮಾಡಿದನು; ಈ ಸೌಂದರ್ಯಗಳ ಆವ ಬಳಿಯಲ್ಲಿ ಇರಿಸಿ ಕೊಂಡು ಇದ್ದನೋ ! ಈ ಶರೀರವನುಂಟುಮಾಡುವಾಗ ಬ್ರಹ್ಮದೇವರ ಕೈ ಸೋಂಕ ಲಾಗಿ ಆನೋವಿನಿಂದ ಬಿದ್ದ ಕಣ್ಬನಿಗಳು ಲೋಕದಲ್ಲಿ ನೈದಿಲು ಕನ್ನೈದಿಲುಗಳಾದುವು–ಎಂದು ಯೋಚಿಸಿಕೊಳ್ಳುತ್ತಿರುವಷ್ಟರಲ್ಲಿ; ಕಾದಂಬರಿಯು ಚಂದ್ರಾಪೀಡ ನನು ಕಂಡು– ಮಯೂರಕನು ಹೇಳಿ ಇದ್ದನಲ್ಲ, ಆರಾಜಕುಮಾರನು ಇವನೀಗಲೇ ಆಗಬೇಕೆಂದು ದೃಷ್ಟಿಸಿ ನೋಡುವ ಕಾದಂಬರಿಯ ಕಣ್ಬೆಳಗುಗಳಿಂದ ಚಂದ್ರಾಪೀಡನು ಬಿಳುಪಾಗಿ ಕಾದಂಬರಿಯ ಕಂಡುದರಿಂದ ಮೈಮರೆದಿದ್ದನು.

ಆಗ ಚಂದ್ರಾಪೀಡನ ಕಂಡುದರಿಂದ ಆಕಾದಂಬರಿಗೆ ಮುಂಚಿತವಾಗಿಯೆ ಮೈನವಿರೆದ್ದುದು; ಆಮೇಲೆ ಭೂಷಣಧ್ವನಿಗಳೆದ್ದುವು: ಆಮೇಲೆ ಕಾದಂಬರಿಯು

ಎದ್ದಳು. ಆಕಾದಂಬರಿಗೆ ಮನ್ಮಥವಿಕಾರದಿಂದಲೆ ಬೆಮರುಂಟಾಯಿತು; ವೇಗದಲ್ಲಿ ಎದ್ದುನಿಂತ ಬಟಿಲಿಕೆಯೆ ನೆವವಾಯಿತು. ತೊಡೆಗಳ ಕಿರುನಡುಕದಿಂದಲೆ ನಡೆ ಮೆಲ್ಲನಾಯಿತು; ಅಂದುಗೆಯ ದನಿಗೇಳಿ ಬೆಂಬಿದ್ದು ತೊಡರುವ ಅಂಚೆಗಳು ಕೀರ್ತಿಯ ಪಡೆದುವು. ನಿಟುಸುಯ್ಲುಗಳಿಂದಲೆ ಮೇಲುದು ತೊಲಗಿತ್ತು; ಚಾಮರದ ಗಾಳಿ ನಿಮಿತ್ತವಾಯಿತು ಎದೆಯೊಳಿರುವ ಚಂದ್ರಾಪೀಡನ ಸೋಂಕುವಾಸೆಯಿಂದಲೆ ಕೈಗಳು ಸ್ತನದಮೇಲಕ್ಕೆ ಬಂದುವು; ಸ್ತನಗಳ ಮರೆಸಿಕೊಳ್ಳಬೇಕೆಂಬುದು ವ್ಯಾಜವಾಯಿತು. ಆನಂದದಿಂದಲೆ ಕಣ್ಣನಿಗಳುದಿರ್ದುವು; ಕದಲಿದ ಕಿವಿಯ ಪೂಗೊಂಚಲ ದೂಳು ಹೆಸರುವಡೆಯಿತು. ನಾಚಿಕೆಯಿಂದ ಮಾತುಗಳು ಹೊರಡದೆ ಹೋದುವು; ಮುಖಪರಿಮಳಕ್ಕೆರಗಿದ ತುಂಬಿವಿಂಡು ನೆವವಾಯಿತು. ಕಾಮನಂಬಿನ ಮೊದಲ ಗಾಯದಿಂದಲೆ ಸೀತ್ಕಾರವುಂಟಾಯಿತು; ತಾಳೆಯ ಹೂವಿನ ಮುಳ್ಳು ತಾಕಿದುದು ಕಾರಣವಾಯಿತು. ಕಿರುನಡುಕದಿಂದ ಕೈ ಅಲ್ಲಾಡಿತು; ನೆಲನನುಗ್ಗಡಿಸುವ ಕಟ್ಟಿಗೆಗಾತಿಯರ ಬೇಡವೆಂಬುದು ನೆವವಾಯಿತು. ಆಸಮಯದಲ್ಲಿ ಮನ್ಮಥನು ಮನ್ಮಥಪರವಶವಾದಂತೆ ಚಂದ್ರಾಪೀಡನ ಹೃದಯವನ್ನು ಹೊಗುವ ಕಾದಂಬರಿಯ ಸಂಗಡಲೆ ತಾನು ಹೊಕ್ಕನು. ಆಚಂದ್ರಾಪೀಡನು ಕಾದಂಬರಿಯ ಆಭರಣಕಾಂತಿಯನು ನೋಟಕ್ಕೆ ಮರೆಯೆಂದೆಣಿಸಿದನು; ಹೃದಯವ ಹೊಕ್ಕುದನೆ ಕೈವಿಡಿದುದಾಗಿ ಎಣಿಸಿದನು; ಒಡವೆಗಳ ಧ್ವನಿಗಳನು ನುಡಿಗಳೆಂದು ತಿಳಿದನು; ಮೈಮೈಗಳ ಕಾಂತಿಗಳು ಬೆರೆದುದನೆ ರತಿಸಮಾಗಮವೆಂದು ತಿಳಿದನು.

ಕಾದಂಬರಿಯು ಪ್ರಯಾಸದಿಂದ ನಾಲ್ಕಡಿಯಿಟ್ಟು ಸ್ನೇಹಾತಿಶಯದಿಂದ ಮಹಾಶ್ವೇತೆಯನು ಕಂಠಾಲಿಂಗನವ ಮಾಡಿಕೊಳ್ಳಲಾಗಿ ಮಹಾಶ್ವೇತೆಯು ಪ್ರತಿಯಾಗಿ ಕಂಠಾಲಿಂಗನವ ಮಾಡಿಕೊಂಡು ಒಂದು ಮಾತ ನುಡಿದಳು. ಎಲೆ ಕಾದಂಬರಿ, ಈತನು ಭಾರತವರ್ಷದಲ್ಲಿ ಸಾಮ್ರಾಜ್ಯಪತಿಯಾಗಿರುವ ತಾರಾಪೀಡನೆಂಬರಸಿನ ಕುಮಾರನು ಚಂದ್ರಾಪೀಡನೆಂಬವನು. ದಿಗ್ವಿಜಯನಿಮಿತ್ತವಾಗಿ ಈನೆಲಕ್ಕೆ ಬಂದನು. ಈತನ ಮುಖಸಂದರ್ಶನಾರಭ್ಯವಾಗಿ ನೆವವಿಲ್ಲದೆ ನನ್ನಲ್ಲಿ ಸ್ನೇಹವಾಗಿದಾನೆ. ಎಲ್ಲವನು ತೊರೆದಿರುವ ನನ್ನ ಕಲ್ಲೆದೆಯನ್ನು ತನ್ನ ಸುಗುಣಗಳಿಂದಲೆ ಕರಗಿಸುತ್ತಿದಾನೆ. ಲೋಕದಲ್ಲಿ ದಾಕ್ಷಿಣ್ಯವುಂಟಾಗಿ ವಂಚನೆಯಿಲ್ಲದೆ ಜಾಣರಾಗಿ ನೆವವಿಲ್ಲದ ನೇಹವುಂಟಾಗಿರುವಂಥವರ ದೊರಕೊಂಬುದು

ಮಹಾದುರ್ಲಭ. ಆದುದಱಿಂದ ಈತನನು ನೋಡಿ ನೀನು ನನ್ನಂತೆ ಬ್ರಹ್ಮ ದೇವರಿಗೆ ಸೃಷ್ಟಿಯಲ್ಲಿ ಚಾತುರ್ಯವುಂಟೆಂಬುದನು, ಈರೂಪಿಗೆ ಬದಲಿಲ್ಲವೆಂಬುದನು, ಆಶ್ಚರ್ಯವು ಉಚಿತವಾದ ಬಳಿಯಲ್ಲಿ ಸೇರಿತೆಂಬುದನು, ಭೂಮಿಗೆ ಪತಿಸುಖವುಂಟಾಯಿತೆಂಬುದನು, ದೇವಲೋಕಕ್ಕಿಂತಲು ಮನುಜಲೋಕವೆ ಹೆಚ್ಚೆಂಬುದನು, ಮನುಷ್ಯರ ಕಣ್ಣುಗಳು ಸಫಲವಾದುದನು, ಸಕಲಕಲೆಗಳು ಒಂದೇ ಬಳಿಯಲ್ಲಿ ಸೇರಿದೆಯೆಂಬುದನು ತಿಳಿದಿರಬೇಕೆಂದು ಬಲವಂತದಿಂದ ಕರತಂದೆನು. ನಿನ್ನ ಪ್ರಸಂಗವನು ಇವನಿಗೆ ಬಹುಬಗೆಯಲ್ಲಿ ಹೇಳಿದ್ದೇನೆ. ಆದಱಿಂದ ಅಪೂರ್ವವಾಗಿ ಕಂಡೆನೆಂದು ನಾಚದೆ, ಪರಿಚಯವಿಲ್ಲವೆಂದು ಅಪನಂಬಿಕೆಯ ಮಾಡಿಕೊಳ್ಳದೆ, ಇವನ ಬಗೆಯ ಕಾಣಬಾರದು ಎಂದು ಯೋಚಿಸದೆ ನನ್ನ ಮರ್ಯಾದೆಯಲ್ಲಿ ಇವನಲ್ಲಿಯು ವಿಶ್ವಾಸವಾಗಿ ನಡೆದುಕೊ; ಈತನು ನಿನಗೆ ಸ್ನೇಹಿತನು; ಬಂಧುವು; ಸಂಗಡಿಗನು-ಎಂದು ಮಹಾಶ್ವೇತೆಯು ಕಾದಂಬರಿಯೊಡನೆ ನುಡಿಯುತಿರಲಾಗಿ, ಚಂದ್ರಾಪೀಡನು ಕಾದಂಬರಿಯ ಮುಖವ ನೋಡಿ ಕೈಮುಗಿದನು. ಆವೇಳೆಯಲ್ಲಿ ಓರೆನೋಟದಿಂದ ನೋಡುವ ಕಾದಂಬರಿಯ ಕರಿಯಾಲಿಗಳು ಬಲುನಿಡಿದಾದ ಕಡೆಗಣ್ಣಿನ ಬಳಿಗೆ ನಡೆದು ಬೆವರಿದಂತೆ ಆನಂದಾಶ್ರುಗಳಾದುವು; ಉಱಿಬಾಗಿ ಅವನ ಬಳಿಗೆ ಬರುವ ಮನಸ್ಸಿನ ಮಾರ್ಗದ ಧೂಳಿಯಂತೆ ಮುಗುಳುನಗೆ ಮೊಗದೋಱಿತು; ಇವನಿಗೆಱಗಿ ಬದುಕುವುದು ಎಂದು ಶಿರಸ್ಸಿಗೆ ಹೇಳುವುದಕ್ಕೆ ಹೋಗುವಂತೆ ಒಂಟಿಹುಬ್ಬು ಮೇಲಕ್ಕೇಱಿತು; ಬೆರಳುಗಳಲ್ಲಿ ಧರಿಸಿರುವ ಪಚ್ಚೆಯುಂಗುರಗಳ ಕಾಂತಿಯು ವಿಲಾಸದಿಂದ ಮುಡಿದಿರುವ ಎಲೆಗಳಿಗೆಯಂತೆ ಕಾಣಿಸಿತು; ತೊಳೆದಂತೆ ನಿರ್ಮಲವಾದ ಕಾದಂಬರಿಯ ಅವಯವಂಗಳಲಿ ಸಂಚರಿಸುವ ಮೈಪೆತ್ತ ಮನ್ಮಥನಂತೆ ಚಂದ್ರಾಪೀಡನು ಪ್ರತಿಬಿಂಬಿಸಿದನು. ಅದೆಂತೆಂದೊಡೆ:-ನೆಲನ ಕೀಱಿನ ಕಾಲುಂಗುಟದಿಂದ ಕಲೆಯಿಸಿಕೊಂಡಂತೆ ಕಾಲುಗುರುಗಳಲ್ಲಿ ತೊಳಗಿದನು. ನೋಡುವ ಕದುಬಿನಿಂದ ಒದಗಿ ಬಂದ ಮನ್ಮಥನಿಂದ ಬರಿಸಿದವನಂತೆ ಎದೆಯಲ್ಲಿ ಕಾಣಿಸಿದನು. ಅರಲ್ದ ನೈದಿಲೆಯ ದಂಡೆಯಂತೆ ನುಣ್ಣಾಗಿ ನಿಡಿದಾದ ದೃಷ್ಟಿಗಳಿಂದ ಪಾನವ ಮಾಡಿದಂತೆ ಕಪೋಲದಲ್ಲಿ ಕಾಣಿಸಿದನು. ಆಗ ಅಲ್ಲಿರುವ ಸಕಲವಾದ ಹೆಣ್ಣುಗಳ ನೋಟಗಳು ಕಡೆಗಣ್ಣುಗಳ ಸೇರಿ ಹೊಱಿಹೊಱಡಲಿಚ್ಛೈಸಿದ ಕಿವಿಯ ನೈದಿಲ ತುಂಬಿಗಳಂತೆ ತಿರುಗುತ್ತಲಿದ್ದುವು. ಕಾದಂಬರಿಯು ಮೆಯ್ಯ ವುಲಪುಗೂಡಿ ಚಂದ್ರಾಪೀಡನಿಗೆ ಪಾದಪ್ರಣಾಮವ ಮಾಡಿ ಮಹಾಶ್ವೇತೆ ಸಹ ಮಂಚದ ಮೇಲೆ ಕುಳಿತುಕೊಂಡಳು.

ಅತಿಶೀಘ್ರದಲ್ಲಿ ಊಳಿಗದ ಹೆಣ್ಣುಗಳು ತಂದು ಮಡಗಿದ ಸೂರ್ಯಪುಟದ ಸುಪ್ಪತ್ತಿಗೆಯಲ್ಲಿ ಚಂದ್ರಾಪೀಡನು ಕುಳಿತುಕೊಂಡನು. ಕಾದಂಬರಿಯು ಮಹಾಶ್ವೇತೆ ಸಹ ಕುಳಿತಿರುವುದರಿಂದ ಮಿಕ್ಕ ವಿನೋದಗಳು ಒಂದೂ ಸಹಿಸದು ಎಂಬುದನು ತಿಳಿದು ಅವಸರದ ಹೆಣ್ಣುಗಳು ಸಂಗೀತ ಮೇಳ ಮೊದಲಾದ ವಿನೋದಗಳನು ನಿಲ್ಲಿಸಿದ ಮೇಲೆ ಕಾದಂಬರಿಯು ಚಿನ್ನದ ತಂಬಿಗೆಯಲ್ಲಿ ನೀರ ತರಿಸಿ ಮಹಾಶ್ವೇತೆಯ ಪಾದವ ತೊಳೆದು ಮೇಲುದಿನ ಸೆರಗಿನಿಂದ ತೊಡೆದು ತಿರುಗಿ ಮಂಚದ ಮೇಲೆ ಕುಳಿತುಕೊಂಡಳು. ಬಳಿಕ ಕಾದಂಬರಿಗೆ ಅಪರಶರೀರವಾಗಿ ರೂಪಿನಲ್ಲಿ ಗುಣದಲ್ಲಿ ಸಮಾನವಾಗಿ ಸಕಲವಾದ ಅಂತರಂಗಕ್ಕೂ ಒಳಗಾಗಿರುವ ಮದಲೇಖೆಯೆಂಬ ಕೆಳದಿಯೊರ್ವಳು ಚಂದ್ರಾಪೀಡನ ಪಾದವ ತೊಳೆದಳು. ಮಹಾಶ್ವೇತೆಯು ತುಂಬಿಗಳ ಹಿಂಡಿನಿಂದ ಸಡಿಲಿದ ಕಾದಂಬರಿಯ ಕಿವಿಯ ಮೇಲಿಟ್ಟಿರುವ ಪೂಗೊಂಚಲನು ನೆಲೆಗೊಳಿಸುತ್ತ ಚಾಮರದ ಗಾಳಿಗೆ ಕೆದರಿದ ಕುರುಳುಗಳನು ತಿದ್ದುತ ಕುಶಲಕ್ಷೇಮವನು ಕೇಳಲಾಗಿ, ಆ ಕಾದಂಬರಿಯು ಮಹಾಶ್ವೇತೆಗೆ ತನ್ನಲ್ಲಿ ಉಂಟಾದ ಸ್ನೇಹಕ್ಕೆ ಅವಳು ವನದಲ್ಲಿದ್ದಾಗ ತಾನು ಊರಲ್ಲಿಯೆ ಇದ್ದ ತಪ್ಪಿಗೆ ನಾಚಿದಂತೆ ಮೆಲ್ಲಗೆ ತನ್ನ ಕ್ಷೇಮವನ್ನು ತಿಳುಹಿ ವೈರಾಗ್ಯವೇಷದಲ್ಲಿರುವ ಮಹಾಶ್ವೇತೆಯ ಮುಖವನ್ನು ದುಃಖಗೂಡಿ ನೋಡುತ್ತಿದ್ದಳು. ಮನ್ಮಥನು ಬಿಲ್ಲ ಹೆದೆಯನೇರಿಸಿಕೊಂಡು ಬಂದು ಕಾದಂಬರಿಯ ನೋಟಗಳನ್ನು ಮತ್ತೆಮತ್ತೆ ಕಡೆಗಣ್ಣುಗಳಿಗೆ ಸೇರಿಸಿ ಹೊಳೆಯಿಸಿ ತೇಲಿಸಿ ಬಲುಮೆಯಿಂದ ಚಂದ್ರಾಪೀಡನ ದಿಕ್ಕಿಗೆ ತಡೆಯಬಾರಾಗಿ ತಿರುಗಿಸಿಕೊಳಲಾರದೆ ಚಂದ್ರಾಪೀಡನ ನೋಡುತ ಕೆಲದಲ್ಲಿರುವ ಕೆಳದಿಯ ಕಪೋಲದಲ್ಲಿ ಅವನು ಪ್ರತಿಬಿಂಬಿಸಿರುವುದಕ್ಕೆ ಕರುಬುತ್ತ ತನ್ನೆದೆಯಲ್ಲಿ ರೋಮಾಂಚದಿಂದ ಅವನ ಪ್ರತಿಬಿಂಬ ಮರೆಯಾಗುವುದಕ್ಕೆ ವಿರಹವೇದನೆಯ ನನುಭವಿಸುತ ಬೆಮರಿಂದ ನನೆದ ಅವನ ಎದೆಯಲ್ಲಿ ಕಾಣಿಸುವ ಚಿತ್ರದ ಬೊಂಬೆಗಳ ಪ್ರತಿಬಿಂಬಗಳನು ಸವತಿಯರಂತೆ ನೋಡುತ ತಾನು ಕಣ್ಣೆವೆಗಳ ಹೊಯ್ಯದೆ ಎಡೆವಿಡದೆ ನೋಡುವುದಕ್ಕೆ ಪುಣ್ಯವಿಲ್ಲವೆಂದು ದುಃಖಪಡುತ ಆನಂದಾಶ್ರುಗಳು ಮರೆಯಾಗುವುದರಿಂದ ಕಣ್ಣುಗಳು ಇದ್ದೂ ಇಲ್ಲವೆಂದು ಎಣಿಸುತ ನೋಡುತ್ತಿರ್ದಳ್ ಒಂದಿಷ್ಟು ಹೊತ್ತಿನ ಮೇಲೆ ವೀಳೆಯವನು ತರಿಸಲಾಗಿ ಮಹಾಶ್ವೇತೆಯು ಕಾದಂಬರಿಯೊಡನೆ ನುಡಿದಳು.

ಎಲೆ ಕಾದಂಬರಿ, ನಾವೆಲ್ಲರೂ ನೂತನವಾಗಿ ಬಂದಿರುವ ಈಚಂದ್ರಾಪೀಡನಿಗೆ ಬಹುಮಾನಮಾಡಬೇಕು. ಇವನಿಗೆ ವೀಳೆಯವ ಕೊಡು- ಎನಲಾಗಿ,

ಆನುಡಿಗೇಳಿ ಕಾದಂಬರಿ ತಲೆವಾಗಿ ಮೆಲ್ಲನೆ ಏಕಾಂತವಾಗಿ-ನನಗೆ ಪರಿಚಯವಿಲ್ಲದೆ ಇದ್ದುದರಿಂದ ನಾಚಿಕೆ ತೋರುತಿದೆ, ನೀನೇ ಕೊಡು- ಎಂದು ನುಡಿದರೂ ಕೇಳದೆ ಮಹಾಶ್ವೇತೆಯು ಬಲುವೆಯ ಮಾಡುವುದರಿಂದ ಒಪ್ಪಿಗೊಂಡು ವೀಳೆಯದ ತಟ್ಟೆಯನು ಕೈಯಲ್ಲಿ ತೆಗೆದುಕೊಂಡು ಮಹಾಶ್ವೇತೆಯ ಮುಖವ ನೋಡುತ ಬೆಮರುವನಿಗಳಿಂದ ನನೆನನೆದು ಇನ್ನು ಸಿಲಲಾರೆನು ಕೈಕೊಡು ಎಂದು ಬೇಡುವಂತೆ ವೀಳೆಯವ ಕೊಡುವುದಕ್ಕೆ ಕೈನೀಡಲಾಗಿ ಚಂದ್ರಾಪೀಡನು ತೆಗೆದು ಕೊಂಬುದಕ್ಕೆ ನೀಡಿದ ಕೈ ಅಂಗೈಯಲ್ಲಿಯು ಕಡೆಯಲ್ಲಿಯು ಕೆಂಪಾಗಿ ಬಿಲ್ಲ ಹೆದೆಯ ಕೋಳಿಂದ ಮುಂಗೈಯ ಬಳಿ ಜಿಡ್ಡುಗಟ್ಟಿ ಕಪ್ಪಗೆ ಕಾಣಪಡುವುದರಿಂದ ಶತ್ರುರಾಯರುಗಳ ಐಶ್ವರ್ಯಲಕ್ಷ್ಮಿಯನು ಮುಂದಲೆವಿಡಿದೆಳೆದಲ್ಲಿ ಕಣ್ಣೀರಿಂದ ಕರಗಿದ ಕಾಡಿಗೆಯೆಂಬಂತೆ ಕಾಣಿಸಿದುವು; ಉಗುರ ಕಾಂತಿಗಳು ನಿಡಿದಾದುದ ಱಿಂದ ಕಾದಂಬರಿಯು ಸೋಂಕುವಾಸೆಯಿಂದ ಬೆರಲುಗಳೇ ಮುಂದಕ್ಕೆ ಬೆಳೆದುವೋ, ಆಸೆಯಿಂದ ಪಂಚೇಂದ್ರಿಯಂಗಳು ಬೆರಲ ಕೊನೆಗಳಿಗೆ ಬಂದು ಸೇರಿದುವೋ, ಎಂಬಂತೆ ಕಾಣಿಸಿದುವು. ಆಮೇಲೆ ಕಾದಂಬರಿಯು ಕಿಱುನಡುಕದಿಂದ ಹಸ್ತದ ಕಡಗಬಳೆಗಳಲ್ಲಿ ಧ್ವನಿಯುಂಟಾಗಿ ಮಾತನಾಡುವಂತಿರುವ ಕೈಗಳಿಂದ ವೀಳೆಯವ ಕೊಡುವಲ್ಲಿ ಮನ್ಮಥರಾಯನ ಅಱಿಕೆಯಲ್ಲಿ ನನ್ನನು ಊಳಿಗದವಳ ಮಾಡಿಕೊ ಎಂದು ಅಂಗೈಬೆಮರಿಂದ ತನ್ನ ತಾನೆ ಧಾರೆಯನೆಱೆದುಕೊಡುವ ಹಾಗೂ, ಇಂದುಮೊದಲಾಗಿ ನಿನ್ನಧೀನವಾಗಿದ್ದೇನೆ ಎಂದು ತನ್ನ ಪ್ರಾಣವನು ಕೈಯೆಡೆಯ ಕೊಡುವಂತೆ ಕೊಟ್ಟಳು. ಮತ್ತೊಂದು ವೀಳೆಯವನು ತೆಗೆದು ಕೊಂಡು ಮಹಾಶ್ವೇತೆಗೆ ಕೊಟ್ಟಳು.

ಆಸಮಯದಲ್ಲಿ ಶುಕಶಾರಿಕೆಗಳೆರಡು ಹಾಱಿ ಬಂದುವು. ಅದಱಲ್ಲಿ ಶಾರಿಕೆಯು ಕೋಪಗೂಡಿ ಕಾದಂಬರಿಯೊಡನೆ ನುಡಿವಲ್ಲಿ- ಅಮ್ಮಾ, ಈ ಗಿಳಿಯು ತಾನು ಚೆಂದವುಳ್ಳುದೆಂಬ ಅಹಂಕಾರದಿಂದ ನನ್ನ ಬೆಂಬಿದ್ದು ಕಾಡಿದರೂ ಏನು ಕಾರಣ ನೋಡುತಲಿದ್ದೀರಿ ? ಅಮ್ಮಾ, ಇನ್ನು ಈಗಿಳಿ ಈಬಗೆಯಲ್ಲಿ ಕಾಡುತ್ತಿರು ವುದನು ಉಪೇಕ್ಷೆಯ ಮಾಡಿದರೆ ನನ್ನ ಪ್ರಾಣಗಳನು ತೊಱೆದುಕೊಳುತ್ತ ಲಿದ್ದೇನೆ. ನಿಮ್ಮ ಪಾದದಾಣೆ ಹುಸಿಯಲ್ಲವೆನಲಾಗಿ, ಕಾದಂಬರಿಯು ಮುಗುಳು ನಗೆಗೂಡಿ ಇದ್ದಳು. ಈಪೂರ್ವೋತ್ತರವನು ಅಱಿಯದೆ ಮಹಾಶ್ವೇತೆಯು ಕೇಳಲಾಗಿ ಮದಲೇಖೆಯು ಪ್ರತ್ಯುತ್ತರವನ್ನು ಹೇಳುದುದು:— ಈಶಾರಿಕೆಗೆ

ಕಾಳಿಂದಿಯೆಂಬ ಹೆಸರು. ಇದನು ಈಪರಿಹಾಸಕನೆಂಬ ಗಿಣಿಗೆ ಕಾದಂಬರಿಯು ಮದುವೆ ಮಾಡಲಾಗಿ ಈ ಹಕ್ಕಿಗಳು ಅನ್ಯೋನ್ಯವಾಗಿದ್ದುವು ಇಂದು ಉದಯದಲ್ಲಿ ಪರಿಹಾಸಕನು ಕಾದಂಬರಿಯ ಸಂಚಿಕೆಯುದ್ಯೋಗದ ತಮಾಲಿಕೆಯೆಂಬವಳೊಡನೆ ಏಕಾಂತದಲ್ಲಿ ಏನನೋ ಮಾತನಾಡುತ ಮುದ್ದಿಸುತ್ತಿರಲಾಗಿ ಕಂಡು ಕೋಪಗೊಂಡು ಆಹೊತ್ತಿನಿಂದಲು ಈಕಾಳಿಂದಿಯು ಈಪರಿಹಾಸಕನ ಸಮೀಪಕ್ಕೆ ಸೇರಲಿಲ್ಲ; ನುಡಿಸಲಿಲ್ಲ; ನೋಡಲಿಲ್ಲ; ನಾವೆಲ್ಲರೂ ಎಷ್ಟು ಬಗೆಯಲ್ಲಿ ಒಡಂಬಡಿಸಿದರೂ ಒಪ್ಪುವುದಿಲ್ಲವೆಂದು ಮದಲೇಖೆಯು ಮಹಾಶ್ವೇತೆಗೆ ಹೇಳುತ್ತಿರಲಾಗಿ ಕೇಳಿ ಚಂದ್ರಾಪೀಡನು ಮುಸಿನಗೆಯ ನಗುತ ನುಡಿದನು- ಅಹುದು, ಈ ವೃತ್ತಾಂತವನ್ನು ನಾವು ಕೇಳಿದ್ದೇವೆ. ಈಯರಮನೆಯ ಬಾಗಿಲಲ್ಲಿ ಸಕಲವಾದವರು ಆಡಿಕೊಳುತ್ತಲಿದ್ದಾರೆ; ಹೊರಗೆಯು ಮಂದಿಗಳು ಅಲ್ಲಲ್ಲ ಹೇಳಿಕೊಳುತ್ತಲಿದ್ದಾರೆ. ಪರಿಹಾಸಕನೆಂಬ ಒಂದು ಗಿಣಿಯು ಕಾದಂಬರಿಯ ಸಂಚಿಯ ತಮಾಲಿಕೆಯ ಮೇಲಣ ಮೋಹದಿಂದ ಪ್ರೇಮಿಸಿಕೊ ಕವಲಿದ ದಿನಗಳನರಿಯದೆ ಇದೆ, ಎಂದು ದಿಕ್ಕುದಿಕ್ಕಿನಲ್ಲಿ ಕೇಳುತ್ತಲಿದ್ದೇವೆ. ಸ್ವವಿಟದ ಸ್ತ್ರೀಯನು ಬಿಟ್ಟು ವಿಪರೀತವಾಗಿ ನಡೆದುಕೊಳ್ಳುವ ಆ ಗಿಣಿಯ ಸುದ್ದಿಯಂತಿರಲಿ ಈ ಬಗೆಯ ನಡತೆಯ ನಡೆವ ಉದ್ಯೋಗದವಳನು ಕಾದಂಬರಿಯು ವಿಚಾರಿಸದೆ ಇರಬಾರದಲ್ಲ. ಈ ಕಾಳಿಂದಿಯ ಮೇಲೆ ಕಾದಂಬರಿಗೆ ಪ್ರೀತಿಯಿಲ್ಲದೆಂಬುದು ಈ ಬಗೆಯ ದುಷ್ಟನಾದ ಪರಿಹಾಸಕನಿಗೆ ಮದುವೆಯ ಮಾಡಿದಾಗಲೆ ಕಾಣಬಂದಿತು. ಈಗ ಯೋಚಿಸಿದುದರಿಂದ ತೀರುವುದೇನು? ಲೋಕದಲ್ಲಿ ಹೆಣ್ಣುಗಳಿಗೆ ಸವತಿಯುಂಟಾದರೆ ಬಹು ಕೋಪಕ್ಕೆ ಕಾರಣ; ಅದರಿಂದಲೇ ವೈರಾಗ್ಯ ಹುಟ್ಟುವುದು ಬಹು ಹೀನವಾಗಿಯೆ ಇರುವುದು. ಆದರೂ ಕಾಳಿಂದಿಯು ಬಹು ಧೈರ್ಯದಿಂದಲೆ ತಾಳಿಕೊಂಡು ರೋಷದಿಂದ ವಿಷವ ತೆಗೆದುಕೊಳ್ಳದೆ ಹಿಂಗಿಗೆ ಬಿದ್ದೆ ಇರುವುದು ಹೆಚ್ಚು. ಇನ್ನು ಇದಕ್ಕಿಂತಲು ಬೇರೆ ಹೆಣ್ಣುಗಳಿಗೆ ಅಭಿಮಾನವಿಲ್ಲ. ಹೀಗಿದ್ದರೂ ನಾಚಿಕೆಗೆಟ್ಟು ಈ ಗಿಣಿಯೊಡನೆ ಕೂಡಿತ್ತಾದರೆ ಆಗ ಇದರ ಜನ್ಮವನೆ ಸುಡಬೇಕು. ಇದರ ಮುಖವ ನೋಡುವರಾರು? ನುಡಿಸುವರಾರು? ಹೆಸರುಗೊಂಬವರಾರು?- ಎಂದು ಚಂದ್ರಾಪೀಡನು ನುಡಿಯಲಾಗಿ ಕಾದಂಬರಿ ಮುಂತಾದವರೆಲ್ಲರು ವಿನೋದದ ನುಡಿಗಳ ಭಾವಿಸುತ ನಗುತಲಿದ್ದರು. ಪರಿಹಾಸಕನೆಂಬ ಗಿಣಿಯು ಕೋಪದಿಂದ ನುಡಿಯಿತು- ಕೇಳ್ಯ ರಾಜಕುಮಾರನೆ, ಈ ರೀತಿಗೆ ನೀನು ಮೋಸವ ಮಾಡಿದರೂ ಮತ್ತಾರು ಆವ ರೀತಿಗೆ ನಗಿಸಿದರೂ ನಾನು ಮೋಸ

ಹೋಗುವುದಿಲ್ಲ. ಈ ಕಾಳಿಂದಿಯು ಈ ಬಗೆಯ ವಕ್ರೋಕ್ತಿಗಳ ಹಾಸ್ಯವನು ಬಲ್ಲಳು. ನಾವು ಅರಮನೆಯಾಸ್ಥಾನಗಳಲ್ಲಿ ತಿರುಗಿದವರು. ನಿನ್ನಗನ್ನದ ಮಾತುಗಳಿಗೆ ಇದು ಕಾಲವಲ್ಲ. ಇವಳು ಕೋಪಿಸಿಕೊಂಬುದಕ್ಕೆ ಇದು ಕಾಲ. ಇದು ಒಂದು ಪ್ರಸ್ತಾವವಹುದಲ್ಲವೆಂಬುದನು ಬಲ್ಲಳು- ಎಂದು ನುಡಿಯುತ್ತಿರಲಾಗಿ ಆ ಸಮಯದಲ್ಲಿ ಆಣ್ಣಾಗಳೊಬ್ಬನು ಬಂದು ಮಹಾಶ್ವೇತೆಯೊಡನೆ-ಅಮ್ಮಾ, ಅರಸು ಚಿತ್ರರಥನು ಅರಸಿತಿ ಮದಿರೆಯು ನಿಮ್ಮನು ಕರೆದುಕೊಂಡು ಬರಹೇಳಿದರು-ಎಂದು ನುಡಿಯಲಾಗಿ ಮಹಾಶ್ವೇತೆಯು ಕಾದಂಬರಿಯ ಮುಖವ ನೋಡಿ-ನಾನು ಅರಮನೆಗೆ ಹೋಗುತ್ತಲಿದ್ದೇನಲ್ಲ; ಈ ಚಂದ್ರಾಪೀಡನು ಆವ ಬಳಿಯಲ್ಲಿರಬೇಕು?-ಎಂದು ಕೇಳಲಾಗಿ ಕಾದಂಬರಿಯು ತನ್ನ ಹೃದಯದಲ್ಲಿ ಯೋಚಿಸುವಲ್ಲಿ, ಚಂದ್ರಾಪೀಡನು ಇರುವುದಕ್ಕೆ ಈ ಮಿತಿಯಿಲ್ಲದ ಹೆಣ್ಣುಗಳ ಎದೆಗಳೆ ಸಾಲವೆ? ಇನ್ನು ಬೇರೆಯೇತಕ್ಕೆ? ಎಂದು ಯೋಚಿಸಿ ನಗುತ ಪ್ರಕಾಶವಾಗಿ ನುಡಿವಲ್ಲಿ- ಇದೇನು ಮಹಾಶ್ವೇತೆ! ನನ್ನನ್ನು ಏನುಕಾರಣ ಕೇಳುತ್ತಲಿದ್ದೆ? ನನ್ನ ಶರೀರಕ್ಕು ನನಗೆ ಸ್ವಾತಂತ್ರ್ಯವಿಲ್ಲ. ಇನ್ನು ಮನೆಯ ಮಾತೇನು? ಇವನ ಚಿತ್ತಕ್ಕೆ ಎಲ್ಲಿ ಸರಿಬರುತ್ತಲಿದೆಯೋ ನಿನ್ನ ಮನಸ್ಸಿಗೆ ಆವ ಬಳಿ ಒಪ್ಪಿ ಇದೆಯೋ ಅಲ್ಲಿ ಇರಲಿ-ಎಂದು ನುಡಿಯಲಾಗಿ, ಆ ಮಾತನು ಕೇಳಿ ಮಹಾಶ್ವೇತೆಯು-ಆದರೂ ನೀನಿರುವ ತೊಟ್ಟಿಯೊತ್ತಿನ ಶೃಂಗಾರತೋಟದಲ್ಲಿರುವ ಕ್ರೀಡಾಪರ್ವತದ ಬಳಿಯ ಮಂಟಪವು ಏಕಾಂತವಾಗಿದೆ. ಅಲ್ಲಿ ಇರಲಿ-ಎಂದು ಹೇಳಿ ಗಂಧರ್ವರಾಯನ ಸಮೀಪಕ್ಕೆ ಹೋಗಲಾಗಿ ಆ ಮೇಲೆ ಚಂದ್ರಾಪೀಡನು ಎದ್ದು ಕಳುಹಿಸಿಕೊಳಲಾಗಿ ಕಾದಂಬರಿಯು ತನ್ನ ಆವಸರದವಳ ಕರೆದು-ಇವನಿಗೆ ವಿನೋದದಲ್ಲಿ ಹೊತ್ತು ಹೋಗುವ ನಿಮಿತ್ತವಾಗಿ ನಮ್ಮ ಸಮ್ಮುಖದ ವೀಣೆ ಸಂಗೀತ ಕೊಳಲು ಮುಂತಾದ ವಾದ್ಯಗಳ ಕೇಳಿಸುವ, ಪಗಡೆ ಚತುರಂಗವನಾಡುವ, ಪದಪದ್ಯಗಳನೋದುವ ಹೆಣ್ಣುಗಳ ಸಂಗಡಲೆ ಕಳುಹಿಸಿಬಿಡು-ಎಂದು ಕಟ್ಟುಮಾಡಿಸಿ, ಮಯೂರಕನನು ಕರೆದು-ನೀನು ಸಂಗಡಲೆ ಕ್ರೀಡಾಪರ್ವತದ ಮಣಿಮಂಟಪಕ್ಕೆ ಕರೆದುಕೊಂಡು ಹೋಗು-ಎಂದು ಕಳುಹಿಸಲಾಗಿ, ಅದೇ ಪ್ರಕಾರಕ್ಕೆ ಆವರೆಲ್ಲರು ಚಂದ್ರಾಪೀಡನ ಸಂಗಡಲೇ ಹೋದರು.

ಆ ಮೇಲೆ ಕಾದಂಬರಿಯು ತನ್ನ ಕೆಳದಿಯರು ಊಳಿಗದವರು ಮೊದಲಾದ ಹೆಣ್ಣುಗಳೆಲ್ಲರನು ಕಳುಹಿಸಿ ಒಂದೆರಡು ಆಪ್ತೆಯರಾದ ಊಳಿಗದವರು ಸಹ ತಾನಿರುವ ಉಪ್ಪರಿಗೆಗೆ ಬಂದು ಅಲ್ಲಿ ಒಬ್ಬರೊಂದಿಗೂ ಮಾತನಾಡದೆ ಹಾಸಿ

ಕೆಯ ಮೇಲೊಱಗಿಕೊಂಡಿರಲಾಗಿ ಆಪ್ರೋಱಗದ ಹೆಣ್ಣುಗಳು ಭಯದಿಂದ ಸದ್ದು ಮಾಡದೆ ದೂರದೂರದಲ್ಲಿ ನಿಂತುಕೊಂಡಿದ್ದರು. ಆ ಸಮಯದಲ್ಲಿ ಕಾದಂಬರಿಯನು, ನೀನು ಚಂದ್ರಾಪೀಡನ ಕಂಡು ಪದಱಿ ಇದೇನ ತೊಡಗಿದೆ ಎಂದು ಲಜ್ಜೆಯು ನಿಗ್ರಹಿಸುತ್ತಲಿರುವುದು; ಅರಸಿನ ಮಗಳಾದ ನಿನಗೆ ಇದು ತರವೇ ಎಂದು ನೀತಿಯು ನುಡಿಯುತ್ತಿರುವುದು; ನಿನ್ನ ಆಜೀವ್ರತನೆಲ್ಲ ಹೋಯಿತೆಂದು ಬಾಲ್ಯವು ಪರಿಹಾಸಕವ ಮಾಡುತಿರುವುದು; ಕುಲವೆಣ್ಣುಗಳಿಗೆ ಇದು ನಡತೆಯಲ್ಲವೆಂದು ಬುದ್ಧಿಯು ನಿಂದಿಸುತ್ತಿರುವುದು; ಚಿತ್ತಂಪಿಸಲ್ಲಿದೋ ಮನ್ಮಥಪರವಶವಾಗುವುದು ಬಹು ಲಘುತ್ವವಾಗುವುದೆಂದು ಸಹಸೀತವು ಎಚ್ಚರಿಸುತ್ತಿರುವುದು; ನಿನಗೆ ಇಷ್ಟೊಂದು ಕದುಬು ಎತ್ತಣಿಂದ ಬಂದಿತೆಂದು ಧೈರ್ಯವು ಬೆದರಿಸುತ್ತಿರುವುದು; ನೀನು ಮನಬಂದ ರೀತಿಗೆ ನಡೆದು ಕೊಂಡೆಯಲ್ಲದೆ ನನ್ನನ್ನು ನೋಡದೆ ಹೋದೆಯಲ್ಲ ಎಂದು ಕುಲಾಚಾರವು ನೊಂದುಕೊಳ್ಳುತ್ತಿರುವುದು. ಆ ಸಮಯದಲ್ಲಿ ಕಾದಂಬರಿಯು ತನ್ನ ಮನಸ್ಸಿನಲ್ಲಿಯೆ ಚಿಂತಿಸಿದಳು. ನಾನು ಆ ಸಮಯದಲ್ಲಿ ಒಂದನೂ ಯೋಚಿಸದೆ ಸ್ವೇಚ್ಛೆಯಿಂದ ಕದುಬ ನಡೆದುಕೊಂಡೆನು. ಇವನು ಹೊಸಬನು ಎಂದು ಚಿಂತಿಸದೆ ಸಾಹಸವ ಮಾಡಿದೆನು. ಇವನು ಅಲ್ಪಬುದ್ಧಿಯವಳು ಎಂದು ತಿಳಿದಾನು ಎಂಬುದನು ಎಣಿಸದೆ ಲಜ್ಜೆಯನು ತೊರೆದೆನು. ಇವನ ಮನೋಧರ್ಮವೇನೆಂದು ಪರೀಕ್ಷಿಸದೆ ಅಭ್ಯಾಸಿಯಾದೆನು. ನನ್ನನು ಉದಾಸೀನವ ಮಾಡುವನು ಎಂದು ಅಂಜದೆ ಹೋದೆನು. ತಂದೆತಾಯಿಗಳಿಗೂ ಅಳುಕದೆ ಹೋದೆನು. ಮಹಾಶ್ವೇತೆಯು ದುಃಖಿತೆಯಾಗಿರುವಾಗ ನಾನು ಈರೀತಿಗೆ ನಡೆಯಬಾರದೆಂಬ ದಾಕ್ಷಿಣ್ಯವಿಲ್ಲದೆ ಹೋಯಿತು. ಬಳಿಯಲ್ಲಿರುವ ಕೆಳದಿಯರು ಕಂಡಾರೆಂಬ ಅಳುಕು ಇಲ್ಲದೆಹೋಯಿತು. ಒಳಗಿರುವ ಊಳಿಗದವರು ತಿಳಿದಾರೆಂಬ ಭಯವು ಇಲ್ಲದೆ ಹೋಯಿತು. ಜನರು ಆಡಿಯುವವರು ನೋಡಲಾಗಿಯು ಇಂದಿಗೆ ನಾನು ಇದ್ದ ಬಗೆಯ ತಿಳಿದುಕೊಂಬರು. ಈ ಪುತ್ರವೇದನೆಯನ್ನು ಅನುಭವಿಸಿರುವ ಮಹಾಶ್ವೇತೆಯನು ಕೇಳುವುದೇನು? ಆದಾಗಲೂ ಅರಮನೆಯುಳ್ಳವರು ತಿರುಗಿ ಎಲ್ಲರ ಇಂಗಿತವನು ತಿಳಿವುದಲ್ಲ ಕೆಳದಿಯರ ಹೇಳುವುದೇನು? ನಾನು ಬಲು ನೋಯಿಸ ಹೋದೆನು; ನಾಚಿಕೆಗೆಟ್ಟು ಬದುಕುವುದಕ್ಕಿಂತಲು ಮರಣವೆ ಲೇಸು; ಈ ವರ್ತಮಾನವನ್ನು ಕೇಳಿ ತಂದೆ ಏನೆಂಬರೋ? ತಾಯಿಯೇನೆಂಬಳೋ? ಮಿಕ್ಕ ಗಂಧರ್ವರೇನೆಂಬರೊ? ಇನ್ನೇನ ಮಾಡುವೆನು? ಇದಕ್ಕೆ ಪ್ರತೀಕಾರವಾವುದು? ಆವ ಉಪಾಯದಿಂದ ಈ ದೋಷವನು ಪರಿಹರಿಸಿಕೊಂಬೆನು? ನನ್ನ ಇಂದ್ರಿಯಗಳ

ಚಾಪಲ್ಯವನು ಆರಿಗೆ ಹೇಳುವೆನು ? ಈಚೆಂದದ ಮನಸಿನ ಬಾಧೆಗೆ ಆವ ಬಟ್ಟೆಗೆ ಹೋಗುವೆನು. ಅಂದಿಗೆ ಮಹಾಶ್ವೇತೆಯಿಲ್ಲದೆ ಇದ್ದಾಗ ಆಬಗೆಯಲ್ಲಿ ಆಣೆಯನಿಕ್ಕಿ ಕೊಂಡೆನು. ಕೆಳದಿಯರ ಮುಂದೆಲ್ಲ ಆಬಗೆಯಲ್ಲಿ ನುಡಿದುಕೊಂಡೆನು. ಮಯೂರಕನ ಕೈಯಲ್ಲಿ ಆಬಗೆಯಲ್ಲಿ ಹೇಳಿ ಕಳುಹಿಸಿದೆನು. ಇಂದು ನನ್ನ ವಿಧಿಯಿಂದಲೋ ಈದ್ರೋಹಿಯಾದ ಮನ್ಮಥನಿಂದಲೋ ಪೂರ್ವದಲ್ಲಿ ಮಾಡಿದ ಅದೃಷ್ಟದಿಂದಲೋ ಈಪಾಪಿ ಚಂದ್ರಾಪೀಡನು ಇಲ್ಲಿಗೇತಕ್ಕಿಂದ ಬಂದನೋ ಅರಿಯೆನು. ಒಂದು ದಿನವೂ ಕಾಣದೆ ಕೇಳದೆ ಅರಿಯದೆ ನೆನೆಯದೆ ಎತ್ತಣಿಂದಲೋ ಆಶ್ಚರ್ಯವಾಗಿ ನನ್ನನ್ನು ಅಚ್ಚಿಯಮಾಡುವುದಕ್ಕೆ ಬಂದನು. ಇವನ ಕಂಡಮಾತ್ರದಲ್ಲಿಯೇ ನನ್ನ ಪಂಚೇಂದ್ರಿಯಗಳ ಮನ್ಮಥಪಂಜರದಲ್ಲಿ ಕೂಡಿ ಒಪ್ಪಿಸಿದಂತೆ ಮನ್ಮಥನು ಊಳಿಗದಸಳಾಗಿ ಕೊಟ್ಟಂತೆ, ನನ್ನ ಅನುರಾಗವು ಅವನ ಗುಣಗಳಿಗೆ ನನ್ನನೆ ಕ್ರಯಕ್ಕೆ ಮಾರಿದಂತೆ ವಶವಾದೆನು. ದೈವಯತ್ನದಿಂದ ಒಂದುವೇಳೆ ಬಂದು ಸುಖಿದಂಥವನಿಂದ ನನಗೆ ಪ್ರಯೋಜನವೇನು ಎಂದು ನಿಶ್ಚಯವ ಮಾಡಿಕೊಂಡಳು. ಅಕ್ಷಣದಲ್ಲಿಯೇ ಅವಳ ಹೃದಯದಲ್ಲಿರುವ ಚಂದ್ರಾಪೀಡನು ಇವಳಿಂದ ಪ್ರಯೋಜವಿಲ್ಲದ ಬಳಿಕ ನಾನು ಇಲ್ಲಿ ಏತಕ್ಕೆ ಇರಬೇಕು ಎಂದು ಎಂದಂತೆ ಅವಳೆದೆಯಲ್ಲಿ ನಡುಕ ಹುಟ್ಟಿತು. ಇಂತಹವನನು ಬಿಡುವ ಯೋಚನೆ ಹುಟ್ಟಿದಮೇಲೆ ನಾವು ಇವಳ ಸೇರಿ ಇರಬಾರದು ಎಂದು ಪ್ರಾಣಗಳು ಹೊರಟು ಕೊರಲ ಸೇರಿದುವು. ವಿವೇಕವಿಲ್ಲದಿದ್ದ ಕಾದಂಬರಿಯೆ ಕೇಳು, ಇಂಥವನ ಬಿಡಬಹುದೋ ಬಾರದೋ ಎಂದು ಇನ್ನೊಂದು ವೇಳೆ ಕಣ್ಣ ತೆರೆದುಕೊಂಡು ನೋಡು ಎಂದು ಕಟ್ಟುಮಾಡಿಸಿದಂತೆ ಕಂಬನಿಗಳು ತುಳುಕಿದುವು. ನಿನ್ನ ಧೈರ್ಯದೊಡನೆ ಪ್ರಾಣಗಳ ತೊಲಗಿಸುತಲಿದ್ದೇನೆ ಎಂದು ಮನ್ಮಥನು ಬೆದರಿಸಿದನು. ಆಮೇಲೆ ಮನಸ್ಸನು ಹಿಡಿದಿರಲರಿಯದೆ ಚಂದ್ರಾಪೀಡನನೆ ಧ್ಯಾನಿಸುತ್ತ ಎದ್ದು ಗವಾಕ್ಷದ ಬಾಗಿಲಿನಲ್ಲಿ ಕ್ರೀಡಾಪರ್ವತವನೆ ನೋಡುತ್ತ ಚಂದ್ರಾಪೀಡನನು ಕಣ್ಣುಗಳಿಂದ ನೋಡಿದರೆ ಆನಂದಬಾಷ್ಪವು ಅಡ್ಡವಾಗುತಲಿದೆ ಎಂದು ಪದರಿದಂತೆ ನೆನಪಿನಿಂದಲೆ ನೋಡಿದಳು. ಕೈಯಲ್ಲಿ ಭಾವಚಿತ್ರವ ಬರೆದರೆ ಕೈಯ ಬೆವರಿನಿಂದ ಅಳಿಸೀತು ಎಂದು ಭಾವದಲ್ಲಿಯೇ ಬರೆದುಕೊಂಡಳು. ಶರೀರದಿಂದಾಲಿಂಗನವ ಮಾಡಿಕೊಂಡರೆ ರೋಮಾಂಚವಡ್ಡವಾಗುತಲಿವೆ ಎಂದು ಅವನಬಳಿಗೆ ತನ್ನ ಮನಸ್ಸನ್ನು ಕಳುಹಿಸಿದಳು.

ಚಂದ್ರಾಪೀಡನು ಕ್ರೀಡಾಪರ್ವತದ ಬಳಿಯಲ್ಲಿ ಬಂದು ಮನೆಯಲ್ಲಿ ಕಲ್ಲ ಮಂಚದಮೇಲೆ ಸೂರ್ಯಪುಟದ ಸುಪ್ಪತ್ತಿಗೆಯಲ್ಲಿ ಒರಗಿನಮೇಲೆ ಒರಗಿಕೊಂಡು

ಮಯೂರಕನ ತೊಡೆಯಮೇಲೆ ಕಾಲ ನೀಡಿಕೊಂಡು ಸಂಗಡ ಬಂದ ಕಾದಂಬರಿಯ ಸಖಿಯರನ್ನು ಕೆಲದಲ್ಲಿ ಕುಳಿತುಕೊಳ್ಳಹೇಳಿ ತನ್ನ ಮನಸ್ಸಿನಲ್ಲಿ ಚಿಂತಿಸಿದನು: ಈ ಕಾದಂಬರಿಯ ವಿಲಾಸಗಳು ಸಹಜವೋ, ಅಲ್ಲದಿದ್ದರೆ ಮನ್ಮಥ ನನಗೆ ಪ್ರಸನ್ನ ನಾಗಿ ಉಂಟುಮಾಡಿದುವೋ! ಕರಿಯಾಲಿ ಒಂದುಪಾಲು ಕಡೆಗಣ್ಣಿನಲಿ ಸಿಲ್ಕಿ ಮೂಡಿಪಾಲು ನೋಟದಿಂದ ನೋಡುವಲ್ಲಿ ಮನ್ಮಥನೆಚ್ಚ ಲರಂಬಿನ ಧೂಳುಬಿದ್ದಂತೆ ಕಿಡಿಗಣ್ಣುಬಿದ್ದು ಓರೆನೋಟದಿಂದ ನೋಡುವಳು. ನಾನು ನೋಡಿದರೆ ಲಜ್ಜೆ ಯಿಂದ ಮುಖಕ್ಕೆ ದುಕೂಲವ ಮಱೆಮಾಡುವಂತೆ ಮುಗುಳುನಗೆಯ ಕಾಂತಿಯ ಪಸರಿಸುವಳು. ತನ್ನ ಕದಪುಗಳೆಂಬ ಕನ್ನಡಿಯಲ್ಲಿ ನನ್ನ ಪ್ರತಿಬಿಂಬವ ತೋಱ ಬೇಕೆಂಬ ಆಸೆಯಿಂದ ಲಜ್ಜೆಯೆಂಬ ನೆವದಿಂದ ಮುಖವ ತಿರುಹುವಳು; ಎಂದು ಈ ರೀತಿಯಲ್ಲಿ ಆಸೆಗೂಡಿ ಯೋಚಿಸುತ್ತ ಮತ್ತೆ ಬೇಱೆ ನಿರಾಶೆಯಲ್ಲಿ ಯೋಚಿಸಿದನು. ಲೋಕದಲ್ಲಿ ಮನುಷ್ಯರ ಬುದ್ಧಿ ಅಲ್ಪವಾದುದು. ಕಾದಂಬರಿಯ ಮನೋರಥ ದಿಂದ ನನ್ನ ಮನಸ್ಸು ಮೋಸಹೋಯಿತು. ಯೌವನವೆಂಬುದು ಎಂತಹರನು ವಿವೇಕಗೆಡಿಸಿ ಮೈಮಱೆಯಿಸುತಿದೆ. ಮನ್ಮಥವಿಕಾರವೆಂಬುದು ಕತ್ತಲೆಯಂತೆ ಅಲ್ಪವಾದ ವಸ್ತುವನು ಘನವೆನಿಸಿ ತೋಱಿಸುತ್ತದೆ. ಯೌವನಕಾಲದಲ್ಲಿ ಒಂದಿಷ್ಟು ಸ್ನೇಹವುಂಟಾದರು ನೀರಮೇಲೆ ಬಿದ್ದ ಎಣ್ಣೆಯಂತೆ ಎಲ್ಲ ಕಡೆಯನು ವ್ಯಾಪಿಸುವುದು. ಚಾಪಲ್ಯವೆಂಬುದು ಕವಿಗಳ ಹೃದಯದಂತೆ ನಾನಾಬಗೆಯ ಯೋಚನೆಗಳಿಂದ ಆವಾವ ಅರ್ಥವನು ಕಲ್ಪಿಸದು? ಯೌವನಸ್ಥರ ಮನಸ್ಸು ಆವಾವ ಚಿತ್ರವ ಬರೆಯದು? ನಾನು ಚೆಂದವುಳ್ಳವನೆಂಬಹಂಕಾರವು ಆವವರು ತನ್ನ ಬಯಸಿ ಬಾರದೆ ಇದ್ದಾರು ಎಂದು ಯೋಚಿಸುವುದು. ಮನೋರಥ ವೆಂಬುದು ಕನಸ್ಸಿನಂತೆ ಆಗದುದನೆ ಆಗಮಾಡಿ ತೋಱುವುದು. ಆಸೆಯೆಂಬುದು ಇಂದ್ರಜಾಲವಿದ್ಯೆಯಂತೆ ಇಲ್ಲದ ವಸ್ತುಗಳನು ಮುಂದೆ ತಂದು ನಿಲಿಸುವುದು. ಆದಱಿಂದ ಈರೀತಿಯಲ್ಲ ಬಱಿದೆ ಕೋಟಲೆಗೊಂಡು ಹಲವು ತೆಱದಲ್ಲಿ ಯೋಚಿಸಿ ಫಲವೇನು? ಇವಳಿಗೆ ನನ್ನಲ್ಲ ಪ್ರೀತಿಯುಂಟು ಇಲ್ಲ ಎಂಬುದು ಮನ್ಮಥನಿಂದಲೇ ನಿಗದಿಯಾಗುತಿದೆ-ಎಂದು ನಿಶ್ಚಯಿಸಿ ಎದ್ದು ಕುಳಿತುಕೊಂಡು ಕೆಲವು ಹೊತ್ತು ಪಗಡೆ ಚದುರಂಗವನಾಡುತ, ಕೆಲವು ಹೊತ್ತು ವೀಣೆ ಸಂಗೀತಗಳ ಕೇಳುವಲ್ಲಿ ಸ್ವರಸಂದೇಹಗಳಿಗೆ ವಾದಿಸಿ ನಿರ್ಣಯಗಳ ಮಾಡುತ, ಕೆಲವು ಹೊತ್ತು ಸಾಹಿತ್ಯ ಪ್ರಸಂಗದಲ್ಲ ವಿನೋದದಲ್ಲಿದ್ದು ಆಮೇಲೆ ಶೃಂಗಾರದ ತೋಪಿನ ಅಂದವ ನೋಡ ಬೇಕೆಂದು ಕ್ರೀಡಾಪರ್ವತವನೇಱಿದನು.

ಆಗ ಕಾದಂಬರಿಯು ಮಹಾಶ್ವೇತೆಯು ಬಹು ಹೊತ್ತಾಗಿ ಬರಲಿಲ್ಲವೆಂದು ನೋಡುವ ನೆವದಿಂದ ಗವಾಕ್ಷದ ಬಾಗಿಲ ಬಳಿಯಿಂದೆದ್ದು ಮಿತಪರಿಜನದಲ್ಲಿ ಸಜ್ಜೆಯ ಮೇಲಂತಸ್ತಿಗೆ ಹೋಗಿ ಅಲ್ಲಿ ಬಿಳಿಯ ಸತ್ತಿಗೆಯ ನೆಳಲಲ್ಲಿ ಉಭಯ ಚಾಮರವ ಬೀಸಿಕೊಳುತ ನಿಂತು ಚಂದ್ರಾಪೀಡನ ನೋಡುವಲ್ಲಿ ಒಂದಿಷ್ಟುಹೊತ್ತು ಸತ್ತಿಗೆಯ ಚಿನ್ನದ ಕಾವಿನಮೇಲೆ ಕೈಯನಿರಿಸಿಕೊಂಡು ನೋಡುತ್ತ, ಒಂದಿಷ್ಟು ಹೊತ್ತು ಬೀಸುವ ಚಾಮರದ ಕೊನೆಯನೆಳೆದುಕೊಳುತ್ತ, ಕೆಲವುಹೊತ್ತು ಸಂಚಿಯವಳ ಭುಜದಮೇಲೆ ಕೈಯನಿರಿಸಿಕೊಂಡು ಕಡೆಗಣ್ಣಿನಿಂದ ನೋಡುತ್ತ, ಕೆಲವು ಹೊತ್ತು ಮೈಮುಱಿದು ನೋಡುತ್ತ, ಕೆಲವುಹೊತ್ತು ಕಟ್ಟಿಗೆಯವಳ ಕೈಯ ಚಿನ್ನದ ಬೆತ್ತದ ಮೇಲೆ ಗಲ್ಲವನೂಱಿಕೊಂಡು, ಕೆಲವು ಹೊತ್ತು ಸಂಚಿಯವಳು ಕೊಟ್ಟ ವೀಳೆಯದ ಗಳಿಗೆಯನು ಮುಂಬಲ್ಲಿಂದೊತ್ತುತ, ಮೈಮಱೆಯುತ, ಕೆಲವು ಹೊತ್ತು ಕೈಯಲಿರುವ ತಾವರೆಯ ಹೂವಿನ ಪೆಟ್ಟಿಗೆ ಓಡುವ ಕೆಳದಿಯರ ಉರುಬಿ ನಗುತ್ತ, ಈರೀತಿಯಲ್ಲಿ ಅವನನು ನೋಡುತ್ತ, ಅವನ ಕಣ್ಣಿಗೆ ಕಾಣಿಸಿಕೊಳುತ್ತ, ಹೋದ ಹೊತ್ತನಱಿಯದೆ ಆಮೇಲೆ ಮಹಾಶ್ವೇತೆ ಬಂದ ಸುದ್ದಿಯ ಕೇಳಿ, ಸಜ್ಜೆಯಿಂದಿೞಿದು ತನಗೆ ಒಂದಱಿಲ್ಲಿಯು ಅಪೇಕ್ಷೆಯಿಲ್ಲದಿದ್ದರು ಮಹಾಶ್ವೇತೆಗೆ ಪ್ರೀತಿಯಾಗಿ ಸ್ನಾನಭೋಜನಗಳ ಮಾಡಿದಳು.

ಚಂದ್ರಾಪೀಡನು ಕ್ರೀಡಾಪರ್ವತದಿಂದಿೞಿದು ಆಬಳಿಯಲಿ ಸ್ನಾನ ಮಾಡಿಕೊಂಡು ಕಾದಂಬರಿಯು ಕಳುಹಿದ ಪಂಚಭಕ್ಷ್ಯಪರಮಾನ್ನಗಳನು ಊಟ ಮಾಡಿದಮೇಲೆ ಕ್ರೀಡಾಪರ್ವತದ ಮೂಡಣ ದಿಕ್ಕಿನಲ್ಲಿ ಹುಲ್ಲೆಗಳು ಮಲಕು ಮಾಡಿದಾಗ ಬಿದ್ದ ನೊರೆಗಳಿಂದ ನನೆದು, ಹೆಣ್ಣುಗಳ ಅಂಗಾಲ ಅಲತಗೆಯ ರಸದಿಂದ ಕೆಂಪುವಡೆದು, ಹೂಗಳ ಧೂಳಿಗಳಿಂದ ಮಬ್ಬುವಡೆದು, ನವಿಲುಗಳ ನಾಟಕಶಾಲೆಯೆನಿಸುವ ಹೊದಱುವನೆಯಲ್ಲಿ ಪಚ್ಚೆರತ್ನದ ಜಗಲಿಯಮೇಲೆ ಕುಳಿತು ಕೊಂಡು, ಬಲುಬಿಳಿದಾಗಿ ಸಕಲವಸ್ತುಗಳನು ಬಿಳಿದೆನಿಸಿ ತೋಱುವುದೊಂದು ಕಾಂತಿಯನು ಕಂಡು-ಇದೆತ್ತಣಿಂದ ಬರುತ್ತದೆ? ಆವ ವಸ್ತುವಿನ ಕಾಂತಿಯೆಂದು, ಆರಯ್ದು ನೋಡುತ, ಮುಂಭಾಗದಲ್ಲಿ ಉಭಯಚಾಮರಗಳ ಬೀಸಿಸಿ ಕೊಳುತ್ತ, ಬಿಳಿಯಸತ್ತಿಗೆಯ ನೆಳಲಿನಲ್ಲಿ ಕಾದಂಬರಿಯ ಕಟ್ಟಿಗೆಯವಳ ಕೈಲಾಗ ತೆಗೆದು ಕೊಂಡು, ಬಲುಮಂದಿ ಹೆಣ್ಣುಗಳು ಸಹ ಬರುವ ಮದಲೇಖೆಯನು, ಸುಯ್ಲು ಗಾಳಿಗೆ ನಡುಗುತ ಹಾವಿನ ಸೋಲೆಯಂತೆ ಲಘುವಾದ ಹೊದಕೆಯನು ತರು ವಂತಪ ಮಯೂರಕನನು, ಹೂಗಂದಗಳ ತರುವ ತಮಾಲಿಕೆಯನು, ಅವಳ

ಬತ್ತಿನಲ್ಲಿ ಚಿನ್ನದ ತಟ್ಟೆಯಲ್ಲಿ ಹಾಸಿದ ಬಿಳಿಯ ವಸ್ತ್ರದಮೇಲೆ ಅತಿಶುಭ್ರವಾದ ಕಂಠಮಾಲೆಯನು ತರುವ ತರಳಿಕೆಯನು ಕಂಡು, ಈಪಸರಿಸುವ ಬಿಳಿಯಕಾಂತಿ ಈಕಂಠಮಾಲೆಯದು ಎಂದು ನಿಶ್ಚಯಿಸಿ, ಬಂದ ಮದಲೇಖೆಗೆ ಉಚಿತೋಪ ಚಾರದಲ್ಲಿ ಇದಿರೆದ್ದು ಕುಳ್ಳಿರಿಸಿಕೊಂಡನು. ಅವಳು ಪಚ್ಚೆಯ ಜಗತಿಯಮೇಲೆ ಒಂದಿಷ್ಟುಹೊತ್ತು ಕುಳಿತಿದ್ದು ಆಮೇಲೆ ಎದ್ದು ಅಪರಿಮಳಗಂದವನು ಲೇಪಿಸಿ ಕಂಠಮಾಲೆಯನು ಕೈಯಲ್ಲಿ ತೆಗದು—ಅಯ್ಯಾ ! ನಿಮ್ಮ ಮೃದುಗುಣವೆಂಬುದು ಆರ ಮನಸ್ಸಿಗೆ ಪ್ರೀತಿಯ ಮಾಡದು ? ನಿಮ್ಮ ವಿನಯವು ಆರನು ಹೇಳುದ ಹಾಗೆ ಕೇಳಿಸದು ? ಈ ಆಕಾರದಿಂದ ನೀವು ಆರ ಪ್ರಾಣಗಳಿಗೆ ಸ್ವಾಮಿಯಲ್ಲ ? ನಿಮ್ಮ ಚರಿತವು ಆರನು ತನ್ನವರು ಎನಿಸದು ? ನಿಮ್ಮ ಮೃದುವಾದ ಸದ್ಗುಣಗಳು ಆರಿಗೆ ನಂಬುಗೆಯನುಂಟುಮಾಡವು ? ನಿಮ್ಮ ಆಕಾರವು ನೋಡಿದಮಾತ್ರದಲ್ಲಿಯೇ ವಿಶ್ವಾ ಸವನುಂಟುಮಾಡುವುದಱಿಂದ ನಮ್ಮ ನಡತೆಗಳೆಲ್ಲ ಉಚಿತವೆನಿಸುವುವು; ಹಾಗಿಲ್ಲದೆ ಇದ್ದರೆ, ನಿಮ್ಮಂತಹ ಮಹಾನುಭಾವನು ನಮ್ಮ ಮಾತನಾಡಿಸುವುದೆ ಉಬ್ಬಿಸಿ ಕಂಡಹಾಗೆ ಆಗುವುದು; ಆದರಿಸಿದರೂ ಪ್ರಭುತನದ ಗರ್ವವೆನಿಸಿ ತೋಱುವುದು; ಸ್ತೋತ್ರವ ಮಾಡಿದರೂ ನಮ್ಮ ಪಾಂಡಿತ್ಯವನು ಮೆಚ್ಚಿಸಿದಹಾಗಾಗುವುದು; ಉಪಚಾರವ ಮಾಡಿದರೆ ಸೇವಕನೆಂದು ಕಂಡಹಾಗೆ ಆಗುವುದು; ಬಿನ್ನಹಮಾಡಿ ಕೊಂಡರೆ ಧಾರ್ಷ್ಟಿಕವೆಂಬಹಾಗೆ ತೋಱುವುದು; ಊಳಿಗವ ಮಾಡಿದರೆ ಚಾಪಲ್ಯವೆನಿಸುವುದು; ಕೊಟ್ಟರೆ ಅಪಮಾನವ ಮಾಡಿದಹಾಗೆ ಆಗುವುದು; ಕೊಡಬೇಕಾದರೂ ತಾನಾಗಿ ಹೃದಯವನೆ ತೆಗೆದುಕೊಂಬ ಪಾಟಿಯವನಿಗೆ ನಾನಾಗಿ ಕೊಡತಕ್ಕ ವಸ್ತುವೇನು ? ಮುಂಚಿತಾಗಿಯೆ ನಮ್ಮ ಬಳಿಗೆ ಬಂದ ಈಉಪಕಾರಕ್ಕೆ ಪ್ರತ್ಯುಪಕಾರವಾವುದು ? ಕಣ್ಣಿಗೆ ಸಂಧಿಸಿದ ಮಾತ್ರಕ್ಕೆ ನಮ್ಮ ಜೀವವ ಸಫಲವ ಮಾಡಿದಂತಹ ನಿಮಗೆ ಇಲ್ಲಿಗೆ ಬಂದುದಕ್ಕೆ ನಾವು ಆವ ಫಲವ ನುಂಟುಮಾಡೇವು ? ಆದರೂ ಇದೊಂದು ನೆವದಿಂದ ಕಾದಂಬರಿಯು ತನಗೆ ಪ್ರೀತಿಯುಂಟು ಎಂಬುದನು ಕಾಣಿಸುತಿದ್ದಾಳೆ; ಅಲ್ಲದೆ ತನ್ನ ಐಶ್ವರ್ಯವನ್ನು ಮೆಱೆವುದಿಲ್ಲ. ಒಡನೆ ವಸ್ತು ಉಂಟಾದುದಕ್ಕೆ ಸತ್ಪುರುಷರ ಅಧೀನವ ಮಾಡು ವುದೇ ಉಚಿತ. ಆದರೆ ಅದಂತಿರಲಿ. ಈಕಾದಂಬರಿಯ ಮನಸ್ಸಿನಲ್ಲಿ ನಿನ್ನಂ ತಹವನಿಗೆ ಊಳಿಗವ ಮಾಡುವುದೀಗ ಆಶ್ಚರ್ಯವೆಂದು ತಿಳಿದಿದೆ; ತನ್ನ ಶರೀರ ವನು ನಿಮಗೆ ಸಮರ್ಪಣೆಯ ಮಾಡಿದರೆ ತನಗೆ ಪಶ್ಚಾತ್ತಾಪವಿಲ್ಲದಿರುವುದು ಎಂದು ಎಣಿಸಿದ್ದಾಳೆ. ನಿಮ್ಮಂತಹ ದೊಡ್ಡವರ ನಡತೆಯೆಂಬುದು ಪ್ರೀತಿಯಾಗಿ

ದ್ದರೂ ಬೇಡಿಕೊಂಡುದನು ಮೀಱಿಲಱಿಯದ ದಾಕ್ಷಿಣ್ಯ ಮಿಂಚಿ ಇರುವುದು. ಉತ್ತಮರಿಗೆ ತಾವು ಕಿಱಿದಾಗಿ ಕೊಡುವಲ್ಲಿ ಉಂಟಾಗುವ ಲಜ್ಜೆ ತಾವು ಒಬ್ಬರ ಬೇಡುವಾಗ ಮೊದಲಾಗಿಯು ಇಲ್ಲ. ಕಾದಂಬರಿಯು ಇದೊಂದು ಕಾರ್ಯವ ಯೋಚಿಸಿ ಬಲುತಪ್ಪನ್ನು ಮಾಡಿದವಳಂತೆ ಬಹು ಸಂಕೋಚಪಡುತ್ತಲಿದ್ದಾಳೆ. ಈಕಂಠಮಾಲೆಯು ಸಮುದ್ರಮಥನವಂ ಮಾಡಿ ತೆಗೆದ ರತ್ನಗಳಲ್ಲಿ ಒಂದೆ ಉೞಿದಿರಲಾಗಿ ಅದಱಿಂದಲೇ ಇದಕ್ಕೆ ಅನ್ವರ್ಥವಾಗಿ ಶೇಷನೆಂಬ ಹೆಸರಾಯಿತು. ಇದನ್ನು ಸಮುದ್ರರಾಜನು ವರುಣನಿಗೆ ಕೊಟ್ಟನು. ಆವರುಣನು ಗಂಧರ್ವ ರಾಜನಿಗೆ ಕೊಟ್ಟನು. ಅವನು ಈಕಾದಂಬರಿಗೆ ಕೊಟ್ಟನು. ಚಂದ್ರನ ಧರಿಸು ವುದಕ್ಕೆ ಆಕಾಶವೇ ಯೋಗ್ಯವಲ್ಲದೆ ಭೂಮಿ ಯೋಗ್ಯವಲ್ಲವೆಂದು ನಿಮ್ಮ ರೂಪಿಗೆ ಉಚಿತವಾದ ಈಕಂಠಮಾಲೆಯನು ಈಕಾದಂಬರಿಯು ನಿಮಗೆ ಕಳುಹಿಸಿ ಇದ್ದಾಳೆ. ನಿಮ್ಮಂತಹರ ಶರೀರಕ್ಕೆ ನಿಜವಾದ ಸದ್ಗುಣಗಳೆ ಭೂಷಣವಲ್ಲದೆ ಒಡವೆಗಳು ಮೈಗೆ ಜಡವಲ್ಲದೆ ಭೂಷಣವಲ್ಲ. ಹಾಗಾದರೂ ಕಾದಂಬರಿಯ ಪ್ರೀತಿಯಿಂದ ಧರಿಸಿಕೊಳ್ಳತಕ್ಕದು. ಶ್ರೀಮನ್ನಾರಾಯಣನು ಮಹಾಲಕ್ಷ್ಮಿಯೊಡನೆ ಜನಿಸಿತು ಎಂಬ ಬಹುಮಾನದಿಂದ ಕೌಸ್ತುಭವೆಂಬ ಕಲ್ಲನ್ನು ವಕ್ಷಸ್ಸ್ಥಳದಲ್ಲಿ ಧರಿಸಲಿಲ್ಲವೆ? ನೀವೇನಾದರೂ ಆನಾರಾಯಣನಿಗೆ ಕಡಮೆಯವರಲ್ಲವಲ್ಲ! ಈಹಾರವು ಕೌಸ್ತು ಭಕ್ಕೆ ಕಡಮೆಯದಲ್ಲ. ಈಕಾದಂಬರಿಯು ಮಹಾಲಕ್ಷ್ಮಿಗೆ ಕಡಮೆಯವಳಲ್ಲ. ಅದಱಿಂದ ಇದು ಒಪ್ಪುಗೊಳತಕ್ಕುದು. ಇದಱಲ್ಲಿ ಇಷ್ಟು ಪ್ರೀತಿಗೆ ಕಾರಣ ವೇನು ಎಂದು ಉಪೇಕ್ಷೆಯ ಮಾಡಿದರೆ ಅದಱಿಂದ ಕಾದಂಬರಿಯ ಮನಸ್ಸು ಮುಱಿದು ಮಹಾಶ್ವೇತೆಯನು ಬಹುಬಗೆಯಲ್ಲಿ ನುಡಿದು ತಾನು ಜೀವವನು ತೊಱೆದುಕೊಂಬಳು. ಅದನು ತಿಳಿದು ಮಹಾಶ್ವೇತೆಯು ಈಹಾರವನು ತರಳಿಕೆಯ ಕೈಯಲ್ಲಿ ಕೊಟ್ಟು ಕಳುಹಿಸುವಲ್ಲಿ ಭದ್ರವಾಗಿ ಹೇೞಿಕಳುಹಿಸಿದಾಳೆ. ನೀವು ಈಕಾದಂಬರಿಯ ಪ್ರೀತಿಗೆ ಉತ್ಸಾಹಭಂಗಮಾಡುವುದು ಉಚಿತವಲ್ಲವೆಂದು ಹೇೞಿ, ಮಹಾಮೇರುವಿಗೆ ನಕ್ಷತ್ರಮಂಡಲದಂತೆ ಅವನ ಎದೆಗೆ ಕಂಠಮಾಲೆ ಯನು ಅಲಂಕರಿಸಿದಳು.

ಆಗ ಚಂದ್ರಾಪೀಡನು ಆಶ್ಚರ್ಯಪಡುತ ನುಡಿದನು:— ನಾನೇನೆಂದು ನುಡಿವೆನು! ನೀನು ಮದಲೇಖೆ; ಮನುಷ್ಯರ ಮೈ ಮಱೆಯಿಸುವುದಕ್ಕೆ ಜಾಣೆ; ನಿನ್ನ ಮಾತಿನ ಜಾಣ್ಮೆಯಿಂದ ನಾನು ಪ್ರತ್ಯುತ್ತರವ ಕೊಡುವುದಕ್ಕೆ ಅವಕಾಶ ವಿಲ್ಲದೆ ಹೋಯಿತು. ನನ್ನ ಶರೀರಕ್ಕೂ ನನಗೆ ಸ್ವತಂತ್ರವಿಲ್ಲ; ಇದನು ತೆಗೆದ್ಯ

ಕೊಂಡೇನು, ಒಲ್ಲೆ, ಎಂಬುದಕ್ಕೆ ಅವಕಾಶವೇನು ? ನಿನ್ನ ಸೌಜನ್ಯಾದಿಗಳು ನಮ್ಮನು ಒಳಗುಮಾಡಿಕೊಂಬುವು. ಅದಱಿಂದ ಇದು ಒಳ್ಳಿತು ಅಲ್ಲದು ಎಂದು ಯೋಚಿಸಿ ನಿಮ್ಮ ಮನಸ್ಸುಬಂದ ರೀತಿಯಲ್ಲಿ ಕಟ್ಟುಮಾಡಿಸಿಕೊಳ್ಳಿ. ಕಾದಂಬರಿಯ ಗುಣಗಳಿಗೆ ಒಂದಿಷ್ಟು ದಾಕ್ಷಿಣ್ಯವಿಲ್ಲ. ಆರನಾದರೂ ಒಲ್ಮೆಯೋಱುಗದವರೆನಿಸದೆ ಬಿಡವು— ಎಂದು ಬಹು ಹೊತ್ತು ಕಾದಂಬರಿಯ ವಿಷಯವಾದ ಪ್ರಸಂಗಗಳನೆ ಮಾಡಿಕೊಂಡಿದ್ದು ಮದಲೇಖೆಯನು ಕಳುಹಿದನು.

ಇತ್ತಲಾಗಿ ಕಾದಂಬರಿಯು ಮದಲೇಖೆ ಹೋದ ಕೆಲವು ಹೊತ್ತಿನ ಮೇಲೆ ಉದಯಪರ್ವತದಲ್ಲಿರುವ ಚಂದ್ರನಂತೆ ಕ್ರೀಡಾಪರ್ವತದಲ್ಲಿರುವ ಚಂದ್ರಾಪೀಡನನು ನೋಡಲೆಳಸಿ ಛತ್ರಚಾಮರ ಮೊದಲಾದ ಕುಱುಹುಗಳನು ಕೆಳಗೆ ನಿಲಿಸಿ ಸಂಗಡ ಬರುವ ಊಳಿಗದ ಹೆಣ್ಣುಗಳು ಎಲ್ಲವನು ತಡೆಯಿಸಿ ತಮಾಲಿಕೆ ಸಹ ಮೊದಲ ಉಪ್ಪರಿಗೆಯ ಮೇಲೆ ಏಱಿ ಅಲ್ಲಿ ನಿಂತು ಹಲವು ಬಗೆಯ ವಿಲಾಸಗೂಡಿ ಚಂದ್ರಾಪೀಡನ ನೋಡುತಿರ್ದಳು. ಅದೆಂತೆಂದೊಡೆ:—

ಎಡದ ಕೈಯನು ನಡುವಿನಮೇಲೆ ಊಱಿ ಬಲದಕೈಯಿಂದ ಮೇಲುಮುಸುಕಿನ ಸೀರೆಯ ಬಿಸಿಲಿಗೆ ಮಱೆಮಾಡಿಕೊಂಡು ಕಣ್ಣಾಲಿಯಲುಗದೆ ಚಿತ್ರದಲ್ಲಿ ಬರೆದಂತೆ ನೋಡುವಳು. ಮತ್ತೊಂದುವೇಳೆ ಆಲಸಿ ಆಕಳಿಸುತ ನೋಡುವಲ್ಲಿ ತಪ್ಪುಮಾತು ಹೊಱಡದಂತೆ ಅಂಗೈಯಿಂದ ಬಾಯ ಮುಚ್ಚಿಕೊಳುತ, ಮತ್ತೊಂದುವೇಳೆ ಉಸಿರ ಪರಿಮಳಕ್ಕೆ ಸುತ್ತುವ ತುಂಬಿಗಳನು ಸೆಱಗಿಂದ ಸೋವುವಲ್ಲಿ ಅವನನು ಕರೆವಂತೆ, ಗಾಳಿಯಿಂ ಮೇಲುದು ಹಾಱಿತು ಎಂಬುದಱಿಂದ ಅಪ್ಪುಗೈಯ ಕಟ್ಟಿಕೊಳ್ಳುವುದಱಿಂದ ಆಲಿಂಗನಕ್ಕೆ ಸಂಕೇತವ ಮಾಡುವಂತೆ, ಎದೆಯಲ್ಲಿರುವ ಕಂಠಮಾಲೆಯ ಮಣಿಗಳನು ಬೆರಲಿನಿಂದ ತಿರುಹುವುದಱಿಂದ ತನ್ನ ಮನಸ್ಸಿನ ಆಸೆಯನ್ನು ಕೈಯಲ್ಲಿ ತೆಗೆದು ತೋಱುವಂತೆ, ಸಜ್ಜೆಯ ಮೇಲೆ ಚೆಲ್ಲಿ ಇದ್ದ ಹೂಗಳನೆಡಹಿ ಕೈಯೊದಱುವುದಱಿಂದ ಅಲರಂಬಿನ ಗಾಯಕ್ಕೆ ಅಳುಕುವಂತೆ, ನಡುವಿನಿಂದ ಸಡಿಲಿದ ಕಾಂಚೀದಾಮವು ಕಾಲ ತೊಡರುವುದಱಿಂದ ಮನ್ಮಥನಿಂದ ಸಂಕಲೆವಡೆದಂತೆ, ಅಡಿಗಡಿಗೆ ಸಡಿಲಿ ಜಾಱುವ ದುಕೂಲವನು ಬಿಗಿದುಡುತ ಒಂದು ಸೆಱಗು ನೆಲದಲ್ಲಿ ಬಿದ್ದು ಎಳೆಯುತ್ತಿರಲು ಮೇಲುಮುಸುಕಿನ ಮತ್ತೊಂದು ಸೆಱಗಿನಿಂದ ಎದೆಯನ್ನು ಮಱಿಸಿಕೊಳುತ್ತ ಮೈಮುಱಿವುದಱಿಂದ ತ್ರಿವಳಿಗಳು ಮಱಿಸಿ ತುಱುಬು ಸಡಿಲವಾಗೆ ಸಜ್ಜುಮಾಡಿಕೊಳುತ್ತ ಕಡೆಗಣ್ಣುಗಳ ತೇಲಿಸುವುದಱಿಂದ ಕಿವಿಯ ಮೇಲಿರುವ ಕನ್ನೈದಿಲನು ಬಿಳ್ಪೆನಿಸುತ ಕೊಣಲ ತಿರುಹಿ

ನೋಡುತ ಇದ್ದಳು. ಬಿಸಿಲು ತಗ್ಗಿ ಸಂಜೆಗೆಂಪು ತೋರಿ ಸೂರ್ಯಮಂಡಲವು ಪದ್ಮಿನಿಯಮೇಗಣ ಅನುರಾಗದಿಂದಲೂ ಇನ್ನೂ ಸಂಜೆಯಾಗಲಿಲ್ಲವೆಂಬ ಕೋಪದಿಂದ ಕೆಂಪಾದ ಕಾಮಿನಿಪುರ ನೋಟದಿಂದಲೂ ಕೆಂಪೆನಿಸಿ ಕಾಂತಿ ತಗ್ಗಿ ಅಸ್ತಮಯವಾಗಲಾಗಿ ಸೂರ್ಯವಿರಹದಿಂದ ತಾವರೆಗಳು ಸಂಕುಚಿತಗಳಾಗಿ ಕುಮುದಗಳು ತಮ್ಮ ಸ್ನೇಹಿತನಾದ ಅಮೃತಕಿರಣನ ನೋಡುವಾಸೆಯಿಂದ ವಿಕಸಿತಗಳಾದುವು. ಸೂರ್ಯಾಸ್ತಮಯುವಾಗುವಷ್ಟರಲ್ಲಿಯೆ ಕತ್ತಲೆಯು ತೋರಿಬಹುದೇ ಎಂಬ ಕೋಪದಿಂದ ದಿಕ್ಕುಗಳು ಕೆಂಪಾದುವು. ಕತ್ತಲೆಗಳು ಸಂಧ್ಯಾನಾಟ್ಯಸಮಯದಲ್ಲಿ ಪರಮೇಶ್ವರನು ಮೇಲಕಿಟ್ಟ ಚರ್ಮಾಂಬರದಂತೆಯೂ ಮದನಾಗ್ನಿಯಿಂದ ಹೊತ್ತಿದ ಚಕ್ರವಾಕಗಳ ಹೃದಯದ ಹೊಗೆಯಂತೆಯೂ ಕಾಣಿಸುತ ಕಾಮಿನಿಯರಿಗೆ ಕಣ್ಣೀರನುಂಟುಮಾಡುತ ವ್ಯಾಪಿಸಿತು. ದಿಗ್ಗಜಗಳ ಸೊಂಡಿಲುಗಳಿಂದ ಹೊರಿಡುವ ತುಂತುವರ್ನಿಗಳಂತೆ ನಕ್ಷತ್ರಗಳು ಕಾಣಿಸಿದುವು ಆಮೇಲೆ ಮೊಗಗತ್ತಲೆಯಾಗಲಾಗಿ ಕಾದಂಬರಿ ಉಪ್ಪರಿಗೆಯಿಂದಿಳಿದಳು. ಚಂದ್ರಾಪೀಡನು ಕ್ರೀಡಾಪರ್ವತದಿಂದಿಳಿದನು. ಆಮೇಲೆ ಚಂದ್ರನು ಕೋಪಿಸಿಕೊಂಡವನಂತೆ ನೈದಿಲುಗಳ ಕೈಯಿಂದ ಪಾದಂಗಳ ಕಟ್ಟಿಸಿಕೊಳುತ, ತಾವು ಕೋಪಿಸಿಕೊಂಡಂತೆ ಮುಖಕಾಂತಿ ಮಸುಳಿಸಿ ಇರುವ ದಿಕ್ಕುಗಳನು ಪ್ರಸನ್ನವಾಗಿಸುತ, ಕರಗಳು ಸೋಂಕುವುದರಿಂದ ಎಚ್ಚರವಾದಾವು ಎಂದು ಮಲಗಿದ್ದ ಕಮಲಿನಿಗಳ ಸೋಂಕದೆ, ಕಳಂಕವೆಂಬ ನೆವದಿಂದ ರಾತ್ರಿಯನು ಹೃದಯದಲ್ಲಿ ಧರಿಸಿ, ರೋಹಿಣಿಯ ಅಂಗಾಲ ಅಲತಗೆಯ ರಸ ಹತ್ತಿದಂತೆ ಇರುವ ಉದಯರಾಗಸಹ ಕತ್ತಲೆಯೆಂಬ ಕಪ್ಪಿನ ಮೇಲುಮುಸುಕನಿಟ್ಟು ಆಸೆಯಿಂದಿದಿರುಗೊಂಬ ಆಕಾಶವೆಂಬ ಹೆಣ್ಣನು ಸೇರಿದಂತೆ ಎಲ್ಲರ ಕಣ್ಣಿಗು ಉತ್ಸವವನುಂಟುಮಾಡುತ ಉದಯವಾದನು. ಆಮೇಲೆ ಮನ್ಮಥಸಾಮ್ರಾಜ್ಯಕ್ಕೆ ಏಕಚ್ಛತ್ರವೆತ್ತಿದಂತೆ ಚಂದ್ರನು ಉನ್ನತಪ್ರದೇಶಕ್ಕೆ ಬಂದು, ರಾತ್ರಿಯೆಂಬ ಹೆಣ್ಣು ವಿಲಾಸದಿಂದ ಕಿವಿಯಲ್ಲಿಟ್ಟ ದಂತದ ಓಲೆಯಂತೆ ಕಾಣಿಸಿ, ದಿಕ್ಕುಗಳನು ತೊಳೆದಂತೆ ಎಲ್ಲಾ ಕಡೆಯು ದಂತದ ಹಲಗೆಯ ಸೇರಿಸಿದಂತೆ ಆಗಲಾಗಿ; ಚಂದ್ರಾಪೀಡನು ಆವನದಲ್ಲಿ ಕೊಳದ ತಡಿಯಲ್ಲಿ ಸೋಪಾನಗಳ ಹೊಯ್ದೇಳುವ ತೆರೆಗಳ ಮೇಲೆ ಬೀಸುವ ಗಾಳಿಯಿಂದ ತಂಪಾಗಿ ಸುಖನಿದ್ರೆಗೈವ ಹಂಸೆಗಳಿಂ ಕೂಗಿಡುವ ಚಕ್ರವಾಕಂಗಳಿಂದೊಪ್ಪಿರುವಂತಹುದೊಂದು ಬಯಲಲ್ಲಿ ಕಾದಂಬರಿಯ ಕೆಳದಿಯರು ಪನ್ನೀರಿನಿಂದ ತೊಳೆದು ನೈದಿಲುಗಳ ಹಾಸಿ ಕೆಲದೊಳು ಹೂವಿನ ದಂಡೆಗಳು ಇರಿಸಿರುವ ಕಲ್ಲುಮಂಚದ ಮೇಲೆ ಚಂದ್ರೋದಯವ ನೋಡುತ್ತ ಒರಗಿಕೊಂಡಿದ್ದನು.

ಆಗ ಆಬಚ್ಚಿಗೆ ಮಯೂರಕನು ಬಂದು- ಕಾದಂಬರಿಯು ನಿಮ್ಮ ಕಾಣಿಸಿಕೊಂಬುದಕ್ಕೆ ಬಂದು ಇದ್ದಾರೆ- ಎನಲಾಗಿ ಅಮಾತ ಕೇಳಿ ಚಂದ್ರಾಪೀಡನು ಕದುಬುಗೂಡಿ ಎದ್ದು ಆದಿಕ್ಕನೆ ನೋಡುತಿರುವಷ್ಟರೊಳಗೆ ಕೆಲವು ಊಳಿಗದ ಹೆಣ್ಣುಗಳು ಸಹ ಛತ್ರಚಾಮರ ಮೊದಲಾದ ರಾಜಚಿಹ್ನೆಗಳಿಲ್ಲದೆ ಏಕಾವಳಿಸರ ಒಂದನೆ ಧರಿಸಿ ಬಿಳಿದಾದ ಶ್ರೀಗಂಧಲೇಪದಿಂದ ಶರೀರವನ್ನು ಶುಭ್ರವೆಂದೆನಿಸಿ ಒಂದೇ ಕಿವಿಗೆ ದಂತದ ಓಲೆಯನಿಟ್ಟು ಕರ್ಣಾವತಂಸವಾಗಿ ಬಿಳಿಯ ನೈದಿಲ ಧರಿಸಿ ಬಿಳಿಯ ದುಕೂಲವನುಟ್ಟು ರೂಪುವೆತ್ತ ಚಂದ್ರೋದಯಲಕ್ಷ್ಮಿಯಂತೆ ಮದಲೇಖೆಯ ಕೈಲಾಗ ತೆಗೆದುಕೊಂಡು ಬೇಱೊಬ್ಬಳಂತೆ ಕಾಣಿಸುವ ಕಾದಂಬರಿಯ ಕಂಡನು. ಆಗ ಕಾದಂಬರಿಯು ಸಮೀಪಕ್ಕೆ ಬಂದು ಪ್ರೀತಿವಿನಯದಿಂದ ಸಾಧಾರಣದವಳಂತೆ ಊಳಿಗದ ಹೆಣ್ಣುಗಳು ಕುಳಿತಿರುವ ನೆಲದಲ್ಲಿ ಕುಳ್ಳಿರಲಾಗಿ, ಚಂದ್ರಾಪೀಡನು ಮಂಚದಿಂದಿಳಿಯಬೇಡವೆಂದು ಬೇಡಿಕೊಂಬ ಮದಲೇಖೆಯ ಮಾತನ್ನು ಮೀಱಿ ನೆಲಕ್ಕೆ ಇಳಿದನು. ಎಲ್ಲರೂ ಕುಳಿತುಕೊಂಡ ಮೇಲೆ ಚಂದ್ರಾಪೀಡನು ಕ್ಷಣಮಾತ್ರ ಮೌನದೊಳಿದ್ದು ನುಡಿದನು:— ರಾಜಕುಮಾರಿಯೆ, ಕೇಳು; ನಿನ್ನ ಕಂಡಮಾತ್ರದಲ್ಲಿಯೆ ತೃಪ್ತಿವಡೆದಿರುವ ಊಳಿಗದವನನು ತಿರುಗಿ ನುಡಿಸುವುದೆಂಬುದಕ್ಕು ಕಾರಣವಿಲ್ಲ. ಈಬಗೆಯ ಮೇರೆ ಮರ್ಯಾದೆಗೆ ಕಾರಣವೇನು ? ನಾನು ಎಷ್ಟುಬಗೆಯಲ್ಲಿ ತಿಳಿದು ನೋಡಿದರೂ ನೀನು ನನ್ನಲ್ಲಿ ನಡೆಸುವುದಕ್ಕೆ ಅನುಗುಣವಾದ ನಡತೆ ಎಳ್ಳನಿತಾದರೂ ನನ್ನಲ್ಲಿ ಕಾಣೆನು. ನಿನ್ನ ಪ್ರಕೃತಿಯು ಎಷ್ಟು ಮೃದುವಾಗಿದೆ ! ನಿನ್ನ ಊಳಿಗದವರು ಏನು ಪುಣ್ಯವ ಮಾಡಿದರೋ ! ನಿನ್ನ ದಯೆಯೆಂಬುದು ಮೇರೆಯ ಮೀಱಿ ಇದೆ. ಈ ರೀತಿಯಲ್ಲಿ ನಡೆದುಕೋ ಎಂದು ವಿಧಿಸಿ ಕಟ್ಟುಮಾಡತಕ್ಕವನಲ್ಲ ಎಷ್ಟು ಬಗೆಯ ಆದರಣೆಯ ನಡೆಸುತ್ತಲಿದ್ದೀಯೆ ? ಇದಕ್ಕೆ ಉಚಿತವಾಗಿ ನಾನು ಆವ ರೀತಿಯಲ್ಲಿ ನಡೆದುಕೊಂಡೇನು ? ಆವ ಉಪಕಾರವ ನಡಸಿ ತೋಱೇನು ? ಬಱಿಯ ಮಾತಿನ ಉಪಚಾರವ ನಡೆಸುವುದಕ್ಕೆ ಲಜ್ಜೆಯು ತೋಱುತಲಿದೆ. ಈನನ್ನ ಶರೀರ ಪಂಚೇಂದ್ರಿಯಂಗಳು ಈಜೀವ ಇವಱೊಳಗಾಗಿ ಆವುದು ನೀನಂಗೀಕರಿಸಿದುದಱಿಂದಕೃತಾರ್ಥವಾದೀತು?— ಎಂದು ನುಡಿಯುತ್ತಿರುವ ಚಂದ್ರಾಪೀಡನ ಮಾತನು ನಿಲಿಸಿ, ಮದಲೇಖೆಯು ಮುಗುಳುನಗೆಗೂಡಿ ನುಡಿದಳು:— ಅಯ್ಯ, ನಿಮಗೆ ನಾನು ಉಚಿತವಾದ ಬಹುಮಾನವನು ನಡೆಸಲಿಲ್ಲ, ಎಂದು ಕಾದಂಬರಿಯು ನೊಂದುಕೊಂಡು ಇದ್ದಾಳೆ. ನೀವೇನು ಕಾರಣ ಈ ರೀತಿಯಲ್ಲಿ

ಹೇಳುತ ಇದ್ದೀರಿ ? ಈಕಾದಂಬರಿಯು ಈಬಗೆಯ ಉಪಚಾರದ ಮಾತುಗಳೆಲ್ಲವನು ತಾನು ನುಡಿಯಬೇಕೆಂದು ಲಜ್ಜೆಯಿಂದ ನುಡಿಯಲಿಲ್ಲ. ನೀವು ಈಬಗೆಯ ಉಪಚಾರಗೂಡಿರುವುದರಿಂದ ಇವಳು ಸಂದೇಹವೆಂಬ ಎಲ್ಲೆಯ ನೋಡುತ್ತ ಇದ್ದಾಳೆ- ಎಂದು ಇವು ಮೊದಲಾದ ಪ್ರಸಂಗಗಳಿಂದ ಒಂದಿಷ್ಟು ಹೊತ್ತು ಹೋಗಿಸಿ, ಆಮೇಲೆ ಇಷ್ಟಾಲಾಪಕ್ಕೆ ಅವಕಾಶ ಮಾಡಿಕೊಂಡು ನುಡಿವಳ್ಳಿ:- ಅಯ್ಯಾ, ಅರಸು ತಾರಾಪೀಡನ ವೃತ್ತಾಂತವಾವುದು ? ಅರಸಿಯಾದ ವಿಲಾಸವತಿಯ ಬಗೆಯೇನು ? ಮಂತ್ರಿ ಶುಕನಾಸನ ಸ್ಥಿತಿಯೇನು ? ಉಜ್ಜಯಿನಿ ಪಟ್ಟಣವೆಂಥದು ? ಎಷ್ಟು ದೂರದಲ್ಲಿರುವುದು ? ಭಾರತವರ್ಷವು ಆವ ಪ್ರಕಾರ ? ಅಲ್ಲಿಯ ಮನುಷ್ಯರ ಸೌಂದರ್ಯವಾವ ರೀತಿ ?- ಎಂದು ಕೇಳುತ, ಅದಕ್ಕೆ ಚಂದ್ರಾಪೀಡನು ಪ್ರತ್ಯುತ್ತರಗುಡುವ ನುಡಿಗಳನು ಲಾಲಿಸಿ ಕೇಳಿ ಆನಂದಪಡುತ ಬಲು ಹೊತ್ತು ಇದ್ದು, ಆಮೇಲೆ ಮಯೂರಕನು ಕೆಲವು ಊಳಿಗದ ಹೆಣ್ಣುಗಳನು ಚಂದ್ರಾಪೀಡನ ಬಳಿಯಲ್ಲಿಯೇ ಕಾದುಕೊಂಡು ಇರುವ ರೀತಿಗೆ ಕಟ್ಟು ಮಾಡಿಸಿ ಕಾದಂಬರಿಯು ಮದಲೇಖೆ ಸಹ ತನ್ನ ಉಪ್ಪರಿಗೆಯ ಮೇಲಕ್ಕೆ ಬಂದು ನೆಲ ಹಾಸಿಕೆಯಲ್ಲಿ ಒರಗಿಕೊಂಡಂಥವಳಾದಳು. ಚಂದ್ರಾಪೀಡನು ಆಕಲ್ಲುಮಂಚದ ಮೇಲೆ ಒರಗಿಕೊಂಡು ಕಾದಂಬರಿಯ ನಿಗರ್ವತೆಯನು, ಅಂದಗಳನು, ಗಾಂಭೀರ್ಯ ಮೊದಲಾದ ಗುಣಗಳನು, ಮಹಾಶ್ವೇತೆಯ ನೆವವಿಲ್ಲದ ದಯೆಯನು, ಮದಲೇಖೆಯ ಸೌಜನ್ಯವನು, ಊಳಿಗದ ಹೆಣ್ಣುಗಳ ಘನತೆಯನು, ಗಂಧರ್ವರಾಯನ ಅರಮನೆಯ ಐಶ್ವರ್ಯವನು, ಕಿಂಪುರುಷದೇಶದ ಸೌಂದರ್ಯವನು ಭಾವಿಸಿ ಸಂತೋಷಪಡುತ್ತ ಮಯೂರಕನ ಕೈಯಿಂದ ತೊಡೆಯನೊತ್ತಿಸಿಕೊಳುತ್ತ ಇರುಳೆಲ್ಲವನು ಕ್ಷಣದಂತೆ ಕಳೆದನು.

ಆಗ ಚಂದ್ರಾಪೀಡನು ಕಾದಂಬರಿಯ ಕಂಡು ವಿರಹದಿಂದ ನಿದ್ದೆಬಾರದೆ ಅಲಸಿದಂತೆ ಪಡುವಣ ಕಡೆಯ ಬನದಲ್ಲಿ ಮಲಗಬೇಕೆಂದು ತಿಳಿದನು. ಪ್ರಾಣಕಾಂತರ ತಳ್ಕೆ ಸಡಿಲಿ ದುಃಖದಿಂದ ನಿಡುಸುಯ್ವ ಕಾಮಿನಿಯರ ಸುಯ್ಲಿಂ ಸೀದಂತೆ ಬೆಳ್ದಿಂಗಳು ತಗ್ಗಿತು. ಚಂದ್ರಾಪೀಡನ ಕಂಡು ವಿರಹಿಣಿಯಾದಂತೆ ರಾತ್ರಿಯು ನೈದಿಲುಗಳ ಮಧ್ಯವ ಸೇರಿತು. ಬೆಳಗಿನ ಸಮಯವಾಗಲಾಗಿ ಮಲಗುವ ಮನೆಗಳು ಸ್ತ್ರೀಯರ ಕರ್ಣಾವತಂಸವಾದ ನೈದಿಲ ಹೊಯ್ಲ ಬಯಸಿದಂತೆ ಬಡವಾಗಿರುವುವು. ಎಡೆವಿಡದೆ ಅಂಬುಗಳನೆಚ್ಚು ಬಳಲಿದ ಮನ್ಮಥನ ಸುಯ್ಲುಗಳಂತೆ ಅಲರ ಪರಿಮಳಗೂಡಿ ಬೆಳಗಿನ ಗಾಳಿ ಬೀಸಿದುವು.

ಚಕ್ರವಾಕಪಕ್ಷಿಗಳ ಅನುರಾಗದಿಂದಲೆಂಬಂತೆ ಕೆಂಪುವಡೆದು ಸೂರ್ಯಮಂಡಲವು ಉದಯಿಸಿದ ಮೇಲೆ ಚಂದ್ರಾಪೀಡನು ಕಲ್ಲ ಮಂಚದಿಂದೆದ್ದು ಸಂಧ್ಯಾವಂದನಾದಿ ನಿತ್ಯಕರ್ಮಗಳನು ತೀರಿಸಿಕೊಂಡು ವೀಳೆಯವ ಹಾಕಿಕೊಳುತ್ತ ಮಯೂರಕನ ಕರೆದು- ಈಗ ಕಾದಂಬರಿ ಮಲಗಿರುವಳೊ, ನಿದ್ದೆದಿಳಿದಿರುವಳೋ ? ಆವ ಬಳಿ ಸುಲಿ ಇರುವಳು ?-ಎಂದು ಕೇಳಲಾಗಿ; ಅವನು ಶೀಘ್ರದಲ್ಲಿ ಹೋಗಿ ಸಮಯವನು ತಿಳಿದು ಬಂದು- ಉಪ್ಪರಿಗೆಯ ಕೆಳಗೆ ಕೊಟ್ಟಿಯ ಮುಂಗಡೆಯ ಪಡಸಾಲೆಯಲ್ಲಿ ಮಹಾಶ್ವೇತೆ ಸಹ ಕಾದಂಬರಿಯು ಇದ್ದಾಳೆ- ಎಂದು ಹೇಳಲಾ ಚಂದ್ರಾಪೀಡನು ಕಾದಂಬರಿಯು ಬಳಿಗೆ ಬಂದನು. ಅಲ್ಲಿ ಕಾಣಿಸಿಕೊಂಬುದಕ್ಕೆ ಬಂದ ಗಂಧರ್ವ ಕುಲದ ವೃದ್ಧಸ್ತ್ರೀಯರುಗಳಿಗೆ ಆದರಣೆಗೂಡಿ ಕೈಯ ಮುಗಿವುದರಿಂದಲೂ, ಕೆಲದಲ್ಲಿರುವ ಬಣ್ಣದಮಂದಲಿಗೆಗಳಲ್ಲಿ ಕುಳ್ಳಿರಿಸುವುದರಿಂದಲೂ, ಘನಮರ್ಯಾದೆಯ ನಡೆಯಿಸುತ್ತಲಿರುವ ಮಹಾಶ್ವೇತೆಯ ಹಿಂಬಾಗದಲ್ಲಿ ಕುಳಿತಿರುವ ಕಿನ್ನರರಿಬ್ಬರ ಕೊಳಲು ದನಿಯ ಶ್ರುತಿಗೆ ಸರಿಯಾಗಿ ಸ್ವರವೆತ್ತಿ ಓದುವ ನಾರದನ ಮಗಳ ಮಹಾ ಭಾರತಪಾಠವನು ಲಾಲಿಸಿ ಕೇಳುತ, ಮುಂದೆ ಹಿಡಿದಿರುವ ರನ್ನಗನ್ನಡಿಯಲ್ಲಿ ವೀಳೆಯದ ಕಪ್ಪು ಹತ್ತಿದ ತುಟಿಯ ನೋಡಿಕೊಳುತ, ಕಿವಿಯ ಮೇಲೆ ಇರುವ ಬಾಗೆಯ ಹೂವನು ಪಾವಸೆಯೆಂದು ತಿಳಿದು ಬಯಸಿ ತಿರುಗುವ ಹಂಸಪಕ್ಷಿಗಳೆಂಬ ಪರಿವೇಷ ಸುತ್ತಿದ ಚಂದ್ರಲೇಖೆಯಂತಿರುವ ಕಾದಂಬರಿಯ ಸಮೀಪಕ್ಕೆ ಹೋಗಿ ಕೈಮುಗಿದು ಆಪಟ್ಟಸಾಲೆಯ ಮೇಲೆ ಕಾದಂಬರಿಯ ಕೆಳದಿಯರು ಹಾಸಿದ ಸುಪ್ಪತ್ತಿಗೆಯಲ್ಲಿ ಕುಳಿತುಕೊಂಡಿದ್ದು ಒಂದಿಷ್ಟು ಹೊತ್ತಿನ ಮೇಲೆ ಮಹಾಶ್ವೇತೆಯ ಮುಖವ ನೋಡಿ ಮುಗುಳುನಗೆಗೂಡಿ ಕಣ್ಣಸನ್ನೆಗೈಯಲಾಗಿ; ಆಮಹಾಶ್ವೇತೆಯು ಅಷ್ಟುಮಾತ್ರದಿಂದಲೇ ಅವನ ಅಭಿಪ್ರಾಯವನು ತಿಳಿದು ಕಾದಂಬರಿಯೊಡನೆ ನುಡಿವಳ್- ಎಲೆ ಕಾದಂಬರಿಯೆ, ಚಂದ್ರಾಪೀಡನು ನಿನ್ನ ಗುಣಗಳಿಂದ ಪರವಶ ನಾಗಿದ್ದಾನೆ. ತನ್ನ ಬಲದಲ್ಲಿ ಇರುವವರು ಬಹು ಚಿಂತಾಕ್ರಾಂತರಾಗಿ ಇರುವರು ಎಂಬುದರಿಂದ ತಾನು ಹೋಗಬೇಕಾಗಿದ್ದರೂ ಕೇಳಲರಿಯದೆ ಇದ್ದಾನೆ. ಆವ ಬಳಿಯಲ್ಲಿದ್ದರೂ ತಾವರೆಗೂ ಸೂರ್ಯನಿಗೂ, ನೈದಿಲೆಗೂ ಚಂದ್ರನಿಗೂ ಇರುವ ರೀತಿಯಲ್ಲಿಯೆ ನಿಮ್ಮಿಬ್ಬರ ಸ್ನೇಹವು ನೆಲೆಗೊಂಡಿರುವುದು. ಆದರಿಂದ ಹೋಗಿ ಬರುವುದಕ್ಕೆ ಅಪ್ಪಣೆಯನು ಕೊಟ್ಟುಕಳುಹಿಸು- ಎನಲಾಗಿ, ಕಾದಂಬರಿಯು ಹೇಳಿದುದು:—

ಕೇಳು ಮಹಾಶ್ವೇತೆ, ತಮ್ಮಧೀನಳಾದ ತಮ್ಮ ಊೞಿಗದವಳಾದ ಎನಗೆ ಎಷ್ಟು ಉಪಚಾರ ? ನನ್ನ ಮನಸ್ಸನು ಅನುಸರಿಸಿ ಹೋಗಬೇಕೆಂದೇನು ? ತಮ್ಮ ಚಿತ್ತಕ್ಕೆ ಸರಿಬಂದಹಾಗೆ- ಎಂದು ಗಂಧರ್ವಕುಮಾರರುಗಳ ಕರೆದು- ಪಾಳೆಯದ ಪರಿಯಂತ ಸಂಗಡಹೋಗಿ ಬಿಟ್ಟು ಬನ್ನಿ- ಎನಲಾಗಿ, ಚಂದ್ರಾಪೀಡನು ಎದ್ದು ಮಹಾಶ್ವೇತೆಗೆ ಕೈಯ ಮುಗಿದು, ಕಾದಂಬರಿಯು ಪ್ರೀತಿಗೂಡಿ ನೋಡುತ್ತಿರಲಾಗಿ- ಅರಸುಮಗಳೇ, ನಾನು ಹೇೞುವುದೇನು ? ಬಲುಮಾತ ನುಡಿದರೆ ನಂಬುಗೆ ತಪ್ಪುವುದು. ಇಷ್ಟಾಲಾಪಗಳಲ್ಲಿ ನಮ್ಮ ಸ್ಮರಣೆ ವಿರಚಿಸದು- ಎಂದು ಹೇೞಿ ಅಂತಃಪುರವ ಹೊಱಟು ಹೊಱಬಾಗಿಲ ಬೞಿಗೆ ಬಂದು, ಕಾದಂಬರಿಯೊಬ್ಬಳನೆ ಬಿಟ್ಟು ತನ್ನ ಸಂಗಡ ಬರುವ ಕಾದಂಬರಿಯ ಸಖಿಗಳನು ಊೞಿಗದವರೆಲ್ಲರನು ಕಾದಂಬರಿಯ ಬೞಿಗೆ ಹೋಗಿ ಎಂದು ಕಳುಹಿಸಿ, ಮಯೂರಕನು ತಂದು ನಿಲಿಸಿದ ಕುದುರೆಯನೇಱಿಕೊಂಡು ಗಂಧರ್ವಕುಮಾರರು ಸಹ ಹೇಮಕೂಟ ಪರ್ವತದಿಂದ ತೆರಳಿ, ದಾರಿಯಲ್ಲಿ ಹೋಗುವಾಗ ಮನಸ್ಸಿನಲ್ಲಿ ಕಾದಂಬರಿಯನೇ ಭಾವಿಸಲಾಗಿ, ಎಲ್ಲ ಕಡೆಯಲ್ಲೂ ಕಾದಂಬರಿಯೆ ಕಾಣಿಸಿಕೊಂಡಳು. ಅದೆಂತೆಂದೊಡೆ— ವಿರಹದುಃಖವನು ಪರಿಹರಿಸುವುದಕ್ಕೆ ಬಂದವಳಂತೆ ಬೆನ್ನ ಕಡೆಯಲ್ಲಿ ಕಾಣಿಸುವಳು; ಮುಂದಕ್ಕೆ ನಡೆಯಲೀಯದೆ ಅಡ್ಡಗಟ್ಟುವಂತೆ ಮುಂಗಡೆಯಲ್ಲಿ ಕಾಣಿಸುವಳು; ವಿರಹವನ್ನು ಸಹಿಸಲಱಿಯದೆ ಸೇರಿದಂತೆ ಎದೆಯಲ್ಲಿ ಕಾಣಿಸುವಳು- ಈಪ್ರಕಾರದಲ್ಲಿ ಕಾದಂಬರಿಯನೆ ಭಾವಿಸಿಕೊಳುತ ಮಹಾಶ್ವೇತೆಯ ಆಶ್ರಮದ ಬೞಿಗೆ ನಡೆತಂದು ಅಲ್ಲಿಂದ ಅಚ್ಛೋದಸರಸೀತೀರಕ್ಕೆ ಬಂದು, ಅಲ್ಲಿಂದ ಇಂದ್ರಾಯುಧದ ದಾರಿವಿಡಿದು ಪಾಳೆಯವನು ಸೇರಿ, ಸಂಗಡ ಬಂದ ಗಂಧರ್ವ ಕುಮಾರರನು ಕಳುಹಿಸಿ, ಸಂತೋಷದಿಂದ ಕದುಬುಗೂಡಿ ಆಶ್ಚರ್ಯಪಡುತ ಬಂದು ಕಾಣಿಸಿಕೊಂಡು ಕೈಮುಗಿದ ಪಾಳೆಯದ ಮಂದಿಗಳನು ಉಚಿತವಱಿತು ಮಾತನಾಡಿಸುತ ತನ್ನ ಗುಡಾರಕ್ಕೆ ಬಂದನು. ಅಲ್ಲಿ ಸಕಲವಾದ ಮಂದಿಗೂ ಉಚಿತವಱಿತು ಬಹುಮಾನಗಳ ಮಾಡಿಸಿ, ವೈಶಂಪಾಯನ ಪತ್ರಲೇಖೆ ಸಹ ಕುಳಿತುಕೊಂಡು- ಮಹಾಶ್ವೇತೆಯ ರೀತಿಯಿದು; ಕಾದಂಬರಿಯ ಗುಣಗಳಿಂತಹವು; ಮದಲೇಖೆ ಇಂತಹಳು; ತಮಾಲಿಕೆಯ ಬಗೆಯಿದು- ಎಂದು ಇವು ಮೊದಲಾದ ಇಷ್ಟಾಲಾಪಗಳಿಂದ ಹಗಲನೆಲ್ಲವನು ಕಳೆದು, ಹಗಲೋಲಗದಲ್ಲಿರುವ ಸಮಯದಲ್ಲಿ ಅವಸರದವಳು ಸಹ ಮಯೂರಕನು ಬಂದು ದೂರದಲ್ಲಿ ಅಡ್ಡಬೀೞಲಾಗಿ, ಇತ್ತ ಬಾ ಎಂದು ನುಡಿದು ಮುಂಚಿತಾಗಿ ಕಡೆಗಣ್ಣಿಗೆ ಸೇರುವ ನೋಟದಿಂದ, ಆಮೇಲೆ

ಹೃದಯದಿಂದ, ಆಮೇಲೆ ರೋಮಾಂಚದಿಂದ, ಆಮೇಲೆ ತೋಳುಗಳಿಂದ ತಕ್ಕೈಸಿ ಕೊಂಡು ತನ್ನ ಹಾಸಿಕೆಯ ಸಮೀಪದಲ್ಲಿಯೆ ಕುಳ್ಳಿರಿಸಿಕೊಂಡು ಪ್ರೀತಿರಸವು ಪೊಱಸೂಸುವಂತೆ ಮುಗುಳುನಗೆಗೂಡಿ ನುಡಿಸುವಲ್ಲಿ- ಎಲೆ ಮಯೂರಕ, ಕಾದಂಬರಿಯು ಕ್ಷೇಮದಲ್ಲಿದ್ದಾಳೆಯೆ? ಮಹಾಶ್ವೇತೆ ಹರ್ಷವಾಗಿದ್ದಾಳೆಯೆ ?- ಎನಲಾಗಿ; ಮಯೂರಕನು ಚಂದ್ರಾಪೀಡನ ಹರ್ಷಗೂಡಿದ ಮುಗುಳುನಗೆಯ ಬೆಳಗಿಂದ ಮಿಂದವನಂತೆ ಚಂದನರಸಾನುಲೇಪನವಡೆದವನಂತೆ ಆಕ್ಷಣದಲ್ಲಿ ಎಲ್ಲ ಬಲಿಲಿಕೆಯನು ಕಳೆದು- ಅಯ್ಯ, ಈಗ ನೀನು ಪರಾಂಬರಿಸುವುದಱಿಂದ ಸಕಲಕ್ಷೇಮವೂ ಉಂಟಾಯಿತು- ಎಂದು ನುಡಿದು, ತನ್ನ ಕೈಯಲ್ಲಿ ಕಾದಂಬರಿ ಕೊಟ್ಟು ಕಳುಹಿರುವ ಹಸಿಯಡಕೆ ಮರುಗದೆಲೆ ಕಪ್ಪುರ ಚಂದನ ಇವನೆಲ್ಲವನು ತಾವರೆಯೆಲೆಯಲ್ಲಿ ಕಟ್ಟಿ ಮೇಲಕ್ಕೆ ಶ್ರೀಗಂಧವ ಮೆತ್ತಿ ಪನ್ನೀರಿನಲ್ಲಿ ನನೆಯಿಕ್ಕಿ ಜಲದಲ್ಲಿ ತೋಯಿಸಿದ ತಾವರೆಯ ದಂಟಿನ ನೂಲಿನಲ್ಲಿ ಬಾಯಿದಾರವ ಸುತ್ತಿ ಶ್ರೀಗಂಧದಲ್ಲಿ ಮುದ್ರೆಯೊತ್ತಿರಲಾಗಿ ಆ ಮುದ್ರೆಯಂ ತೋಱಿ, ಅಪ್ಪಣೆಯ ಮೇಲೆ ತೆಗೆದು ಅಲ್ಲಿದ್ದ ವಸ್ತುಗಳನೊಪ್ಪಿಸಿ ತಿಳುಹಿಕೊಂಡಂಥದು—— ಅಯ್ಯಾ, ಕಾದಂಬರಿಯು ಶಿರಸ್ಸಿನ ಮೇಲಕ್ಕೆತ್ತಿ ಕೈಮುಗಿದೆನೆಂದು ಬಿನ್ನಹವಮಾಡ ಹೇಳಿದರು. ಮಹಾಶ್ವೇತೆಯು ಕ್ಷೇಮಾಲಿಂಗನವ ಮಾಡಿಕೊಂಡೆನೆಂದು ಬಿನ್ನಹವ ಮಾಡಿದಳು. ಮದಲೇಖೆಯು ತಲೆವಾಗಿ ಕೈಮುಗಿದೆನೆಂದು ಬಿನ್ನಹಮಾಡಿದಳು. ತಮಾಲಿಕೆಯು ಪಾದಂಗಳಿಗಡ್ಡಬಿದ್ದೆನೆಂದು ಬಿನ್ನಹಗೈದಳು. ಮಹಾಶ್ವೇತೆಯು ಹೇಳಿಕಳುಹಿದ ಮಾತು- ಅಯ್ಯಾ, ಈಗ ನಿಮ್ಮ ಕಾಣದೆ ಇದ್ದಂಥವರೇ ಬಹುಸುಕೃತಶಾಲಿಗಳು. ನಿಮ್ಮ ಗುಣಂಗಳು ಆಗ ಆಪ್ರಕಾರದಲ್ಲಿ ಚಂದ್ರಕಿರಣಗಳಂತೆ ಶೀತಳವಾಗಿದ್ದುವು; ಈಗ ವಿರಹಕಾಲದಲ್ಲಿ ಸೂರ್ಯಕಿರಣಂಗಳಾದುವು. ಸನ್ನಿಧಾನದಲ್ಲಿರುವ ಮಂದಿಗಳೆಲ್ಲರು ಅಮೃತೋತ್ಪತ್ತಿ ದಿನವ ಬಯಸಿದಂತೆ ನೀವು ಬರುವ ದಿನವನೆ ಬಯಸುತ್ತಲಿದ್ದಾರೆ. ಈಗ ಗಂಧರ್ವಪಟ್ಟಣವೆಲ್ಲವು ನೀವಿಲ್ಲದಿರುವುದಱಿಂದ ನಿರುತ್ಸಾಹವಾಗಿದೆ. ನಾನು ಸಕಲವನೂ ಬಿಟ್ಟು ಇರುವಂಥವಳು ಎಂಬುದ ಬಲ್ಲಿರಲ್ಲಾ! ಅಕಾರಣ ಮಿತ್ರರಾಗಿರುವಂಥ ನಿಮ್ಮನು ಆವರೀತಿಯಾದರೂ ನೋಡಬೇಕಾಗಿದೆ. ಅದೂ ಅಲ್ಲದೆ ಕಾದಂಬರಿಯು ಬಹುಬಗೆಯಲ್ಲಿ ಸ್ವಸ್ಥವಿಲ್ಲದೆ ಇದ್ದಾಳೆ, ಎಂಬುದ ತಿಳಿದು ಇದ್ದೀರಲ್ಲಾ! ಆಕದುಬಿನಿಂದಲು, ನೀವು ನನ್ನಲ್ಲಿ ನೆವವಿಲ್ಲದೆ ಸ್ನೇಹವಾಗಿರುವುದಱಿಂದ ಮರ್ಯಾದೆ ಮೀಱಿದ ಸಲಿಗೆಯಿಂದಲು, ನೀವು ಇನ್ನೊಂದು ವೇಳೆ ಇಲ್ಲಿಗೆ ಬಂದು ಹೋಗಬೇಕೆಂದು ಹೇಳಿ ಕಳುಹಿಸಿ ಇದ್ದೇವೆ. ನಮ್ಮಲ್ಲಿ

ಸ್ನೇಹವ ಮಾಡಿದಮೇಲೆ ನಾವು ಹೇಗೆ ಪೀಡಿಸಿದರು ಕ್ಷಮಿಸಿಕೊಂಡು ದಯೆಗೈಯ ಬೇಕು. ನಮಗೆ ಈರೀತಿಯಲ್ಲಿ ನಿಮ್ಮ ಬಳಿಗೆ ಹೇಳಿಕಳುಹಿಸುವ ಗರ್ವ ವುಂಟಾಗುವುದು ನಿಮ್ಮ ಒಳ್ಳೆಯತನದ ದೋಷದಿಂದಲೆ ಸರಿ, ನಮ್ಮಿಂದಲ್ಲ. ಇದೀಗ ನೀವು ಹಾಸಿಕೆಯ ಮೇಲೆ ಮಱೆತು ಬಂದ ಶೇಷವೆಂಬ ಕಂಠಮಾಲೆ. ಇದನ್ನು ಕಳುಹಿಸಿಬಿಟ್ಟು ಇದ್ದಾಳೆ- ಎಂದು ಮೇಲುದಿನ ಸೆರಗಿನಲ್ಲಿ ಕಟ್ಟಿ ಇದ್ದುದನು ಬಿಚ್ಚಿ ಸಮೀಪದಲ್ಲಿರುವ ಕುಂಚದ ಊಳಿಗದವಳ ಕೈಯಲ್ಲಿ ಕೊಟ್ಟನು. ಆಮೇಲೆ ಚಂದ್ರಾಪೀಡನು-ಕಾದಂಬರಿಯು ನನ್ನನ್ನು ಆ ಸನ್ನಿಧಾಲ್ಲಿ ದಲ್ಲಿಯೂ ನೆನೆದು ಈಬಗೆಯ ದಯೆಯೆಂಬ ಬಹುಭಾರವ ಹೊಱಿಸಿದುದು ತಪಸ್ವಿ ಯಾದ ಮಹಾಶ್ವೇತೆಯವರ ಆರಾಧನತಪಃಫಲ- ಎಂದು ನುಡಿದು ಆವಸ್ತುಗಳನು ತೆಗೆದು ತಲೆಯ ಮೇಲಿಟ್ಟುಕೊಂಡು ಅದಱಲ್ಲಿ ಸಡಿಲ ಬಿದ್ದ ಕಾದಂಬರಿಯ ಕಪೋಲಲಾವಣ್ಯವೋ, ಮುಗುಳುನಗೆಯ ಬೆಳಗೋ, ಕರಗಿದ ಮನವೋ, ರಸವೋ, ಸರ್ವಗುಣಗಳೋ ಎಂಬಂತೆ ಅತಿಶೀತಲವಾಗಿ ಆಹ್ಲಾದಕರವಾದ ಚಂದನರಸವನು ಧರಿಸಿಕೊಂಡು, ಆ ಕಂಠಮಾಲೆಯನು ಕೊರಲೊಳಗೆ ಧರಿಸಿಕೊಂಡು ವೀಳೆಯವನು ತೆಗೆದುಕೊಂಡು ಒಂದಿಷ್ಟು ಹೊತ್ತಿನಮೇಲೆ ಎದ್ದು ಎಡದಕ್ಕೈಯನು ಮಯೂರಕನ ಭುಜದ ಮೇಲೆ ಇರಿಸಿಕೊಂಡು ಕಳುಹತಕ್ಕ ಮಂದಿಯೆಲ್ಲರನು ಕಳುಹಿಸಿ ಗಂಧ ಮಾದನವೆಂಬ ತನ್ನ ಪಟ್ಟದಾನೆಯನು ನೋಡುವುದಕ್ಕೆ ಹೋಗಿ, ಅಲ್ಲಿ ಒಂದಿಷ್ಟು ಹೊತ್ತು ನಿಂದು, ತನ್ನ ಕೈಯಿಂದಲೆ ಕೆಲವು ಎಳೆಯ ಪೈರುಗಳನೆ ಕೊಟ್ಟು, ಅಲ್ಲಿಂದ ತೆರಳಿ, ತನ್ನ ಸ್ವಾರಿ ತೇಜಿಯ ಲಾಯಕ್ಕೆ ಹೋಗುವಲ್ಲಿ ನಿಂತು ಕೊರಲ ತಿರುಹಿ ಹಿಂಬಾಗದಲ್ಲಿ ಎಡಬಲವ ನೋಡಲಾಗಿ, ಅವಸರದವರು ಆ ಅಭಿಪ್ರಾಯ ವನು ತಿಳಿದು ಸಂಗಡ ಬರುವ ಮಂದಿಯನು ತಡೆದು ನಿಲ್ಲಿಸಿದಲ್ಲಿ, ಮಯೂರಕ ನೊಬ್ಬ ಸಹ ಲಾಯದ ಒಳಕ್ಕೆ ಬರಲು ಆಲ್ಲಿದ್ದ ಕಾವಲಮಂದಿ ಮಾರಾಕೋರರು ಸಹವಾಗಿ ಅರಸು ಒಬ್ಬನೆ ಬರುವುದ ಕಂಡು ಭಯದಿಂದ ದೂರದಲ್ಲಿಯೆ ನಿಂತರು. ಚಂದ್ರಾಪೀಡನು ಇಂದ್ರಾಯುಧದ ಸಮೀಪಕ್ಕೆ ಬಂದು ಒಂದು ಪಾರ್ಶ್ವಕ್ಕೆ ಜಾರಿರುವ ಜೂಲನು ಸರಿ ಮಾಡುತ್ತ ಕಣ್ಣುಗಳಿಗೆ ಮಱೆಯಾಗಿ ಬಿದ್ದಿರುವ ಕಂದದ ಕೂದಲುಗಳನೊತ್ತರಿಸುತ್ತ ಆಬಳಿಯ ಕಂಭದಲ್ಲಿ ಒರಗಿಕೊಂಡು ವಿಲಾಸಗೂಡಿ ನುಡಿವಲ್ಲಿ- ಎಲೆ ಮಯೂರಕ, ನಾನು ಹೊಱಟು ಬಂದಾರಭ್ಯವಾಗಿ ಆಗಂಧರ್ವರಾಜನ ಅರಮನೆಯಲ್ಲಿ ನಡೆದ ವೃತ್ತಾಂತವಾವುದು ? ಕಾದಂಬರಿ ಳವ ಬಗೆಯಲ್ಲಿ ಹೊತ್ತುಕಳೆಯುತಿದ್ದಾಳೆ ? ಮಹಾಶ್ವೇತೆ ಏನ ಮಾಡುತ್ತಲಿದ್ದಾಳೆ

ಮದಲೇಖೆ ಏನು ನುಡಿಯುತ್ತಲಿದ್ದಾಳೆ? ಊರುಗದ ಹೆಣ್ಣುಗಳು ಏನ ನುಡಿದು ಕೊಳುತ್ತಲಿದ್ದಾರೆ? ನೀನು ಏನ ಮಾಡುತ್ತಲಿದ್ದೆ? ನಮ್ಮ ವಿಷಯವಾದ ಪ್ರಸಂಗನೇನಾದರೂ ನಡೆವುದೋ ಇಲ್ಲವೋ?-ಎಂದು ಕೇಳಲಾಗಿ; ಮಯೂರಕನು ಪ್ರತ್ಯುತ್ತರವ ಹೇಳುದುದು— ಸ್ವಾಮೀ, ಕೇಳಿ. ನೀವು ಹೊರಟುಬಂದ ಮೇಲೆ ಕಾದಂಬರೀದೇವಿಯು ಊಳಿಗದವರು ಸಹ ಉಪ್ಪರಿಗೆಯನೇಱಿ, ಕುದುರೆಯ ದೂಳುವಿಡಿದು ನೀವು ತೆರಳಿದ ದಾರಿಯ ನೋಡುತ್ತ, ಕರುಬತನದಿಂದ ಕಾದಂಬರಿಯನು ಸೂರ್ಯಕಿರಣಗಳು ಸೋಂಕದಂತೆ ಆವರಿಸಿಕೊಂಡಿರುವ ಚಂದ್ರ ನಂತೆಸೆವ ಬೆಳಗೊಡೆಯ ನೆೞಲಿನಲ್ಲಿ ಮದಲೇಖೆಯ ಹೆಗಲ ಮೇಲೆ ಮುಖವನಿರಿಸಿ ಕೊಂಡು, ಪ್ರೀತಿಯಿಂದ ಪಾಲ್ಗಡಲ ತೆರೆಗಳಂತೆ ಮುಸಗುವ ನೋಟಗಳಿಂದ ದೆಸೆಯನೆ ನನೆಯಿಕ್ಕುವಂತೆ ಬಹು ಹೊತ್ತು ಇದ್ದು, ಆಮೇಲೆ ದುಃಖುಗೂಡಿ ಅಲ್ಲಿಂದ ಇೞಿದು ಪ್ರಯಾಸದಮೇಲೆ ಒಂದಿಷ್ಟುಹೊತ್ತು ಓಲಗದಲ್ಲಿದ್ದು ಎದ್ದು ಹೋಗುವಲ್ಲಿ ವಿರಹಪರವಶೆಯಾಗಿ ಬೞಲಿ ನಡೆವುದಱಿಂದ ನೆಲದಲ್ಲಿ ಚೆಲ್ಲಿದ ಹೂವುಗಳ ಎಡಹಿ ಮುಗ್ಗಿಬಿದ್ದಾಳೆಂಬ ಭಯದಿಂದ ಎಚ್ಚಱಿಸುವಂತೆ ಕೂಗುವ ತುಂಬಿಗಳ ಧ್ವನಿಯನಾಲಿಸುತ್ತ, ಕೈಯುಗುರಳ ಕಾಂತಿಯನು ಜಲಧಾರೆಯೆಂದು ಬಯಸಿ ಕೊರಲ ನೆಗಪಿ ಬೞಸಂದು ಬರುವ ನವಿಲುಗಳ ಕೊರಲಿಗೆ ಕೈಯಿಂದ ಸಡಿಲಿ ಬೀೞುವ ಬಳೆಗಳನು ಕೇಕಾಧ್ವನಿ ಪೊಱಮಡುವಂತೆ ತೊಡಿಸುತ್ತೆ, ಕ್ರೀಡಾ ಪರ್ವತದ ದಾರಿವಿಡಿದು ಹಜ್ಜೆಹಜ್ಜೆಗೆ ಎಡಬಲದೊಳಿರುವ ಎಳೆವಳ್ಳಿಗಳನು ಕೈಗಳಿಂ ನೆಮ್ಮುತ ಮನಸ್ಸಿನಿಂದ ನಿಮ್ಮ ಗುಣಗಳನೆ ಅವಲಂಬಿಸುತ, ಆಕ್ರೀಡಾಪರ್ವತದಲ್ಲಿ ನೀವು ಇದ್ದಬೞಿಗೆ ಬಂದು, ಅಲ್ಲಿ- ಚಂದ್ರಾಪೀಡನು ಈಹೊದಱುವನೆಯಲ್ಲಿ ಕಲ್ಲುಮಂಚದ ಮೇಲೆ ಮಲಗಿ ಇದ್ದನು; ಈಮಣಿಮಂಟಪದಲ್ಲಿ ಕುಳಿತಿದ್ದನು; ಪನ್ನೀರ ಪರಿಮಳಕ್ಕೆಱಿಗಿದ ತುಂಬಿಯಿಂದ ಕಪ್ಪುವಡೆದ ಈಕಲ್ಲಱೆಯಲ್ಲಿ ಮಿಂದನು; ಕುಸುಮಪರಾಗದಿಂದ ಧೂಳಿವಡೆದ ಈಹೂಱೆಯ ತಡಿಯಲ್ಲಿ ದೇವಪೂಜೆಯ ಮಾಡಿದನು; ಈಸ್ಫಟಿಕದ ಕಲ್ಲಱೆಯ ಮೇಲೆ ಭೋಜನವ ಮಾಡಿದನು. ಚಂದನ ರಸದಿಂದ ಕೆಸಱುವಡೆದ ಈ ಹಾಸಿಕೆಯಮೇಲೆ ನಿದ್ರೆಗೈದನೆಂದು ಮತ್ತೆ ಮತ್ತೆ ಹೇೞುವ ಸಖಿಯರ ನುಡಿಗಳ ಕೇಳುತ್ತ, ಆ ಕುಱುಹುಗಳ ನೋಡುತ್ತ, ಹಗಲೆಲ್ಲ ವನು ಕಳೆದು ಸಾಯಂಕಾಲದಮೇಲೆ ಮಹಾಶ್ವೇತೆಯ ನಿರ್ಬಂಧದ ಮಾತ ಮಾರ ಲಾಱದೆ, ನೀವು ಭೋಜನವ ಮಾಡಿದ ಸ್ಫಟಿಕದ ಕಲ್ಲಱೆಯ ಮೇಲೆ ಭೋಜನವ ಮಾಡಿ ಸೂರ್ಯಾಸ್ತಮಯವಾಗಿ ಚಂದ್ರೋದಯವಾದಮೇಲೆ ಚಂದ್ರಕಾಂತದ

ಪುತ್ತಳಿಯಂತೆ ಕರಗುತ ಪ್ರತಿಬಿಂಬದ ನೆವದಿಂದ ಚಂದ್ರನು ಕಪೋಲವ ಸೇರಿ ಯಾನು ಎಂದು ಭಯಪಟ್ಟಂತೆ ಗಲ್ಲವನು ಕರತಳದಿಂ ಮುಚ್ಚಿಸಿ, ಅದೇನನೋ ಚಿಂತಿಸುತ್ತ, ಒಂದಿಷ್ಟು ಹೊತ್ತಿನಮೇಲೆ ಎದ್ದು ಕಾಲುಗುರುಗಳಲ್ಲಿ ಪ್ರತಿಬಿಂಬಿಸಿದ ಚಂದ್ರಬಿಂಬಗಳಿಂದ ಭಾರವಾದಂತಿರುವ ಹಜ್ಜೆಗಳನು ಪ್ರಯಾಸದಿಂದಿಡುತ್ತ, ಮಲಗುವ ಮನೆಗೆ ಬಂದು ಹಾಸಿಕೆಯೊಳು ಮೆಯ್ಯನೀಡಾಡಿ ಪ್ರಬಲವಾದ ಶಿರೋ ವೇದನೆಯಿಂದ ಹೊರಳುತ, ಅದೇನೋ ಒಂದು ವ್ಯಾಧಿಯಿಂದ ತಾಪಜ್ವರವುಂಟಾಗಿ ನೈದಿಲುಗೊಳದೊಡನೆ ಕಣ್ಮುಚ್ಚದೆ ಚಕ್ರವಾಕಗಳು ಸಹ ದುಃಖಪಡುತ ರಾತ್ರಿ ಯನು ಕಳೆದು ಉದಯಕಾಲದಲ್ಲಿ ನನ್ನ ಕರೆಯಿಸಿ ದೇವರ ವೃತ್ತಾಂತವನು ತಿಳಿದು ಕರೆದುಕೊಂಡುಬರುವ ನಿಮಿತ್ತವಾಗಿ ಇಲ್ಲಿಗೆ ಕಳುಹಿದರು— ಎಂದು ಮಯೂರ ಕನು ಹೇಳಲಾಗಿ; ಆ ಮಾತುಗಳನು ಕೇಳಿ ಚಂದ್ರಾಪೀಡನು ಎದ್ದು ಕದುಬುಗೂಡಿ 'ಕುದುರೆ' ಎನುತ ಗೂಡಾರವ ಹೊರಡುವನಿತರೊಳ್ಳಿಯೆ ಹಲ್ಲಣಿಸಿ ಅಡ್ಡಮಾಡಿದ ಇಂದ್ರಾಯುಧವನೇರಿಕೊಂಡು ತನ್ನ ಸಂಚಿಯೂಳಿಗದ ಪತ್ರಲೇಖೆಯನು ಬೆನ್ನಹಿಂದೆ ಕುಳ್ಳಿರಿಸಿಕೊಂಡು, ವೈಶಂಪಾಯನನ ಪಾಳೆಯದ ಕಾವಲಿರಿಸಿ, ಸಂಗಡ ಬರುವ ಊಳಿಗದವರನು ತಿರುಗಿ ಕಳುಹಿಸಿ, ಮಯೂರಕನಿಗೆ ಮತ್ತೊಂದು ದಿವ್ಯಾಶ್ವವನು ಕೊಡಿಸಿ, ಅತಿವೇಗದಿಂದ ಹೇಮಕೂಟಪರ್ವತವನು ಸೇರಿ, ಕಾದಂ ಬರಿಯ ಅರಮನೆಯ ಬಾಗಿಲಲಿ ಕುದುರೆಯ ಬಾಗಿಲ ಕಾವವನ ವಶಕ್ಕೆ ಬಿಟ್ಟು, ಪತ್ರಲೇಖೆ ಸಹ ಒಳಹೊಕ್ಕುಹೋಗುತ ಅಲ್ಲಿ ಇದಿರಾಗಿ ಬರುವ ಮುದುಕನೊಬ್ಬ ನನು ಕಂಡು– ಕಾದಂಬರಿ ಆವ ಬಳಿಯಲ್ಲಿದ್ದಾಳು ?– ಎಂದು ಕೇಳಲಾಗಿ, ಅವನು ಕೈಮುಗಿದು– ಕ್ರೀಡಾಪರ್ವತದ ಬಳಿಯಲ್ಲಿದ್ದಾಳೆ– ಎಂದು ಹೇಳಿ ಹೋದಲ್ಲಿ; ದಾರಿವಿಡಿದು ನಡೆವ ನವಿಲುಗಳ ಬಳಿವಿಡಿದು ಶೃಂಗಾರತೋಟದೊಳಗೆ ಕೆಲವು ದೂರ ನಡೆದು, ಎಲ್ಲಿ ಬಾಳೆಯ ತೋಟದಲ್ಲಿ ಕಪ್ಪುರದ ಬಾಳೆಯ ಕಾಂತಿ ಯಿಂದ ಸೂರ್ಯಕಿರಣಗಳು ಗರಿಕೆಯಂತಾಗಿ ಹಗಲು ಹಸುರೆನಿಸಿ ಕಾಣಿಸುವುವೊ ಅಬಳಿ ಎಡೆಎಡದೆ ತಾವರೆಯೆಸಳುಗಳಿಂದ ಹೊದಿಸಿದ ಹಿಮಗೃಹಂಗಳನು ಕಂಡನು. ಅತ್ತಲಿಂದ ಹೊರಟು ಸವನದ ಸೇವೆಯ ನೆವದಿಂದ ತಿಳಿನೀರನೆ ಉಟ್ಟುಕೊಂಡಂತೆ ಧರಿಸಿದ ತಾವರೆಯ ದಂಟಿನ ತೊಡಿಗೆಯಿಂದ ಬಿಳಿದೆನಿಸಿ, ಕಿವಿಯಲಿಟ್ಟ ತಾಳೆಯ ಹೂವಿನ ಓಲೆಗಳಿಂದ ದಂತದ ಓಲೆಗಳು ನಗುವಂತೆ, ಸ್ಪರ್ಶ ಲೋಭದಿಂದ ಹಗಲಿನಲ್ಲಿಯೂ ಮುಖವ ಸೇರಿರುವ ಚಂದ್ರನಂತೆಸೆವ ಚಂದನದ ಬೊಟ್ಟಿನಿಂ ಬಾಗೆಯ ಹೂವಿನಂತೆ ಕರ್ಣಾವತಂಸವಾಗಿ ಕಿವಿಯ ಮೇಲಿಟ್ಟ ಪಾಪೆ

ಸೆಯ ಗೊಂಚಲಿಂ ಸ್ತನಗಳಿಗೆ ಕಪ್ಪುರದ ಧೂಳಿಯಿಂದ ಮಸುಳಿಸಿದ ಬಕುಳದ ದಂಡೆಗಳಿಗೆ ಮೇಲುದಾಗಿ ಧರಿಸಿದ ತಾವರೆಯೆಸಳುಗಳಿಂದ ಸೂರ್ಯಕಿರಣಗಳ ಮೇಗಣ ಕೋಪದಿಂದ ಪೌಜುಮಾಡಿಕೊಂಡುಬರುವ ಚಂದ್ರಕಿರಣಗಳಂತೆಸೆವ ತಾವರೆಯ ದಂಟಿನ ನೂಲಿನ ಚಾಮರಗಳಿಂ ಬೆಳ್ಗೊಡೆಗಳಾಗಿ ಧರಿಸಿದ ಬೆಳ್ದಾವರೆಯ ಬಿಳಿಯ ನೈದಿಲು ಎಱೆವಾಱೆಯಲೆ ಪೂಗೊಂಚಲುಗಳಿಂ ಬಿಸಿಲ ಪರಿಹರಿಸಿಕೊಳುತ್ತ ಜಲದೇವತೆಗಳ ವೊತ್ತದಂತೆ ವರುಣನೈಶ್ವರ್ಯಸಮೂಹದಂತೆ ಶರತ್ಕಾಲದ ಸಂಘದಂತೆ ತಣ್ಗೊಳಂಗಳ ಸಮೂಹದಂತೆ ಶೈತ್ಯೋಪಚಾರವ ಮಾಡುವಲ್ಲಿ ಜಾಣೆಯರಾದ ಕಾದಂಬರಿಯ ಊಳಿಗದವರನು ಕಂಡನು. ಅಲ್ಲಿಂದ ನಡೆದು ಆಬಱಿಯ ಇಕ್ಕೆಲದ ಜಗಲಿಗಳಿಗೆ ಚಂದನಪಂಕದಿಂ ಸಾರಿಸಿ ಬಾಱೆಯ ಕಂಭದ ಬಾಗಿಲವಾಡಕ್ಕೆ ತಾವರೆಯ ಹೂಗಳಿಂದು ದುಂಡುಮಲ್ಲಿಗೆಯ ಸರಂಗಳಂ ಬಿಟ್ಟು ಚಿಗುರುದೋರಣವ ಕಟ್ಟಿ ಹೂವಿನ ಗೊಂಚಲುಗಳಿಂ ಜಲ್ಲಿಗಳ ಕಟ್ಟಿ ಎರಡು ಭಾಗದಲ್ಲಿಯು ತಾವರೆಯ ದಂಟುಗಳೆಂಬ ಬೆತ್ತಗಳ ಹಿಡಿದು ನಿಂದಿರುವ ಕಾವಲವರಿಂದೊಪ್ಪುವ ಬಾಗಿಲಿಂದೊಳ ಹೊಕ್ಕು ಬಳಸಿ ನೋಡುವಲ್ಲಿ, ಒಂದು ಬಱಿ ಎರಡುತಡಿಯಲ್ಲಿ ನೆಟ್ಟಿರುವ ಕದ್ದಾಳೆಯ ತೋಪಿನಿಂ ಚೆಲ್ಲಿದ ನೈದಿಲ ಧೂಳಿಯೆಂಬ ಮಱಲಿನಿಂದೆಸೆವ ಚಂದನರಸದ ನದಿಯನು, ಮತ್ತೊಂದು ಬಱಿ ಏಲಾರಸದಿಂ ತೊಳೆದುದಱಿಂದ ಕಪ್ಪಾಗಿ ಕೈಸೋಂಕಿನಿಂ ತಿಳಿಯತಕ್ಕ ಸ್ಫಟಿಕದ ಮನೆಗಳನು, ಮತ್ತೊಂದು ಬಱಿ ಬಾಗೆಯ ಹೂವಿನೆಸಳುಗಳಂ ನೆಲಕ್ಕೆ ಹುಲ್ಲ ಹಸುರಾಗಿ ಹರಹಿ ತಾವರೆಯ ದಂಟುಗಳೆಂಬ ಸೂತ್ರದ ಕೊಳಗಳಿಂದೊಪ್ಪುವ ಜಲಸೂತ್ರದ ಮನೆಯ ಮೇಲ್ಗಡೆಯಲ್ಲಿ ಬಕುಳದ ಹೂವಿನ ಧೂಳುಗಳಿಂದ ಮಸುಳಿಸಿದ ಜಂತ್ರದ ನವಿಲುಗಳನು, ಮತ್ತೊಂದು ಬಱಿ ಮಾವಿನ ನೇಱಿಲ ಚಿಗುರುಗಳಿಂದ ಹೊದಿಸುವ ಪರ್ಣಶಾಲೆಗಳನು, ಮತ್ತೊಂದೆಡೆಯಲ್ಲಿ ತಾವರೆಯ ಕೊಳಗಳಲ್ಲಿ ಕ್ರೀಡಿಸುವ ಜಂತ್ರದ ಆನೆಮಱಿಗಳನು, ಮತ್ತೊಂದು ಬಱಿಯಲ್ಲಿ ಪನ್ನೀರ ಬಾವಿಗಳಲ್ಲಿ ಬಕುಳದ ಹೂವಿನ ಸರಗಳೆಂಬ ಹಗ್ಗಗಳಿಂದ ತಾವರೆಯ ಎಲೆಯ ಪೊಟ್ಟಣಗಳಿಂ ನೀರ ಸೇದಿ ತಾಳೆಯ ಹೂವೆಂಬ ದೋಣಿಯಿಂದ ತುಂಬುವ ಗಂಧದ ತೊಟ್ಟಿಗಳನು, ಮತ್ತೊಂದೆಡೆಯಲ್ಲಿ ಸ್ಫಟಿಕದ ಬೆಳ್ವಕ್ಕಿಗಳ ಸಾಲಿನಿಂದ ಕೃತ್ರಿಮದ ಕಾಮನ ಬಿಲ್ಲುಗಳಿಂದ ಒಪ್ಪುವ ಮಱಿಗೆಱೆವ ಮಾಯಾಮೇಘಮಾಲೆಗಳನು, ಒಂದೆಡೆಯಲ್ಲಿ ಸುತ್ತ ಬೆಳೆದಿರುವ ಜವೆಯ ಪೈರುಗಳಿಂ ನೀರ ಮೇಲೆ ಚೆಲ್ಲಿರುವ ಜಾಜಿಮಲ್ಲಿಗೆಯ ಮೊಗ್ಗುಗಳಿಂದೊಪ್ಪುವ ಚಂದನ ರಸದ ನಡೆಬಾವಿಗಳಲ್ಲಿ ಶೈತ್ಯನಿಮಿತ್ತವಾಗಿ ನನೆಯಿಕ್ಕಿದ ಕಂಠಮಾಲೆಗಳನು,

ಮತ್ತೊಂದೆಡೆಯಲ್ಲಿ ಸಣ್ಣಮುತ್ತುಗಳ ಧೂಳಿಗಳಿಂ ಪಾತೆಯು ಕಟ್ಟಿ ಆವಾಗಲೂ ಜಲಬಿಂದುಗಳೊಗುವ ಜಲಸೂತ್ರದ ಮರಗಳನು, ಮತ್ತೊಂದೆಡೆಯಲ್ಲಿ ಱಕ್ಕೆಯು ಗಾಳಿಯಿಂದ ಜಲಸೂತ್ರದಿಂದುಗುವ ಜಲಬಿಂದುಗಳನು ಮಂಜಿನಂತಾಗಿಸುವ ಜಂತ್ರದ ಹಕ್ಕಿಗಳನು, ಒಂದೆಡೆಯಲ್ಲಿ ತುಂಬಿಗಳೆಂಬ ಕಿಱುಗಂಟೆಗಳ ದನಿಗಳಿಂ ದೊಪ್ಪುವ ನೈದಿಲುದಂಡೆಗಳ ಉಯ್ಯಾಲೆಗಳನು, ಒಂದೆಡೆಯಲ್ಲಿ ತಾವರೆಯೆಲೆಗಳ ಹೊದಿಸಿರುವ ಪನ್ನೀರ ಕುಪ್ಪಿಗೆಗಳನು, ಒಂದೆಡೆಯಲ್ಲಿ ನಾರೆಡೆದ ಬಾಱೆಯ ಕಂಬವ ಕಾವಿಗಮರಿಸಿದ ಹೂಗೊಂಚಲ ಸತ್ತಿಗೆಗಳನು, ಒಂದೆಡೆಯಲ್ಲಿ ಕೈಗಳಿಂ ನಲುಗಿಸಿ ಹಿಂಡಿದ ಕಪ್ಪುರವಾಱೆಯ ಚಿಗುರಿನ ರಸದಿಂ ನನೆದ ತಾವರೆಯ ನೂಲಿನ ಸೀಱೆಗಳನು, ಒಂದೆಡೆಯಲ್ಲಿ ತಾವರೆಯೆಸಳುಗಳೆಂಬ ಬೀಸಣಿಗೆಯಿಂ ಬೀಸುತ್ತ ಪಟಿಕದ ಬಟ್ಟಲೊಳಿರುವ ಶೀತೌಷಧಿರಸಗಳನು, ಮತ್ತು ಈಬಗೆಗಳಲ್ಲಿ ಊಳಿಗದವರು ನಡೆಸುವ ಶೈತ್ಯೋಪಚಾರಂಗಳನು ನೋಡಿ ಹಿಮವತ್ಪರ್ವತದ ಹೃದಯದಂತೆ, ವರುಣನ ಜಲಕ್ರೀಡೆಯ ಮನೆಯಂತೆ, ಸಕಲಚಂದ್ರಕಲೆಗಳ ತವರ್ಮನೆಯಂತೆ, ಚಂದನವನದೇವತೆಗಳ ಕುಲಗೃಹದಂತೆ, ಚಂದ್ರಕಾಂತದ ಶಿಲೆಗಳ ಜನ್ಮಭೂಮಿಯಂತೆ, ಹಿಮಗಾಲದ ರಾತ್ರಿಯ ಬಿಡಾರದ ಮನೆಯಂತೆ, ಮೞೆಗಾಲದ ಸಂಕೇತದ ಶಾಲೆಯಂತೆ, ಸಕಲದಿನಗಳು ಬೇಸಗೆಯ ಸೆಕೆಯ ಹೋಗಾಡಿಕೊಂಬೆಡೆಯಂತೆ, ಸಮುದ್ರಗಳು ಬಡಬಾಗ್ನಿಯ ಸಂತಾಪವಂ ಪೋಗಾಡಿಕೊಂಬ ತಾಣದಂತೆ, ಮುಗಿಲುಗಳು ಬಿಸಿಲ ಬೇಗೆಗೆ ಬಯಸುವ ಬೞಯಂತೆ, ನೈದಿಲುಗಳು ಚಂದ್ರವಿರಹದಿಂದ ದುಸ್ಸಹವಾದ ಹಗಲುಗಳ ಕಳೆವ ತಾವಿನಂತೆ, ಮನ್ಮಥನು ಈಶ್ವರನ ಪಣೆಗಣ್ಣುರಿಯನಾರಿಸಿಕೊಂಬ ಕ್ಷೇತ್ರ ದಂತೆ, ಜಲಸೂತ್ರದ ಜಲಧಾರಾಸಹಸ್ರಕಳುಕಿ ಪೊಱಮುಟ್ಟುವೋ ಶೈತ್ಯಭಯ ದಿಂದ ಸೇರಲಮ್ಮವೋ ಎಂಬಂತೆ ಕಾಣಪಡದಿರುವ ಸೂರ್ಯನ ಕಿರಣಂಗಳಿಂ, ಬಕುಳದ ಹೂ ಎಲೆಗಳೆಂಬ ರೋಮಾಂಚವಡೆದಂತಿರುವ ತಂಗಾಳಿಯಿಂ, ಗಾಳಿಗೆ ಎಲೆ ಅಲ್ಲಾಡುವುದಱಿಂದ ಚಳಿಗೆ ಕಂಪ ಹುಟ್ಟಿದಂತೆ ಇರುವ ಬಾಱೆಯ ಮರಗಳಿಂ, ಪೂವಿನ ಪರಿಮಳದಿಂದ ದನಿಗೆಯ್ಯುತಿರುವುದಱಿಂದ ಬಲುನಡುಕ ಹುಟ್ಟಿದಂತಿರುವ ತುಂಬಿಗಳು ತುಂಬಿರುವುದಱಿಂದ ಚಳಿಗಂಜಿ ಕಱಿಯ ಕಂಬಳಿಯಂ ಮುಸುಕಿಟ್ಟಂತಿರುವ ಲತೆಗಳಿಂ, ಒಪ್ಪುವ ಕುಳಿರ್ವನೆಗೆ ಬಂದು; ಅಲ್ಲಿ ಒಳಗೆ ಹೊಱಗೆ ವ್ಯಾಪಿಸಿರುವ ಶೀತತ್ವರಸದಿಂದ ತನ್ನ ಮನವ ಚಂದ್ರ ಮಯಮೆಂದು, ಇಂದ್ರಿಯಂಗಳ ಕುಮುದಮಯವೆಂದು, ಬುದ್ಧಿಯ ತಾವರೆಯ

ದಂಟಿನ ಮಯವೆಂದು, ಸೂರ್ಯಕಿರಣಗಳ ನೀಹಾರಮಯವೆಂದು, ಬಿಸಿಲ ಚಂದನ ಮಯವೆಂದು, ಗಾಳಿಯ ಕರ್ಪೂರರಸಮಯವೆಂದು, ಕಾಲವ ಜಲಮಯವೆಂದು, ಮೂಱುಲೋಕವ ಹಿಮಮಯವೆಂದು ಎಣಿಸುತ್ತ; ಆಬೞಿಯ ಒಂದು ಪ್ರದೇಶ ದಲ್ಲಿ ಸಕಲಸಖಿಗಳು ಸುತ್ತು ಮುತ್ತಿಕೊಂಡಿರುವುದಱಿಂದ ಆಕಾಶದಿಂದ ಭೂಮಿ ಗಿೞಿತಂದು ಸಕಲ ನದಿಗಳು ಸುತ್ತಿಕೊಂಡಿರುವ ಗಂಗಾನದಿಯಂತೆ ಬಳಸಿರುವ ಕರ್ಪೂರರಸದ ಕಾಲುವೆಯ ನಡುವೆ ತಾವರೆಯ ದಂಟಿನ ಮಂಟಪದಲ್ಲಿ ಹೂವಿನ ಹಾಸಿಕೆಯಮೇಲೆ ಮಲಗಿ ಕಂಠಮಾಲೆ ತೋಳ ಬಳೆ ಕಾಲಂದಿಗೆಯಾದಿಯಾಗಿ ತಾವರೆಯ ದಂಟುಗಳ ಧರಿಸಿರುವುದಱಿಂದ ಮನ್ಮಥನು ಕೊರಲುಗಳಿಗೆ ಸಂಕಲೆಯ ತೊಡಿಸುವಂತೆ, ಹಣೆಗೆ ಬೊಟ್ಟಿಟ್ಟು ಇರುವುದಱಿಂದ ಚಂದ್ರನು ಬಯಸಿ ಮುಖವ ಸೋಂಕುವಂತೆ, ಕಣ್ಣೀರು ಸುರಿವುದಱಿಂದ ವರುಣನು ನಯನಚುಂಬನವ ಮಾಡು ವಂತೆ, ಉಸಿರು ವೆಗ್ಗಳಿಸಿರುವುದಱಿಂದ ವಾಯುವು ಮುಖಚುಂಬನವ ಮಾಡು ವಂತೆ, ಮೆಯ್ಯಲ್ಲಿ ತಾಪ ಹೆಚ್ಚಿರುವುದಱಿಂದ ಸೂರ್ಯನು ಆಲಿಂಗನವ ಮಾಡು ವಂತೆ, ಮನಸ್ಸಿನಲ್ಲಿ ವಿರಹವೇದನೆಯುಂಟಾಗಿರುವುದಱಿಂದ ಅಗ್ನಿಯು ಹೃದಯವ ಹೊಕ್ಕಂತೆ, ಮೆಯ್ಯಲ್ಲಿ ಬೆವರು ಉಂಟಾಗಿರುವುದಱಿಂದ ಜಲದೇವತೆಯು ಮೆಯ್ಸೋಂಕಿದಂತೆ, ದೇವತೆಗಳು ಮೊದಲಾಗಿಯು ನೋಡಿ ಸೈರಿಸಲಱಿಯದಂತಿರುವ ಸೌಂದರ್ಯವುಂಟಾಗಿ ಅವಯವಂಗಳು ನಿತ್ರಾಣವಾಗಿರುವುದಱಿಂದ ಪ್ರಾಣ ಕಾಂತನ ಬೞಿಗೈದುವ ಮನಸ್ಸು ಸರ್ವಶರೀರದ ತ್ರಾಣವನು ಸಂಗಡ ಕರೆದು ಕೊಂಡು ಹೋದುವೆಂಬಂತೆ, ಪೂಸಿದ ಗಂಧವೊಣಗಿ ರೋಮಾಂಚವೆದ್ದಿರು ವುದಱಿಂದ ತಾಪಶಾಂತಿನಿಮಿತ್ತವಾಗಿ ಮುತ್ತಿನ ಬಲೆಯ ಹೊದಿಸಿದಂತೆ, ಕರ್ಣಾವ ತಂಸದ ಪರಿಮಳಕೆಱಗುವ ತುಂಬಿಗಳು ಬೆವರಿರುವ ಕಪೋಲವನು ಱೆಕ್ಕೆಯ ಗಾಳಿಯಿಂ ಬೀಸುವಂತೆ ಕಾಣಿಸುತ್ತ, ಕಣ್ಣೀರು ಕಡೆಗಣ್ಣಿನಿಂ ಕಿವಿಯ ಬೞಿಗೆ ಹರಿವುದಱಿಂದ ಪ್ರಾಣಕಾಂತನ ಮಾತ ಕೇಳದೆ ಬೆಂದಿರುವ ಕಿವಿಗೆ ನೀರ ಚೆಲ್ಲು ವಂತೆ, ಕಿವಿಯ ಮೇಲೆ ತಾಳೆಹೂವಿನೆಸಳ ಧರಿಸಿರುವುದಱಿಂದ ಕಣ್ಣೀರ ಕಾಲುವೆಗೆ ದೋಣಿಯ ಕಟ್ಟಿದಂತೆ, ನಿಡಿದಾದ ಉಸಿರ ಗಾಳಿಗೆ ಸ್ತನದಿಂದ ತೊಲಗುವ ಮೇಲುದಿನ ಸೆಱಗು ಶರೀರದ ತಾಪಕಳುಕಿ ಬಿಟ್ಟುಹೋಗಿರುವ ಕಾಯ ಕಾಂತಿ ಯಂತೆ, ಉಭಯಚಾಮರಗಳು ಪ್ರತಿಬಿಂಬಿಸಿರುವುದಱಿಂದ ನಾಯಕನ ಬೞಿಗೆ ಹೋಗುವ ತವಕದಿಂದ ಱೆಕ್ಕೆಯ ಪಡೆದಂತಿರುವ ಸ್ತನಗಳನು ಕೈಯಿಂದೊಡಂ ಬಡಿಸುವಂತೆ, ಪನ್ನೀರುಗಳಿಂ ತಂಪುವಡೆದಿರುವ ಕಲ್ಲುಬೊಂಬೆಗಳನಟಗಡಿಗೆ

ತಕ್ಕೈಸುತ, ಕಪ್ಪುರದ ಬೊಂಬೆಯಂ ಕಪೋಲದಿಂದೊತ್ತಿಕೊಳುತ್ತ, ಮತ್ತೆಮತ್ತೆ ಗಂಧದ ಕೆಸಱಿನೊಳು ಕಾಲ ನೀಡುತ್ತ, ಸ್ತನಂಗಳಿಂ ಪ್ರತಿಬಿಂಬಿಸಿರುವ ನೆವದಿಂದ ತನ್ನ ಮುಖವೆ ತನ್ನ ನೋಡುವುದಕ್ಕೆ ಬಯಸಿ ಅಭಿಮುಖವಾಯಿತು ಎಂಬಂತೆ, ಕಪೋಲದಲ್ಲಿ ಪ್ರತಿಬಿಂಬಿಸಿರುವ ನೆವದಿಂದ ಕರ್ಣಾವತಂಸವಾಗಿ ಈ ಚಿಗುರ ಮೋಹಿಸಿ ಕಪೋಲಚುಂಬನವ ಮಾಡುವಂತೆ ಇರುವ, ಶ್ವೇತಚಂದನವ ಧರಿಸಿಯೂ ರಾಗವುಂಟಾಗಿಯೂ, ಬಾಲೆಯಾಗಿಯೂ ಮನ್ಮಥಜನನಿಯಾಗಿಯೂ, ಪದ್ಮಿನಿಯಾಗಿಯೂ ಹಿಮವ ಬಯಸುತ್ತಿರುವ ಕಾದಂಬರಿಯನು ಕಂಡನು.

ಆಗ ಕಾದಂಬರಿಯು ಕ್ಷಣಕ್ಷಣಕ್ಕೆ ಚಂದ್ರಾಪೀಡನು ಈಬಱಿಗೆ ಬಂದನು ಈ ಬಱಿಗೆ ಬಂದನು, ಎಂದು ಬಂದು ಹೇೞುವ ಊೞಿಗದ ಹೆಣ್ಣುಗಳನು ವಿರಹವೇದನೆಯಿಂದ ನೊಂದು ನುಡಿಯಲಱಿಯದೆ ಇದ್ದರೂ ಸ್ನೇಹಗೂಡಿದ ದೃಷ್ಟಿಯನು ಕಡೆಗಣ್ಣಿಗೆ ಸೇರಿಸಿ ನೋಡುವ ನೋಟದಿಂದ-ಅದೇನು ಪೇೞು, ಬಂದನೆ? ದಿಟವೆ? ನೀನು ಕಂಡೆಯ? ಎಷ್ಟು ದೂರದಲ್ಲಿದ್ದಾನೆ? ಎಲ್ಲಿ ಇದ್ದಾನೆ?-ಎಂದು ಕೇಳುವಂತಿದ್ದಳು.

ಆಮೇಲೆ ಚಂದ್ರಾಪೀಡನು ಸಮೀಪಕ್ಕೆ ಬಂದುದನು ಕಂಡು ಊರಿಗೆ ತಂದ ಹೊಸಹುಲ್ಲೆಯಂತೆ ಬೆದಱುತ, ಎದ್ದು, ನಿಂತಲ್ಲಿ ಹೂವಿನ ಹಾಸಿಗೆಯಲ್ಲಿ ಮಲಗಿರ್ದ ಪರಿಮಳಕ್ಕೆಱಗುವ ತಂಬಿವಿಂಡುಗಳ ಗಲಗಿಗೆ ನಿದ್ದೆ ತೀರಿದಂತೆ, ಕದುಬುಗೂಡಿ ಏೞುವುದಱಿಂದ ಮೇಲುದು ಜಾಱಿಲಾಗಿ ಎದೆಗೆ ಮಱೆಮಾಡಿಕೊಳ್ಳುವುದಕ್ಕೆ ಕಂಠಮಾಲೆಯ ಕಾಂತಿಯ ಪಿಡಿದೆೞೆವಂತೆ, ಕೈಯೂಱಿಕೊಂಡೇೞುವುದಱಿಂದ ಚಂದ್ರಕಾಂತಶಿಲೆಗಳು ಬಿಗಿದ ನೆಲದಲ್ಲಿ ಕಾಣಿಸುವ ಪ್ರತಿಬಿಂಬವನು ಕೈಲಾಗ ಕೊಡಹೇೞಿ ಬೇಡುವಂತೆ, ಸಡಿಲಿದ ತುಱುಬ ಸಜ್ಜು ಮಾಡುವುದಕ್ಕೆ ಕೈಸೇರಿಸುವಲ್ಲಿ ಅಂಗೈಯ ಬೆಮರುಗಳಿಂದ ಪ್ರೋಕ್ಷಣಂಗೈದು ತನ್ನನು ಸಮರ್ಪಿಸುವಂತೆ, ನಾಚಿಕೆಗೂಡಿ ಮೆಯ್ಮುಱಿವುದಱಿಂದ ಮನ್ಮಥನು ಶರೀರವನು ನುಲಿದು ಹಿಂಡುವಂತೆ, ಕಣ್ಣೀರುಗಳು ಧಾರೆಯಾಗಿ ಸುರಿವುದಱಿಂದ ಕರ್ಣಾವತಂಸದ ಪೂಧೂಳಿಯಿಂದ ಉಜ್ಜಳಿಸಿದ ಕಪೋಲಸ್ಥಳವನು ತನ್ನ ಪ್ರಾಣಕಾಂತನ ಪ್ರತಿಬಿಂಬವು ಕಾಣಪಡಬೇಕೆಂಬಾಸೆಯಿಂದ ತೊಳೆವಂತೆ ಕಾಣಿಸುತ್ತ, ಪಣೆಯೊಳಿಟ್ಟ ಗಂಧದ ಬೊಟ್ಟಿನ ಭಾರದಿಂದಲೆಂಬಂತೆ ನಸು ಬಾಗಿದ ಮೊಗದಿಂ, ಆಕ್ಷಣದಲ್ಲ ನಿಡಿದಾದ ಕಡೆಗಣ್ಣಿಗೆ ಸೇರಿ ಚಂದ್ರಾಪೀಡನಿಗಭಿಮುಖವಾಗಿ ದೃಷ್ಟಿಗಳಿಂದೆೞೆಯಿಸಿ ಕೊಂಡಂತೆ ಎದ್ದು ನಿಂತಳು.

ಚಂದ್ರಾಪೀಡನು ಸಮೀಪಕ್ಕೆ ಸೇರಿ ಪೂರ್ವದಂತೆ ವಿನಯಗೂಡಿ ಮಹಾಶ್ವೇತೆಗೂ ಕಾದಂಬರಿಗೂ ಕೈಮುಗಿದನು. ಅವರಿಬ್ಬರೂ ತಿರುಗಿ ಚಂದ್ರಾಪೀಡನಿಗೆ ಕೈಮುಗಿದು ಆಹೂವಿನ ಹಾಸಿಕೆಯಲ್ಲಿಯೆ ಕುಳ್ಳಿರುವಲ್ಲಿ, ಹರಳುಗಳು ಕೆತ್ತಿಸಿದ ಚಿನ್ನದ ಮಣೆಯನು ಊಳಿಗದವರ ಕೈಯಿಂದ ತರಿಸಿಕೊಡಲಾಗಿ, ಅದನು ಕಾಲಿನಿಂದ ಕೆಲಕೊತ್ತರಿಸಿ ಚಂದ್ರಾಪೀಡನು ನೆಲದಲ್ಲಿಯೆ ಕುಳಿತುಕೊಂಡನು. ಆಮೇಲೆ ಮಯೂರಕನು ಕಾದಂಬರಿಯೊಡನೆ-ಅಮ್ಮ, ಇವಳು ಚಂದ್ರಾಪೀಡನಿಗೆ ಬಹು ಆಪ್ತೆಯಾದ ಸಂಚಿಯೂಳಿಗದ ಪತ್ರಲೇಖೆಯೆಂಬವಳು- ಎಂದು ತೋರಿಸಿದಲ್ಲಿ, ಕಾದಂಬರಿಯು ಪತ್ರಲೇಖೆಯನು ನೋಡಿ, ಬ್ರಹ್ಮದೇವರಿಗೆ ಮನುಷ್ಯಸ್ತ್ರೀಯರುಗಳಲ್ಲಿ ಏನು ಪಕ್ಷಪಾತವೊ! ಎಂದೆಣಿಸುತ್ತ, ಆಮೇಲೆ ಪತ್ರಲೇಖೆಯು ಕೈಮುಗಿಯಲಾಗಿ, ಆದರಣೆಗೂಡಿ ಸಮೀಪಕ್ಕೆ ಕರೆದು, ತನ್ನ ಊಳಿಗದವರು ಕೌತುಕಬಡುವಂತೆ ತನ್ನ ಬೆನ್ನ ಬಳಿಯ ಕುಳ್ಳಿರಿಸಿಕೊಂಡು, ನೋಡಿದ ಮಾತ್ರದಿಂದಲೆ ಬಹು ಪ್ರೀತಿ ಹೆಚ್ಚಿ ಮೈಕೈಗಳನು ತಡಹಿದಳು. ಚಂದ್ರಾಪೀಡನು ಆಬಗೆಯಲ್ಲಿರುವ ಕಾದಂಬರಿಯನು ನೋಡಿ ಮನಸ್ಸಿನಲ್ಲಿ ಎಣಿಸುವಲ್ಲಿ, ತನ್ನ ಮನಸ್ಸು ಬಹುಕಠಿನವಾಗಿ ಇದ್ದಂಥದು; ಈಗಲೂ ನಂಬಲಾರಿಯದೆ ಇದೆ. ಆಗಲಿ, ಇನ್ನೂ ವ್ಯಕ್ತವಾಗಿ ಮಾತನಾಡಿ ತಿಳಿಯಬೇಕು, ಎಂದು ಮಾತನಾಡಿದನು:—ಕಾದಂಬರೀ, ನಿನ್ನ ಶರೀರಕಾವನ ನಿಮಿತ್ತದಿಂದ ಈ ಸಂತಾಪವುಂಟಾಗಿದೆ? ಈಗ ನಿನ್ನ ನೋಡಿದುದರಿಂದ ನಿನಗಿಂತಲೂ ಅಧಿಕವಾಗಿ ನನಗೆ ಸಂತಾಪವಾಗಿದೆ. ನನ್ನ ಶರೀರವನು ಮೆಚ್ಚಿಸಿ ನಿನ್ನ ತಾಪವನು ನಿಲ್ಲಿಸಬೇಕಾಗಿದೆ. ನೀನು ಹೂವಿನ ಹಾಸಿಕೆಯಲ್ಲಿಯೆ ಹೊರಳುವುದನು ಕಂಡು ನಾನು ನಿಲಲಾರೆನು. ಆಭರಣಗಳಿಲ್ಲದೆ ಇರುವುದರಿಂದ ನಿನ್ನ ಭುಜಲತೆಗಳು ಹೂಗಳಿಲ್ಲದ ಲತೆಗಳಂತೆ ಕಾಣಿಸುತ್ತಲಿವೆ. ಈಚಿಂತೆಯನು ಬಿಟ್ಟು ಮಂಗಳಾಲಂಕಾರಗಳ ಮಾಡಿಕೋ—ಎಂದು ನುಡಿಯಲಾಗಿ; ಕೇಳಿ ಕಾದಂಬರಿಯು ಚಿಕ್ಕಹರೆಯದವಳಾದರೂ ಮನ್ಮಥನಿಂದ ಕೇಳಿದವಳಂತೆ ವ್ಯಂಗ್ಯಾರ್ಥವನ್ನು ತಿಳಿದಳು. ತಿಳಿದಿದ್ದರೂ ತನಗೆ ಇಷ್ಟೊಂದು ಭಾಗ್ಯ ಉಂಟಾದೀತೆ! ಎಂಬ ಯೋಚನೆಯಿಂದಲೂ ಕುಲವೆಣ್ಣಿಗೆ ಸಹಜವಾದ ನಾಚಿಕೆಯಿಂದಲೂ ಪ್ರತ್ಯುತ್ತರವನು ಕೊಡದೆ ಮತ್ತೊಂದು ನೆವದಿಂದ ಮುಗುಳುನಗೆದೋರಿದಳು.

ಆಮೇಲೆ ಮದಲೇಖೆಯು ಚಂದ್ರಾಪೀಡನೊಂದಿಗೆ ನುಡಿವಲ್ಲಿ- ಅಯ್ಯಾ, ಇವಳ ಸಂತಾಪವು ಇಂತಹ ನಿಮಿತ್ತದಿಂದ ಬಂದುದೆಂದು ಹೇಳಲಾಗದು.

ಸುಕುಮಾರಭಾವ ಉಂಟಾದವಳಿಗೆ ಆವ ವಸ್ತುವಿನಿಂದ ಸಂತಾಪವಾಗದು ? ತಾವರೆಯ ಎಲೆ ಮೊದಲಾಗಿಯು ಕಿಚ್ಚಿನಂತಿದೆ, ಬೆಳುದಿಂಗಳು ಬಿಸಿಲಿನಂತಿದೆ, ಶರೀರವು ಬಿಜ್ಜಣಿಗೆಯ ಗಾಳಿಗೆ ಹಾಱಿಹೋಗುವಂತಿದೆ. ಇನ್ನು ಹೇೞತಕ್ಕು ದೇನಿದೆ ? ಕಾವನೇ ಕಣೆಗೊಂಡನೆಂಬಂತೆ ಪೂಸರವೇ ಇವಳ ಕೊರಲ ಕೊಯ್ಯುತಿದೆ. ಪ್ರಾಣವ ಹಿಡಿದಿರುವುದಕ್ಕೆ ಧೀರತ್ವದಾಲಂಬನ ಹೊಱತಾಗಿ ಮತ್ತೊಂದು ಉಪಾಯ ಕಾಣಪಡಲಿಲ್ಲವೆಂದು ನುಡಿದಳು. ಕಾದಂಬರಿಯು ಆಮದಲೇಖೆಯ ಮಾತನೆ ತಾನು ಚಂದ್ರಾಪೀಡನಿಗೆ ನುಡಿದ ಉತ್ತರವಾಗಿ ಭಾವಿಸಿದಳು. ಚಂದ್ರಾಪೀಡನು ಆಮದಲೇಖೆ ನುಡಿದ ಮಾತು ಎರಡರ್ಥವಾಗಿರಲಾಗಿ; ಅದನು ನಿಶ್ಚಯವಾಗಿ ತಿಳಿಯಬೇಕು, ಎಂದು ಮಹಾಶ್ವೇತೆಯ ಕೂಡ ಕೆಲವು ಹೊತ್ತು ಉಪಚಾರಗೂಡಿ ಪ್ರಸಂಗವ ಮಾಡಿಕೊಂಡಿದ್ದು ತಾನು ತಿರುಗಿ ಪಾಳೆಯಕ್ಕೆ ಹೋಗುವುದಕ್ಕೆ ಬಹು ಪ್ರಯಾಸದಿಂದ ಅಪ್ಪಣೆಯನು ತೆಗೆದುಕೊಂಡು ಅರಮನೆಯಿಂದ ಹೊಱಟು ಪತ್ರಲೇಖೆ ಸಹ ಬರುವ ಸಮಯದಲ್ಲಿ, ಮಯೂರಕನು ಆಕಾದಂಬರಿಯ ಬಱಯಿಂದ ತ್ವರಿತದಲ್ಲಿ ಬಂದು ಚಂದ್ರಾಪೀಡನಿಗೆ ತಿಳಿಹುವಲ್ಲಿ-ಅಯ್ಯ, ಮದಲೇಖೆಯು ಬಿನ್ನಹಮಾಡಿ ಕಳುಹಿದುದು:—ಕಾದಂಬರೀದೇವಿಯು ಪತ್ರಲೇಖೆಯಲ್ಲಿ ಬಹುಪ್ರೀತಿಯಾಗಿ ಒಂದೆರಡು ದಿವಸವಿದ್ದು ಹೋಗುವ ನಿಮಿತ್ತವಾಗಿ ಕರೆದು ಕೊಂಡು ಬರಹೇೞರುವಳು, ಕಳುಹಿಸಿಕೊಡಿ- ಎನಲಾಗಿ; ಆಮಾತನ್ನು ಕೇಳಿ ಚಂದ್ರಾಪೀಡನು ನುಡಿದುದು— ಎಲೆ ಮಯೂರಕ, ಪತ್ರಲೇಖೆಯಲ್ಲಿ ಕಾದಂಬರೀದೇವಿಗೆ ಇಷ್ಟೊಂದು ಪ್ರೀತಿಯಿದ್ದಲ್ಲಿ ಇವಳು ಕೃತಾರ್ಥೆಯಾದಳು, ಇವಳ ಜನ್ಮ ಸಫಲವಾಯಿತು, ಕರೆದುಕೊಂಡು ಹೋಗು—ಎಂದು ಕಳುಹಿಸಿ, ತಾನು ಪಾಳೆಯಕ್ಕೆ ಬಂದು ಪ್ರವೇಶವಾಗುವಲ್ಲಿ, ತಂದೆಯ ಬಱಯಿಂದ ನಿರೂಪವ ಕೊಂಡುಬಂದ ಆಪ್ತನಾದ ಊೞಗದವನನು ಕಂಡು, ದೂರದಿಂದಲೆ ಕುದುರೆಯ ನಿಲಿಸಿ-ತಮ್ಮರಸು ಕ್ಷೇಮದಲ್ಲಿದ್ದಾರೆಯೇ ? ಪರಿವಾರಗಳೆಲ್ಲರಿಗೂ ಕ್ಷೆಮವೇ ? ತಮ್ಮ ತಾಯಿ ಹರುಷದಲ್ಲಿದ್ದಾಳೆಯೇ ? ಅಂತಃಪುರದಲ್ಲಿರುವ ಜನವೆಲ್ಲರೂ ಹರುಷದಲ್ಲಿದ್ದಾರೆಯೆ ? ಎಂದು ಕೇಳಲಾಗಿ; ಆಮನುಷ್ಯನು ಸಮೀಪಕ್ಕೆ ಹೋಗಿ ಕೈಮುಗಿದು- ಸಕಲರು ಕ್ಷೇಮದಲ್ಲಿದ್ದಾರೆ- ಎಂದು ತಿಳುಹಿ, ತಾರಾಪೀಡನು ಕಳುಹಿದ ನಿರೂಪವೊಂದು ಆಶುಕನಾಸ ಕಳುಹಿದ ಪತ್ರವೊಂದು ಈಎರಡನು ಕೊಡಲಾಗಿ; ಅದನು ಶಿರಸಾವಹಿಸಿ ಮುದ್ರೆಯ ತೆಗೆದು ನಿರೂಪವ ಓದಿಕೊಂಬಲ್ಲಿ ಅಲ್ಲಿ ಬರೆದಿದ್ದ ಒಕ್ಕಣೆ:—

ಸ್ವಸ್ತಿ, ಸಕಲರಾಜನ್ಯಶಿಖಂಡಶಿಖರೀಕೃತಚರಣಾರವಿಂದಪರಮಮಹೇಶ್ವರ ಮಹಾರಾಜಾಧಿರಾಜ ಉಜ್ಜಯಿನಿಯ ತಾರಾಪೀಡರಾಯನು ಸಮಸ್ತ ಸಂಪತ್ತುಗಳಿಗೂ ಆಶ್ರಯನಾದ ಚಂದ್ರಾಪೀಡನಿಗೆ ಮೂರ್ಧಾಘ್ರಾಣಪೂರ್ವಕವಾಗಿ ಬರೆಸಿ ಕಳುಹಿಸಿದ ಕಾರ್ಯ ಇಲ್ಲಿ ಸಕಲವಾಗಿ ಇದ್ದು ಪ್ರಜೆಗಳು ಕ್ಷೇಮದಲ್ಲಿದ್ದಾರೆ. ನೀವು ಊರಿಂದ ಊರಿಗೆ ಹೋಗಿ ಬಹುದಿವಸವಾಯಿತು. ನಿಮ್ಮನ್ನು ನೋಡಬೇಕೆಂದು ನಮ್ಮ ಮನಸ್ಸಿನಲ್ಲಿ ಬಹು ಪ್ರೀತಿಯಿದೆ. ಸಕಲ ಅಂತಃಪುರಸಹ ಅರಸಿತಿಯು ಆಸೆಯಲ್ಲಿದ್ದಾಳೆ. ನೀವು ಈವೋಲೆಯ ಓದಿದಾಕ್ಷಣವೆ ಸಾಗಿ ಬರುವುದು- ಎಂದು ಬರೆದಿದ್ದುದು. ಶುಕನಾಸನ ಓಲೆಯಲ್ಲಿಯೂ ಇದೆ ಒಕ್ಕಣೆ ಬರೆದಿರಲಾಗಿ ಓದಿ ನೋಡಿಕೊಂಡನು. ಆಸಮಯದಲ್ಲಿಯೇ ವೈಶಂಪಾಯನನು ತನಗೆ ಬಂದ ನಿರೂಪ ಆಶೀರ್ವಾದಪತ್ರಗಳನು ತೋಱಿ ಓದಕೊಡಲಾಗಿ, ಅವು ಚಂದ್ರಾಪೀಡನಿಗೆ ಬಂದ ನಿರೂಪಾನುಗುಣವಾಗಿದ್ದುವು. ಆಮೇಲೆ ಚಂದ್ರಾಪೀಡನು ನಿರೂಪದಲ್ಲಿ ‘ನಿರೂಪವ ಓದಿಕೊಳುತ ಲೇಸಾಗಿ ಬರುವುದು’ ಎಂದು ಬರೆದಿದ್ದಮೇಲೆ ವಿಳಂಬವಮಾಡಬಾರದೆಂದು ಆಗ ತಾನು ಏಱಿದ್ದ ಕುದುರೆಸಹವಾಗಿ ಪ್ರಯಾಣಪಟಹವ ಹೋಯಿಸಹೇೞಿ ಅಪ್ಪಣೆ ಕೊಟ್ಟು ಎಡಬಲನನು ನೋಡಿ ಸಮೀಪದಲ್ಲಿ ನಿಂತಿರುವ ಬಲಾಹಕನೆಂಬ ಸೇನಾಪತಿಯ ಮಗ ಮೇಘನಾದನೆಂಬವನ ಕರೆದು ರಹಸ್ಯವಾಗಿ ಹೇೞಿದ ಮಾತು:— ನೀನು ಪತ್ರಲೇಖೆ ಬರುವ ಪರಿಯಂತವು ಈಬೞಿಯಲ್ಲಿಯೇ ಇದ್ದು ಮಯೂರಕನು ಪತ್ರಲೇಖೆಯ ಕರೆದುಕೊಂಡು ಬಂದಲ್ಲಿ ನೀನು ಅವನಿಗೆ ಹೇೞಿ ಅವನ ಮುಖದಿಂದ ಕಾದಂಬರಿಗೆ ನಾನು ಹೇೞಿದ ಮಾತಾಗಿ ಹೇೞಿಕಳುಹಿಸುವ ವಿವರ:— ಲೋಕದಲ್ಲಿ ಮನುಷ್ಯರ ಪ್ರಕೃತಿಯೆಂಬುದು ಒಬ್ಬರ ಪರಿಚಯವ ಮಾಡುವುದಕ್ಕೂ ಅಂತರಂಗವಿಡುವುದಕ್ಕೂ ಯೋಗ್ಯವಲ್ಲ. ಇವರ ಪ್ರೀತಿಯೆಂಬುದು ಕಾಕತಾಳೀಯ, ಹುಸಿ. ಪರರು ಎಷ್ಟು ವಾತ್ಸಲ್ಯವ ನುಡಿದರೂ ಎಣಿಸುವರಲ್ಲ. ಈಗ ನನ್ನ ಸ್ನೇಹವೆಂಬುದು ಎಲ್ಲವೂ ಕಪಟಗೂಡಿದ ಜಾಲಮಾರ್ಗವಾಯಿತು. ಭಕ್ತಿಯೆಲ್ಲವು ಹುಸಿಯ ನಟನೆಯೆನಿಸಿತು. ನಾನು ಮಾಡಿದ ಆತ್ಮಸಮರ್ಪಣವು ಅತಿವಿನಯಗೂಡಿದ ಧೂರ್ತಲಕ್ಷಣವಾಯಿತು. ಮನಸ್ಸಿನಲಿ ಒಂದು ಬಾಯಲಿ ಒಂದು ಎಂಬುದು ಪ್ರಕಾಶವಾಯಿತು. ಅವೆಲ್ಲವೂ ಅಂತಿರಲಿ; ದೇವತೆಗಳಿಗೂ ದುರ್ಲಭೆಯಾಗಿರುವ ಕಾದಂಬರಿಯು ಒಬ್ಬ ಮನುಷ್ಯಮಾತ್ರದವನಲ್ಲಿ ದಯವ ಮಾಡಿದಳು ಎಂದು ಲೋಕದವರು ನುಡಿವ ಹಾಗಾಯಿತು. ಸವುಳು ನೆಲದಲ್ಲಿ

ಅಮೃತದ ಮಳೆಗರೆದಂತೆ ಆಯಿತು. ಅದು ಅಲ್ಲದೆ ನನ್ನ ಮನಸ್ಸಿಗೆ ಕಾದಂಬರಿಯ ಪ್ರಸಂಗಕಿಂತಲೂ ಮಹಾಶ್ವೇತೆಯ ಸಂಗಡ ಆಡಿದ ಪ್ರಸಂಗಕ್ಕೆ ಲಜ್ಜೆಯಾಗುತಲಿದೆ. ಪೂರ್ವೋತ್ತರವ ವಿಚಾರಿಸಿಕೊಳ್ಳದೆ ನನ್ನಲ್ಲಿ ಇಲ್ಲದ ಗುಣಗಳನುಂಟುಮಾಡಿ ಬಲುಬಗೆಯಲ್ಲಿ ಕಾದಂಬರಿಯ ಸಂಗಡ ಹೇಳುದುದಕ್ಕೆ ಈಗ ಕಾದಂಬರಿಯು ನೀನು ಇಲ್ಲದ ಗುಣಗಳನು ಪಕ್ಷಪಾತದಿಂದ ಕಲ್ಪಿಸಿ ಹೇಳುದೆಯೆಂದು ಆಗಾಗ್ಗೆ ವಿಡಂಬನವ ಮಾಡಿ ನುಡಿಯುತ್ತಿರುವಳು. ಇದಕ್ಕೆ ಇನ್ನೇನು ಮಾಡತಕ್ಕದು ? ಅರಸುಗಳ ಅಜ್ಞೆಯನು ಮೀರುವುದಕ್ಕಾಗದು. ಆದುದರಿಂದ ಅರಸುಗಳನು ಓಲಗಿಸೆ ಶರೀರಮಾತ್ರವೇ ಅರಸುಗಳ ಬಳಿಗೆ ಹೋಗುತ್ತಲಿದೆ; ಮನಸ್ಸು ಕಾದಂಬರಿಯನೆ ಓಲಗಿಸಿರುವುದರಿಂದ ಜನ್ಮಾಂತರಸಹಸ್ರದಲ್ಲಿಯೂ ಕಾದಂಬರಿಯ ಊಳಿಗವ ಮಾಡಿಕೊಂಡು ಇದೆ. ನಾನು ಉಜ್ಜಯಿನಿಯ ಪಟ್ಟಣಕ್ಕೆ ಅವಶ್ಯವಾಗಿ ಹೋದೇನು; ಪ್ರಸಂಗಾಂತರದಲ್ಲಿ ಕೃತಘ್ನರನೆಣಿಸುವಾಗ ಚಂದ್ರಾಪೀಡನೆಂಬ ಪಾಪಿಯ ಮೇಗಣ ಸ್ಮರಣೆ ಇರಲಿ, ಎಂದು ಕಾದಂಬರಿಗೆ ಕೈಮುಗಿದೆನು ಎಂದು ಹೇಳು. ಮಹಾಶ್ವೇತೆಗೆ ಪ್ರದಕ್ಷಿಣವನು ಮಾಡಿ ಪಾದಪ್ರಣಾಮವನು ಮಾಡಿದೆನೆಂದು ಹೇಳು. ಮದಲೇಖೆಗೆ ಕೈಮುಗಿದೆನೆಂದೂ ತಮಾಲಿಕೆಗೆ ಕ್ಷೇಮಾಲಿಂಗನವ ಮಾಡಿಕೊಂಡೆನೆಂದೂ ಹೇಳು. ಕಾದಂಬರಿಯ ಅರಮನೆಯಲ್ಲಿರುವ ಸಕಲ ಪರಿಜನಂಗಳಿಗೂ ಕ್ಷೇಮವ ಕೇಳಿದೆನು ಎಂದು ಹೇಳು. ಈಪ್ರಸಂಗದೊಳಗೊಂದನು ಮರೆಯದೆ ಹೇಳು-ಎಂದು ಮೇಘನಾದನಿಗೆ ಹೇಳಿ, ವೈಶಂಪಾಯನನು ಸಕಲ ದಳ ಮುಂತಾಗಿ ಹಿಂದುಳಿದ ಮಂದಿಯೆಲ್ಲವನು ಕಟ್ಟಿಕೊಂಡು ಮೆಲ್ಲಗೆ ಬರಹೇಳಿ ಕಟ್ಟುಮಾಡಿಸಿ, ತಾನು ಮೊದಲು ನಿರೂಪವ ಕಾಣುವಾಗ ಏರಿದ ಕುದುರೆ ಸಹವಾಗಿಯೆ ದಾರಿವಿಡಿದು ಕುದುರೆಯ ನಡೆಸಲಾಗಿ; ನಾಲ್ಕುದಿಕ್ಕಿನಲ್ಲಿಯು ಹೂಂಕಾರದಿಂದ ಕೈಲಾಸಪರ್ವತವ ಕದಲಿಸುವಂತೆ, ಕೊಳಗುಗಳ ಕುಣಿತದಿಂದ ಭೂಮಿಯ ಖಂಡಿಸುವಂತೆ, ರಾವುತರ ಕೈಯೊಳಿರುವ ನೇಜಯಗಳಿಂದ ವನವೇ ಸಂಗಡ ಬರುತ್ತಲಿರುವಂತೆ, ಬಲು ಕುದುರೆಗಳ ಬಲವು ದಿಕ್ಕುಗಳ ವ್ಯಾಪಿಸಿಕೊಂಡು ನಡೆಯಿತು. ಚಂದ್ರಾಪೀಡನು ತನ್ನ ಕುದುರೆಯ ಹಣ್ಣಳದ ಮೇಲೆ ಕೈಯಿರಿಸಿಕೊಂಡು ಬರುವ ನಿರೂಪವ ತಂದ ಊಳಿಗದವನನು ಉಜ್ಜಯಿನಿ ಪಟ್ಟಣದ ವೃತ್ತಾಂತವ ಕೇಳುತಲೆ ನಡೆದು, ಸಾಯಂಕಾಲದಲ್ಲಿ ವನಮಧ್ಯದೊಳಿರುವ ಒಂದು ಕಾಳಿಕಾದೇವಿಯ ಗುಡಿಯ ಸೇರಿ, ಅಬಳಿಯಲ್ಲಿ ಮಂತ್ರಸಿದ್ಧಿಯ ನಿಮಿತ್ತವಾಗಿ ತಪವ ಮಾಡಿಕೊಂಡಿರುವ ಯೋಗಿಯೊಬ್ಬ

ನನು ಕಂಡು, ಅವನ ಕೂಡೆ ಕೆಲವು ಹೊತ್ತು ಪ್ರಸಂಗವನುಮಾಡಿ, ಆರಾತ್ರಿ ಅಲ್ಲಿ ಗುಡಾರವ ಹಾಕಿಸಿಕೊಂಡು, ಆಗುಡಾರದ ಸಮೀಪದಲ್ಲಿಯೇ ಇಂದ್ರಾಯುಧವನು ಕಟ್ಟಿಸಿ, ಸಕಲವಾಗಿದ್ದ ಪಾಳೆಯದ ಆನೆ ಕುದುರೆಗಳು ಭೋಗವ ಮೇದುವು, ಸಕಲವಾದ ಕಾವಲುಕಟ್ಟಳೆಗಳು ಅಮರಿದುವು ಎಂದು ಕೇಳಿದ ಮೇಲೆ ಹಾಸಿಕೆಯಮೇಲೆ ಒರಗಿಕೊಂಡು, ಕಾದಂಬರಿಯ ಅಗಲಿಬಂದ ಮನಸ್ಸಿನ ಸಿಬ್ಬತಿಯಿಂದ ಎಂದಿನ ರೀತಿಯಲ್ಲಿ ಮಾತನಾಡಿಕೊಂಡಿರದೆ ಸಕಲವಾಗಿದ್ದ ಅರಸುಮಕ್ಕಳನು ಗುಱಿಕಾಱರನು ಊಳಿಗದವರನು ಕಳುಹಿಸಿ, ಬಹು ಪ್ರೀತಿಯವರಾಗಿ ಕಳುಹಿಸುವುದಕ್ಕಾಗದೆ ಸಮೀಪದೊಳಿರುವವರ ಸಂಗಡ ಮಾತನಾಡದೇ ಮುಸುಕಿಟ್ಟುಕೊಂಡು ಮನಸ್ಸಿನೊಳಗೆ ಕಿಂಪುರುಷದೇಶವನು, ಅಲ್ಲಿರುವ ಹೇಮಕೂಟಪರ್ವತವನು, ಅಲ್ಲಿರುವ ಮಹಾಶ್ವೇತೆಯ ವಾತ್ಸಲ್ಯವನು, ಕಾದಂಬರಿಯ ದರ್ಶನದ ಒಂದತಿಶಯವನು, ಮದಲೇಖೆಯ ಪರಿಚಯವನು, ತಮಾಲಿಕೆಯ ದರ್ಶನವನು, ಮಯೂರಕ ಬಂದುದನು, ಕುಳಿರ್ವನೆಯ ಅತಿಶಯವನು ನೆನೆನೆನೆದು ನಿಡುಸುಯ್ಯುತ, ಶೇಷವೆಂಬ ಕಂಠಮಾಲೆಯಲ್ಲಿ ಅತಿ ಪ್ರೀತಿ ಮಾಡುತ, ಕಾದಂಬರಿಯ ಸಮೀಪದಲ್ಲಿದ್ದು ಹಿಂದುಳಿದು ಬರುವ ಪತ್ರಲೇಖೆಯನು ಭಾಗ್ಯವತಿಯೆಂದೆಣಿಸುತ್ತ, ಈಬಗೆಯಲ್ಲಿ ನಿದ್ರೆಯಿಲ್ಲದೆ ಆರಾತ್ರಿಯೆಲ್ಲವನು ಕಳೆದು, ಬೆಳಗಾದ ಮೇಲೆ ಅಲ್ಲಿರುವ ಯೋಗೀಶ್ವರನಿಗೆ ಸರ್ವಾಭೀಷ್ಟವನು ಕೊಟ್ಟು, ಪಯಣಗತಿಯಲ್ಲಿ ಉಜ್ಜಯಿನಿಯ ಪಟ್ಟಣವನ್ನು ಸೇರಿ, ಅಲ್ಲಿ ರಾಜಕುಮಾರನು ಬಂದನು ಎಂಬುದನು ಕೇಳಿ ಇದಿರಾಗಿ ಬಂದ ಸಕಲರಾದ ಜನರನು ಅವರವರ ಮೇರೆಯಱಿತು ಮನ್ನಿಸುತ ರಾಜಬೀದಿಯಲ್ಲಿ ಬರುತ್ತಿರಲಾಗಿ; ತಾರಾಪೀಡನು ಓಲಗವಾಗಿರುವ ಸಮಯದಲ್ಲಿ ಈಸುದ್ದಿಯನು ಕೇಳಿ, ಕ್ಷೀರಸಮುದ್ರದ ತೆರೆಗಳನೊದೆದುಕೊಂಡು ಮಂದರಪರ್ವತವೇಳುವಂತೆ ಜಾರಿದ ದುಕೂಲವ ಹೊದಿಸಿಕೊಳುತ್ತ ಮುತ್ತುಗಳನುಗಿಸಿಕೊಂಡು ಸಮುದ್ರದಿಂದೇಳುವ ಶುಕ್ತಿಕೆಗಳಂತೆ ಆನಂದಾಶ್ರುವನುಗಿಸುತ್ತ, ಸಮೀಪದಲ್ಲಿ ದಿವ್ಯವಸ್ತ್ರದಿವ್ಯಾನುಲೇಪನಕಟಕಮಕುಟಾದಿಗಳ ಧರಿಸಿ ಛತ್ರಚಾಮರಾದಿರಾಜಲಕ್ಷಣಂಗಳುಂಟಾಗಿ ನೆರೆತು ಇರುವುದರಿಂದ ಕೈಲಾಸದಂತೆ ಕ್ಷೀರಸಾಗರದಂತೆ ಇರುವ ದಿಕ್ಕಿನ ಅರಸುಗಳ ಸಹವಾಗಿ ಕಾಲುನಡೆಯಲಿ ಬೀದಿಗೆ ಬಂದು ನೋಡುತಿರಲಾಗಿ; ತಂದೆ ಬಂದಿದ್ದುದನು ಕಂಡು, ಚಂದ್ರಾಪೀಡನು ಕುದುರೆಯಿಂದಿಳಿದು ವಿನಯಗೂಡಿ ಸಮೀಪವ ಸೇರಿ ಅಡ್ಡಬೀಳಲಾಗಿ; ತಾರಾಪೀಡನು ಕೈಗಳ ನೀಡಿ ಸಮೀಪಕ್ಕೆ ಕರೆದು, ಗಾಢಾಲಿಂಗನವನು ಮಾಡಿಕೊಂಡು, ಕ್ಷೇಮವನು ಕೇಳಿ ಅರಮನೆಯ ಒಳಕ್ಕೆ ಕಳುಹಿದನು.

ಆಸಮಯದಲ್ಲಿ ಅಲ್ಲಿ ಇರುವ ನಿಯೋಗಿಗಳು ಊಳಿಗದವರು ಮೊದಲಾಗಿ ಕೈಮುಗಿದವರೆಲ್ಲರನು ಯಥೋಚಿತವಾಗಿ ಮಾತನಾಡಿಸಿ ವಿಲಾಸವತಿಯ ಅರಮನೆಗೆ ಹೋಗಿ ವಿಲಾಸವತಿಗೆ ಅಡ್ಡಬಿದ್ದು, ಅಲ್ಲಿರುವ ಸಕಲಜನರುಗಳನು ಮನ್ನಿಸಿ, ತನ್ನ ಅರಮನೆಯಲ್ಲಿ ಸ್ತ್ರೀಸಮೇತನಾಗಿ ಸುಖದಲ್ಲಿ ಇದ್ದನು.

ಎಂಬಲ್ಲಿಗೆ

ಕನ್ನಡ ವಚನಕಾದಂಬರಿ

ಪೂರ್ವ ಭಾಗಂ

ಸಂಪೂರ್ಣಂ